ರಾಷ್ಟ್ರ ನಿರ್ಮಾಣದ ಜವಾಬ್ದಾರಿಯಲ್ಲಿ ತನ್ನ ಸ್ಥಾನ ಮುಖ್ಯವಾದದ್ದು ಎಂದು ತಿಳಿದಿದ್ದರು. ರಾಷ್ಟ್ರಹಿತಕ್ಕೆ ಧಕ್ಕೆಯಾಗುವ ಯಾವುದೇ ವಿಷಯಗಳಲ್ಲಿ ದುರ್ಬಲ ನೀತಿ ಹೊಂದಿರಬಾರದೆಂಬ ಸುಭಾಷ್‌ರ ದಿಟ್ಟ ನಿಲುವಿನ ಪ್ರತಿಧ್ವನಿಯಾಗಿತ್ತು. ಇವರ ಈ ಮಾತಿನಿಂದ ಕಾಂಗ್ರೇಸ್‌ನ ಬಲಹೀನ ನಾಯಕತ್ವ ದುರ್ಬಲ ಒಪ್ಪಂದಗಳು ಸ್ವಾಭಿಮಾನ ಶೂನ್ಯ ವರ್ತನೆಗೆ ಪ್ರತಿಯಾಗಿ ಆತ್ಮಾಭಿಮಾನದ ಸ್ವರಾಜ್ಯ ಹೋರಾಟಕ್ಕೆ ಬಲವನ್ನು ತುಂಬಿದವರು ಸುಭಾಷರು.

ಸುಭಾಷ್ ಚಂದ್ರಬೋಸ್‌ರವರು ಕಷ್ಟಪಟ್ಟು ಗಳಿಸಿದ್ದ ಐ.ಸಿ.ಎಸ್ ಪದವಿಯನ್ನು ತಿರಸ್ಕರಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬಂದರು. ಇವರಿಗೆ ರಾಜಕೀಯ ಚಿಂತನೆಯ ವೈಶಾಲ್ಯತೆ ಆ ಕಾಲಮಾನದಲ್ಲಿ ಯಾರೋಬ್ಬರಲ್ಲೂ ಇರಲಿಲ್ಲ ಅಷ್ಟು ಬುದ್ಧಿವಂತರಾಗಿದ್ದರು.

· ಆಸ್ಟ್ರೀಯಾ, ಇಂಗ್ಲೇಂಡ್ ಜಪಾನ್ ಸೇರಿದಂತೆ ಹತ್ತಾರು ರಾಷ್ಟ್ರಗಳು ಸೇರಿ ಭಾರತೀಯ ಸ್ವರಾಜ್ಯ ಹೋರಾಟದವನಿಗೆ ತೀವ್ರತೆ ತಂದಿದ್ದ ಭೋಸರು ತಾನು ನಂಬಿದ್ದ ಕ್ರಾಂತಿ ಪಥದಲ್ಲಿ ಎಂದೂ ರಾಜಿ ಮಾಡಿದವರಲ್ಲ.

· ಶೀಘ್ರವಾಗಿ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಅನೇಕ ವಾದಗಳನ್ನು ಮಂಡಿಸಿದ್ದರು. ಬೋಸ್‌ರವರ ನಿಲುವುಗಳಲ್ಲಿ ಕಾಂಗ್ರೇಸ್ ಮಂದಗಾಮಿ ಗುಂಪಿಗೆ ಅಸಹನೀಯವಾಗಿತ್ತು. ಸ್ವತಃ ಗಾಂಧೀಜಿಯವರೇ ಹಲವು ಬಾರಿ ಟೀಕಿಸಿದ್ದರು ಅವರಿಗೆ ದೂರಗಾಮಿ ಚಿಂತನೆ ಇಲ್ಲ ಎಂಬ ಆರೋಪ.

· ನಂತರದಲ್ಲಿ 1938 ರಲ್ಲಿ ಭಾರತವು ವಿಭಜನೆಯಾಗಿತ್ತು ಮುಸ್ಲಿಂ ಲೀಗ್ ಬ್ರಿಟಿಷರ ತಂತ್ರಗಾರಿಕೆಯ ಕುರಿತು ಮೊದಲ ಬಾರಿಗೆ ಬಹಿರಂಗವಾಗಿ ಎಚ್ಚರಿಸಿದ್ದರು ಸಹ ಮಂದಗಾಮಿಗಳಿಗೆ ಕೇಳಿಸಲಿಲ್ಲ. ಪರಿಣಾಮವಾಗಿ 9 ವರ್ಷದಲ್ಲೇ ದೇಶ ವಿಭಾಗವಾಯಿತು. ಬೋಸ್‌ರವರ ದೂರಗಾಮಿ ಚಿಂತನೆಗಳಿಗೂ ಕವಡೆ ಕಿಮ್ಮತ್ತಿನ ಬೆಲೆ ಕೊಡದೇ ಕಾಂಗ್ರೇಸ್‌ನಿಂದ ಸ್ವತಃ ಹೊರ ಬಂದವರು ಸುಭಾಷ್ ಚಂದ್ರಬೋಸ್.

**<u>ಸ್ವರಾಜ್ಯ ಪಕ್ಷ ಸ್ಥಾಪನೆಯಲ್ಲಿ ಬೋಸ್‌ರವರು</u>**

ಕಾಂಗ್ರೇಸ್‌ನ ಡೋಲಾಯಮಾನ ನೀತಿಗಳಿಗೆ ಬೇಸತ್ತು ಚಿಂತರಂಜನ್ ದಾಸ್‌ರಿಂದ ಸ್ವರಾಜ್ಯ ಪಕ್ಷ ಸ್ಥಾಪನೆ ಬೋಸರು ದಾಸರ ಜೊತೆಗೆ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು ನಂತರ 1923 ರಲ್ಲಿ ಅಕ್ಟೋಬರ್ ನಿಂದ ದಾಸರು ಸ್ಥಾಪಿಸಿದ್ದ "ಫಾರ್ವರ್ಡ್" ದಿನಪತ್ರಿಕೆಯ ನಿರ್ವಹಣೆಯ ಜವಾಬ್ದಾರಿಯಾಗಿದ್ದರು. 1925ರ ಜೂನ್ 16 ದಾಸ್‌ರವರು ನಿಧನ ಹೊಂದಿದ್ದರು.

- 1927ರ ನವೆಂಬರ್‌ನಲ್ಲಿ ಬಂಗಾಳ ಪ್ರದೇಶದ ಕಾಂಗ್ರೇಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು.
- ಹತ್ತಾರು ಚಳುವಳಿ ನೇತೃತ್ವದಲ್ಲಿ ಅಖಿಲಾ ಭಾರತ ಟ್ರೇಂಡ್ ಯುನಿಯನ್ ಕಾಂಗ್ರೇಸ್‌ನ ಅಧ್ಯಕ್ಷರಾಗಿ ಆಯ್ಕೆಯಾದರು.
- ಈ ಸ್ವರಾಜ್ಯ ಪಕ್ಷದ ಸ್ಥಾಪನೆಗಾಗಿ ಅನೇಕ ರಾಷ್ಟ್ರಗಳೊಡನೆ ಭಾರತದ ಪರವಾಗಿ ಪ್ರಚಾರ ಮಾಡಿದರು.
- 1926 ರಲ್ಲಿ ಏಪ್ರಿಲ್ 8 ರಂದು ಭಾರತಕ್ಕೆ ಬಂದರು.

**<u>ರಾಜಕೀಯ ಅನುಬವದ ಒಳನೋಟ</u>**

* ಕಾಂಗ್ರೇಸ್‌ನ ಅಖಿಲಾ ಭಾರತ ಅಧಿವೇಶನದ ಅಧ್ಯಕ್ಷತೆ 1938 ಫೇಬ್ರವರಿ 19 ರಂದು ಹರಿಪುರದಲ್ಲಿ ನಡೆಯಿತು. ಇವರು ವಿದೇಶಿಯರ ರಾಜಕೀಯವನ್ನು ತಿಳಿದಿದ್ದರಿಂದ ಬ್ರಿಟಿಷರ 'ಒಡೆದು ಆಳುವ ನೀತಿ' ಕುರಿತು ಭಾಷಣವನ್ನು ಮಾಡಿದರು.

* ಫಾರ್ವರ್ಡ್ ಬ್ಲಾಕ್ ಸ್ಥಾಪನೆ 1940 ಜೂನ್ 18 ರಂದು ಡಾ|| ಹೆಗಡೆವಾರ್ ಜೊತೆ ಭೇಟಿ ಮಾಡಿ ಸಾಧ್ಯವದಷ್ಟು ಮಾತುಕತೆಯನ್ನು ಮಾಡಿದರು. ನಂತರ ಮೂರು ದಿನಗಳಲ್ಲಿ ಹೆಗಡೆವಾರ್‌ರವರು ನಿಧನರಾದರು.

* ಇದಾದ ನಂತರ ಬೋಸ್‌ರವರು ಕಾಣೆಯಾಗಿದ್ದಾರೆಂಬ ಸುದ್ದಿ 1941 ಜನವರಿ 26 ಕ್ಕೆ ಆದರೆ ಬೋಸ್‌ರವರು ಕಾಬೂಲ್ ಮೂಲಕ ಬರ್ಲಿನ್‌ಗೆ ಸೇರಿದರು. ಅಲ್ಲಿ ಸೈನಿಕ ಕಾರ್ಯಾಚರಣೆ ಮಾಡಿದರು.

* ಫ್ರೀ ಇಂಡಿಯಾ ಸೆಂಟರ್" 1941 ನವೆಂಬರ್ 9ಕ್ಕೆ ಉದ್ಘಾಟಿಸಿದರು.

* ಆಜಾದ್ ಹಿಂದ್ ಲಾಂಛನ' ಜೈಹಿಂದ್ ಘೋಷಣೆ ಇದರಿಂದ ಬೋಸ್‌ರವರಿಗೆ 'ನೇತಾಜಿ' ಎಂದು ಬಿರುದು ಬಂದಿತು.

**<u>ಬೋಸ್ ಮತ್ತು ಗಾಂಧೀಜಿ</u>**

ಬೋಸ್ ಮತ್ತು ಗಾಂಧೀಜಿಯವರ ನಡುವೆ ಒಂದು ಬಹುದೊಡ್ಡ ಸ್ನೇಹ ಸಂಬಂಧವಿತ್ತು. ಬೋಸ್‌ರವರು ಗಾಂಧೀಜಿಯವರ ಬಹುದೊಡ್ಡ ಅಭಿಮಾನಿಯಾಗಿದ್ದರು. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸರ್ವೋಚ್ಚ ನಾಯಕ ಬೋಸ್ ಭಾವಿಸಿದ್ದರು.

ಬೋಸ್‌ರವರು ಕಾಂಗ್ರೇಸ್ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡುವುದಕ್ಕೆ ಪತ್ರ ವ್ಯವಹಾರದಲ್ಲಿ ಬೋಸ್‌ರವರು ಗಾಂಧಿ ಮೇಲಿನ ಅಭಿಪ್ರಾಯವನ್ನು ತಿಳಿದರು ಏನೆಂದರೆ, ಗಾಂಧೀಜಿಯವರ ಮೇಲೆ ನನಗೆ ಬಹಳಷ್ಟು ಗೌರವವಿದೆ ಅದನ್ನು ಯಾರಿಂದಲೂ ಕಡಿಮೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

· ನಂತರ ಅಹಿಂಸೆಯಲ್ಲಿ ಸಂಪೂರ್ಣ ನಂಬಿಕೆ ಇಲ್ಲದಿದ್ದರಿಂದ ಬೋಸ್‌ರವರು "ಇಂಡಿಯನ್ ನ್ಯಾಷನಲ್ ಆರ್ಮಿ" (I.N.A) ಯನ್ನು ಸ್ಥಾಪಿಸಿದರು.

ಈ ಐ.ಎನ್.ಎ ಯ ನಾಲ್ಕು ಧಳಗಳಲ್ಲಿ ಮೂರು ಧಳಕ್ಕೆ ಹೆಸರುಗಳನ್ನು ಇಟ್ಟರು.
ಅವುಗಳೆಂದರೆ; ಗಾಂಧೀಜಿ, ಜವಹರ್‌ಲಾಲ್ ನೆಹರು, ಮೌಲಾನಾ ಆಜಾದ್.

* ಬೋಸ್‌ರವರು ಅತಿ ಹೆಚ್ಚು ಗೌರವವನ್ನು ಗಾಂಧೀಜಿಯವರಿಗೆ ನೀಡುತ್ತಿದ್ದರು
* ಗಾಂಧೀಜಿಯವರನ್ನು, 'ರಾಷ್ಟ್ರಪಿತಮಹ' ಎಂದು ಮೊದಲು ಹೇಳಿದವರು ಬೋಸ್‌ರವರು.
* ಗಾಂಧೀಜಿಯವರಿಗೆ ಬೋಸ್‌ನ ಮೇಲಿನ ಅಭಿಪ್ರಾಯ ಹೀಗಿತ್ತು. "ನಮ್ಮ ತ್ಯಾಗದ ಸಮಾರ್ಥ್ಯ ಅವರಿಗೆ ಸದಾ ತಿಳಿದಿತ್ತು ಅವರು ವ್ಯವಹಾರ ಚಾತುರ್ಯ, ಸೇನೆಗೆ ಮುನ್ನೆಡೆಸುವ ತಾಕತ್ತು ಇವರಿಗೆ ಇತ್ತು ಎಂದು ತಿಳಿಸಿದರು"

## ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಬೋಸ್‌ರವರ ಪಾತ್ರ :

* ಬೋಸ್‌ರವರು ಸ್ವಾತಂತ್ರ್ಯ ಚಳುವಳಿಯನ್ನು ಪ್ರಚಾರ ಮಾಡಲು ಯೋಗ್ಯವಾದ ವ್ಯಕ್ತಿ ಎಂದು ರಾಶ್ ಬಿಹಾರಿ ಬೋಸ್ ತಿಳಿದು ಅವರನ್ನು ಪೂರ್ವ ಏಷ್ಯಕ್ಕೆ ಆಹ್ವಾನಿಸಿದರು.
* 1943ನೇ ಅಕ್ಟೋಬರ್ 21 ರಂದು ಸ್ವಾತಂತ್ರ್ಯ ಮಂಡಳಿಯ ಅಧ್ಯಕ್ಷರಾಗಿ ಆಜಾದ್ ಹಿಂದ್ ತಾತ್ಕಲಿಕ ಸರ್ಕಾರವನ್ನು ಘೋಷಿಸಿದರು.
* ಚಳುವಳಿಯ ಕಾರಣದಿಂದ ಭಾರತ ರಾಷ್ಟ್ರೀಯ ಸೇನೆಯನ್ನು ಕಟ್ಟಿದರು.
* ಭಾರತವು ಸ್ವಾತಂತ್ರ್ಯವಾಗಬೇಕಾದರೆ ಅದು ಯುದ್ಧದಿಂದ ಮಾತ್ರ ಸಾಧ್ಯ ಎಂದು ತಿಳಿಸಿದ್ದರು.
* **"ಜೈ ಹಿಂದ್ ಚಲೋ ದಿಲ್ಲಿ"** ಎಂಬ ವೀರ ಘೋಷಣೆಗಳನ್ನು ಬಳಕೆಗೆ ತಂದರು.
* ಇವರು ಈ ಯುದ್ಧ ಮುಖ್ಯ ಸೇನಾಧಿಪತ್ಯವನ್ನು ತಾವೇ ವಹಿಸಿಕೊಂಡರು.
* ಆ ನಂತರ ಬ್ರಿಟಿಷರ ಯುದ್ಧದಲ್ಲಿ ಇವರು ಜಯಗಳಿಸಿದ್ದರಿಂದ ಆಜಾದ್ ಹಿಂದ್ ತಾತ್ಕಲಿಕ ಸರ್ಕಾರದ ಮೂಲ ಕೇಂದ್ರವನ್ನು ಸಿಂಗಾಪುರದಿಂದ ರಂಗೂನಿಗೆ ವಹಿಸಿದರು.

## ಸ್ವಾತಂತ್ರ್ಯ ಸಂಗ್ರಾಮದ ಮಹತ್ವ

ಭಾರತ ರಾಷ್ಟ್ರೀಯ ಸೇನೆಯ ಅಧಿಕಾರಿಗಳನ್ನು ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಿದಾಗ ಸೇನೆಯ ಮಹತ್ವ ಎಲ್ಲರಿಗೂ ತಿಳಿಯಿತು. ಇವರುಗಳನ್ನು ಸ್ವಾತಂತ್ರ್ಯ ಯೋಧರೆಂದು ಹೊಗಳಿದರು. ಇದರಿಂದ ಭಾರತದ ಕೋಟಿ ಕೋಟಿ ಜನರ ಮನಸ್ಸಿನಲ್ಲಿ ಭಾರತ ರಾಷ್ಟ್ರೀಯ ಸೈನ್ಯವು ಶಾಶ್ವತ ಸ್ಥಾನವನ್ನು ಪಡೆದಿದೆ. ವಿಶ್ವದ ದೃಷ್ಟಿಯಲ್ಲಿ ಭಾರತದ ಗೌರವ ಘನತೆಗಳು ಹೆಚ್ಚಾಯಿತು. ಇದು ಭಾರತ ರಾಷ್ಟ್ರೀಯ ಸೇನೆಯ ಕೊಡುಗೆಯಾಗಿದೆ.

## ವಿಮಾನ ಅಪಘಾತದಲ್ಲಿ ನೇತಾಜಿ

ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರು ವಿಮಾನ ಅಪಘಾತದಲ್ಲಿ ಮೃತಪಟ್ಟಿರುವ ಕುರಿತು ತಮ್ಮ ಬಳಿ ಸಾಕ್ಷಿ ಇದೆ ಎಂದು ಸಂಶೋಧಕರಾದ ಆಶಿಷ್ ರೇ ರವರು ತಿಳಿಸಿದ್ದಾರೆ. 1945 ಆಗಸ್ಟ್ 18 ರಂದು ತೈವಾನ್‌ನ ತೈಪೆಯಲ್ಲಿ ಸಂಭವಿಸಿದ ಈ ವಿಮಾನ ಅಪಘಾತದಲ್ಲಿ ಬೋಸ್‌ರವರು ಮೃತಪಟ್ಟಿದ್ದಾರೆ. ಈ ಮೂರು ವರದಿಗಳು ದೃಢಪಡಿಸಿವೆ. ಇವರು ಸೋವಿಯತ್ ಒಕ್ಕೂಟ ಪ್ರವೇಶಿಸಿರುವ ಸಾಧ್ಯತೆ ಇಲ್ಲ. ಮತ್ತು ಅಲ್ಲಿಯವರು ಖೈದಿಯಾಗಿರಲಿಲ್ಲ ಎಂದು ಹೇಳಿದ್ದಾರೆ.

* ಭಾರತವನ್ನು ಬ್ರಿಟಿಷರಿಂದ ಮುಕ್ತ ಗೊಳಿಸಲು ಕಮ್ಯೂನಿಸ್ಟ್ ರಾಷ್ಟ್ರವಾದ ರಷ್ಯಾ ಸಹಾಯ ಮಾಡಬಹುದೆಂದು ನೇತಾಜಿ ವಿಸ್ವಾಸ ಇರಿಸಿಕೊಂಡಿದ್ದರು.

* ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವ ಕೆಲಸವನ್ನು ಸೋವಿಯತ್ ಒಕ್ಕೂಟ ಮಾತ್ರ ಸಹಾಯ ಮಾಡುತ್ತದೆ ಎಂದು ಅರಿತಿದ್ದರು.
* ನೇತಾಜಿಯವರ ಸಾವಿನ ಕುರಿತು ಭಾರತದ ನಿಲುವು ಭಾವನಾತ್ಮಕವಾಗಿದೆ. ಆದರೆ ಸತ್ಯವನ್ನು ತಿಳಿಯಲು ಇದರಿಂದ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ■

******************************

## –: ರೆಡ್‌ಕ್ರಾಸ್ :–

**ಪ್ರತಿಭಾ ಜಿ.ಎಂ.** ತೃತೀಯ ಬಿ.ಎ (ಹೆಚ್.ಎಸ್.ಕೆ)

ಸ್ವಿಡ್ಜರ್ಲೆಂಡ್ ದೇಶದ ಜೀನ್ ಹೆನ್ರಿಡ್ಯೂನಾಂಟ್‌ರವರು 1863 ರಲ್ಲಿ ಅಂತರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾದ "ರೆಡ್‌ಕ್ರಾಸ್" ಅನ್ನು ಜಿನೀವಾದಲ್ಲಿ ಸ್ಥಾಪಿಸಿದರು. ಇವರ ಜನ್ಮ ದಿನವಾದ ಮೇ 8 ರಂದು ಪ್ರತಿವರ್ಷ "ವಿಶ್ವ ರೆಡ್‌ಕ್ರಾಸ್ ದಿನ"ವೆಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ.

**ರೆಡ್‌ಕ್ರಾಸ್ ಮೂಲ ತತ್ವಗಳು :**

1. ಮಾನವೀಯತೆ 2. ನಿಷ್ಪಕ್ಷಪಾತ 3. ತಟಸ್ಥ 4. ಸ್ವಾತಂತ್ರ್ಯ 5. ಸ್ವಯಂಸೇವೆ 6. ಏಕತೆ 7. ವಿಶ್ವ ವ್ಯಾಪಕತೆ

**ರೆಡ್‌ಕ್ರಾಸ್‌ನ ಕಾರ್ಯಕ್ರಮಗಳು:** ಯುದ್ಧಗಳಿಂದ ಗಾಯಗೊಂಡ ಸೈನಿಕರುಗಳಿಗೆ ಉಪಚರಿಸುವುದು ಸಂತ್ರಸ್ಥರ ನೋವು ಕಡಿಮೆ ಮಾಡುವುದು. ಆರೋಗ್ಯ ಕಾರ್ಯಕ್ರಮಗಳು, ರಕ್ತನಿಧಿಗಳನ್ನು ಸ್ಥಾಪಿಸುವುದು, ರಕ್ತದಾನ ಶಿಬಿರಗಳನ್ನು ನಡೆಸುವುದು ಹಗೂ ರಕ್ತದ ಗುಂಪುಗಳನ್ನು ಮಾಡುವುದು, ಪ್ರವಾಹ, ಕ್ಷಾಮ, ಭೂಕಂಪಕ್ಕೊಳಗಾದವರಿಗೆ ಸಹಾಯ ಮಾಡುವುದು, ಸಂತ್ರಸ್ಥರಿಗೆ ಕುಡಿಯುವ ನೀರು, ಆಹಾರ, ಔಷಧಿಗಳು, ಬಟ್ಟೆಬರೆಗಳ ಪೂರೈಕೆ, ಅಂಗವಿಕಲರಿಗೆ ಸಹಾಯ ಹಸ್ತವನ್ನು ನೀಡುವುದು ಮತ್ತು ಸಾರ್ವಜನಿಕರಿಗೆ ಉಪಯುಕ್ತ ಇತರೆ ಚಟುವಟಿಕೆಗಳನ್ನು ನಡೆಸುವುದು ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪ್ರಮುಖವಾದವುಗಳಾಗಿವೆ. ಶಾಲಾ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿರುವ ಮತ್ತು ಯುವ ರೆಡ್‌ಕ್ರಾಸ್ ಘಟಕಗಳ ವಿದ್ಯಾರ್ಥಿಗಳು ಕೂಡ ಇದರಲ್ಲಿ ಭಾಗವಹಿಸಲು ಅವಕಾಶವಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರತಿವರ್ಷ ರೆಡ್‌ಕ್ರಾಸ್ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ಭಾರತದ ರಾಷ್ಟ್ರಪತಿಗಳು ಅಧ್ಯಕ್ಷರಾಗಿದ್ದು, ರಾಜ್ಯ ಶಾಖೆಗೆ ರಾಜ್ಯಪಾಲರು, ಜಿಲ್ಲಾ ಶಾಖೆಗೆ ಜಿಲ್ಲಾಧಿಕಾರಿಗಳು ಹಾಗೂ ತಾಲ್ಲೂಕು ಶಾಖೆಗೆ ತಹಶಿಲ್ದಾರರು/ದಂಡಾಧಿಕಾರಿಗಳು ಅಧ್ಯಕ್ಷರಾಗಿ ಸಭಾಪತಿ, ಗೌರವ ಖಜಾಂಚಿ (ಚುನಾಯಿತ) ಹಾಗೂ ಪ್ರಧಾನ ಕಾರ್ಯದರ್ಶಿಗಳು ಕಾರ್ಯನಿರ್ವಹಿಸುತ್ತಾರೆ.

ಭಾರತದ ನಾಗರೀಕರು ನಿಗದಿತ ಶುಲ್ಕ ನೀಡುವ ಮೂಲಕ ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯರಾಗಬಹುದು ಮತ್ತು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಬಹುದು.

**ರೆಡ್‌ಕ್ರಾಸ್ ಲಾಂಛನ:** ಜಿನಿವಾ ಒಪ್ಪಂದದ ಅನ್ವಯ 1864 ರಲ್ಲಿ ಅಂಗೀಕರಿಸಿದ ಬಿಳುಪಿನ ಹಿನ್ನಲೆಯಲ್ಲಿ ಕೆಂಪು ಕ್ರಾಸ್ ಲಾಂಛನವನ್ನು ಭಾರತದಲ್ಲಿ ಉಪಯೋಗಿಸಲಾಗುತ್ತದೆ. ಈ ಲಾಂಛನವನ್ನು ಬೇರೆಯವರು ಉಪಯೋಗಿಸಿದರೆ ಅದು ಶಿಕ್ಷಾರ್ಹ ಅಪರಾಧವಾಗುವುದು.

**ನೋಬೆಲ್ ಪ್ರಶಸ್ತಿಗಳು:** ಪ್ರಪಂಚದಲ್ಲಿ ರೆಡ್‌ಕ್ರಾಸ್ ಸಂಸ್ಥಾಪಕರು ಸೇರಿದಂತೆ ಒಟ್ಟು ನಾಲ್ಕು ಬಾರಿ ನೋಬೆಲ್ ಶಾಂತಿ ಪ್ರಶಸ್ತಿ ಪಡೆದ ಏಕೈಕ ಸಂಸ್ಥೆ 'ರೆಡ್‌ಕ್ರಾಸ್' ನಿಸ್ವಾರ್ಥ ಸಂದ ಗೌರವ ಎಂದು ಬಣ್ಣಿಸಬಹುದಾಗಿದೆ.■

---

# "ದೇಶದ ಅಭಿವೃದ್ಧಿಗೆ ಯುವ ಜನತೆಯ ಪಾತ್ರ"

ಶಶಾಂಕ್ ಸಿಂಧ್ಯಾ ಎ. III rd B.A (H.E.P)

ಒಂದು ದೇಶದ ಯುವ ಜನತೆ ಆ ದೇಶದ ಅಭಿವೃದ್ಧಿಯಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ದೇಶದಲ್ಲಿ ಯುವ ಜನತೆಯ ಪ್ರಮಾಣ ಹೆಚ್ಚಾದಂತೆ ದೇಶ ಬಲಿಷ್ಠವಾಗುತ್ತ ಹೋಗುತ್ತದೆ. ಅಂತೆಯೇ ಭಾರತವು ಕೂಡ ಅತೀ ಹೆಚ್ಚು ಯುವಕರನ್ನು ಹೊಂದಿದೆ ಅರ್ಥಾತ್ ನಮ್ಮ ದೇಶದ ಒಟ್ಟು ಜನಸಂಖ್ಯೆಯು ಶೇ.34.33% ಯುವ ಜನತೆಯನ್ನು ಹೊಂದಿದೆ. ಯುವ ಜನತೆಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ದೇಶ ಅತೀ ವೇಗವಾಗಿ ಅತ್ಯುನ್ನತ ಸ್ಥಾನಕ್ಕೆ ಹೋಗುವುದು. ನೂರಕ್ಕೆ ನೂರು ಸತ್ಯ. ಹೀಗಿದ್ದು ಭಾರತ ಏಕೆ ಇನ್ನು ಆಮೆಗತಿಯಲ್ಲಿ ಅಭಿವೃದ್ಧಿ ಹೋದುತ್ತಿದೆ? ಯುವಶಕ್ತಿಯ ಪ್ರಮಾಣ ಹೆಚ್ಚಿದರೆ ಏಕೆ ಇಂತಹ ಸ್ಥಿತಿ? ಅವಲೋಕನ ಮಾಡಿದರೆ ಗೊತ್ತಾಗುವುದಿಷ್ಟೇ ಯುವಶಕ್ತಿಯ ಉಪಯೋಗ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಅರ್ಥಾತ್ ಯುವಜನತೆ ತಮ್ಮ ಜೀವನವನ್ನು ದೇಶಕ್ಕೋಸ್ಕರ ಸದ್ವಿನಿಯೋಗ ಮಾಡುತ್ತಿಲ್ಲ. ಹಾಗಾದರೆ ನಮ್ಮ ಯುವಶಕ್ತಿ ಹಾದಿ ತಪ್ಪುತ್ತಿರುವುದಾದರೇ ಹೇಗೆ?

ಮೊದಲನೆಯದಾಗಿ ಇತ್ತೀಚೆಗೆ ಯುವಜನತೆ ಹೆಚ್ಚಾಗಿ ದಾರಿ ತಪ್ಪುತ್ತಿರುವುದು ಅಂತರ್ಜಾಲದಿಂದ.....! ಹೌದು ಇಂದಿನ ಪೀಳಿಗೆಯ ಯುವಕ ಯುವತಿಯರು ತಮ್ಮ ಬಹುತೇಕ ಸಮಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಳೆಯುತ್ತಿದ್ದಾರೆ. ದಿನದ ಇಪ್ಪತ್ತನಾಲ್ಕು ಗಂಟೆಯೂ ಪೇಸ್‌ಬುಕ್, ವಾಟ್ಸ್‌ಆಫ್, ವಿಚಾಟ್ ಮುಂತಾದ ಜಾಲತಾಣಗಳಲ್ಲಿ ಕಾಲಕಳೆಯುತ್ತಾರೆ. ಅದಕ್ಕೆ ಪೂರಕವಾಗಿರುವ ಮೊಬೈಲ್ ಕಂಪನಿಗಳು ಇವರಿಗೆ ಸ್ನೇಹಿಯಾಗಿ ಕೆಲಸ ಮಾಡುತ್ತಿವೆ. ಇವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಬಹುದಾದರೂ ನಮ್ಮ ಯುವಜನತೆ ಉಪಯೋಗಿಸಿಕೊಳ್ಳುತ್ತಿಲ್ಲ. ಗುರುತು ಪರಿಚಯ ಇಲ್ಲದವರೊಂದಿಗೆ ಸಮಯದ ಮಿತಿ ಇಲ್ಲದೇ ವ್ಯವಹರಿಸುವುದು ಒಂದು ಹವ್ಯಾಸವಾಗಿಬಿಟ್ಟಿದೆ. ಅಪಾಯಕಾರಿ ಅಂಶವೆಂದರೆ ಇಂತಹ ಜಾಲತಾಣಗಳಲ್ಲಿ ನಕಲಿಖಾತೆ ತೆರೆದು ವ್ಯವಹರಿಸುವುದು ಅಶ್ಲೀಲ ಸಂದೇಶ ರವಾನಿಸುವುದು. ಬೇರೆಯವರ ಬದುಕಿನಲ್ಲಿ ಮನಬಂದಂತೆ ವಿಕೃತವಾಗಿ ನಡೆದುಕೊಳ್ಳುತ್ತಾ ಕಾಲಹರಣ ಮಾಡುತ್ತಿರುವ ಸನ್ನಿವೇಶ ಸೃಷ್ಟಿಯಾಗಿದೆ. ಇದರಿಂದ ಸಮಾಜದಲ್ಲಿ ಎಂತಹ ಘೋರ ಅಪರಾಧ ಎಸಗಿದಂತಾಗುತ್ತದೆ. ಎಂಬ ಅರಿವು ಇವರುಗಳಿಗೆ ಇಲ್ಲದಿರುವುದು ಹಾಗೂ ಇಂತಹ ಕೆಲಸ ಮಾಡುತ್ತಿರುವುದರಲ್ಲಿ ವಿದ್ಯಾವಂತರೇ ಹೆಚ್ಚಾಗಿರುವುದು ನಮ್ಮ ದುರ್ದೈವವೇ ಸರಿ.

ಪ್ರಸ್ತುತದಲ್ಲಿ ರಾಜಕಾರಣಿಗಳು ಯುವಶಕ್ತಿಯನ್ನು ಹಾಳುಮಾಡುವುದರಲ್ಲಿ ಒಬ್ಬರಿಗೆ ಮತ್ತೊಬ್ಬರಿಗೆ ಪೈಪೋಟಿ ನೀಡಬಲ್ಲವರಾಗಿದ್ದಾರೆ. ಏಕೆಂದರೆ ತಮ್ಮ ಎಲ್ಲಾ ರೀತಿಯ ನೈತಿಕ ಹಾಗೂ ಅನೈತಿಕ ಕೆಲಸಗಳಿಗೆ ಯುವಜನತೆಯನ್ನು ಬೇಕಾಬಿಟ್ಟಿಯಾಗಿ ನದಿನೀರಿನಂತೆ ಉಪಯೋಗಿಸುತ್ತಿದ್ದಾರೆ. ಚುನಾವಣೆ ಘೋಷಣೆಯಾದಾಗ ತಮ್ಮ ಪರ ಪ್ರಚಾರ ಮಾಡುವುದರಿಂದ ಹಿಡಿದು ಜನರನ್ನು ಮತಗಟ್ಟೆಗೆ ಕರೆದುಕೊಂಡು ಬರುವವರೆಗೆ ಯುವಶಕ್ತಿಯನ್ನು ಅವಲಂಬಿಸಿರುತ್ತಾರೆ. ಅವರಿಗೆ ವಿವಿಧ ರೀತಿಯ ಆಮಿಷಗಳನ್ನೊಡ್ಡಿ ತಮ್ಮತ್ತ ಸೆಳೆದು ಅವರನ್ನು ಮೃಗಗಳರನ್ನಾಗಿ ಮಾಡುವುದು ಒಂದು ವಿಧವಾದರೆ ತಮ್ಮ ವಿರುದ್ಧ ಧ್ವನಿ ಎತ್ತಿದವರ ಹುಟ್ಟಡಗಿಸಲು ಹೋರಾಟ ನಡೆಸುವವರನ್ನು ಹತ್ತಿಕ್ಕಲು ತಮ್ಮದೇ ಆದ ಸಣ್ಣ ಸೇನೆಯನ್ನು ಅರ್ಥಾತ್ ರೌಡಿಗಳ ಗುಂಪನ್ನು ತಯಾರು ಮಾಡುತ್ತಾರೆ. ಹೀಗೆ ಬೆಳೆದ ಪೋರ್ಕಿಗಳು ತಮಗೆ ಶ್ರೀರಕ್ಷೆಯಾಗಿ ಈ ರಾಜಕಾರಣಿಗಳು ಇರುತ್ತಾರೆ. ಎಂಬ ನಂಬಿಕೆಯಲ್ಲಿ ಗಲ್ಲಿ ಗಲ್ಲಿಗಳಲ್ಲಿ ತಮಗಿಷ್ಟ ಬಂದ ರೀತಿಯಲ್ಲಿ ಗಲಾಟೆ ದೊಂಬಿಗಳನ್ನು ನಡೆಸುತ್ತಾರೆ ಇಂತವರ ಮೇಲೆ ಪೋಲೀಸ್ ಕೇಸ್ ಸಹ ಆಗುವುದಿಲ್ಲ ಇನ್ನು ಸಾರ್ವಜನಿಕರು ಏನು ತಾನೇ ಮಾಡಿಯಾರು? ನಮ್ಮ ದೇಶದ ತರುಣ ಸಂಪನ್ಮೂಲ ಇಷ್ಟೊಂದು ಕೆಟ್ಟ ರೀತಿಯಲ್ಲಿ ವಿನಾಶ ಹೊಂದುತ್ತಿರುವುದು ಖಂಡಿತವಾಗಿಯೂ ಅಪಾಯಕಾರಿ ಸಂಗತಿಯಾಗಿದೆ ಅಲ್ಲವೇ? ಅಂತರ್ಜಾಲ, ಭೂಗತಲೋಕ, ರಾಜಕಾರಣ ಒಂದೆಡೆಯಾದರೆ ನಿರುದ್ಯೋಗ ಇನ್ನೊಂದು ಕಡೆ ನಿಲ್ಲುತ್ತದೆ. ಪದವಿ ಮುಗಿಸಿದ ಕೋಟ್ಯಾಂತರ ವಿದ್ಯಾರ್ಥಿಗಳು ಕೆಲಸವಿಲ್ಲದೇ ಸುಮ್ಮನೆ ಕೂರುವಂತ

ಪರಿಸ್ಥಿತಿ ಬಂದಿದೆ. ಕೆಲಸವಿಲ್ಲದೆ ಅಲೆಯುವವರ ಸಂಖ್ಯೆ ಒಂದಡೆಯಾದರೆ ಕೆಲಸಕ್ಕಾಗಿ ಅಲ್ಲಿ ಇಲ್ಲಿ ಅಲೆಯುವವರ ಸಮಸ್ಯೆ ಇನ್ನೊಂದೆಡೆ ಉತ್ತಮ ರೀತಿಯಲ್ಲಿ ಶೈಕ್ಷಣಿಕ ಅರ್ಹತೆ ಹೊಂದಿದ್ದರೆ ಸರ್ಕಾರಿ ಕೆಲಸ ಸಿಗುವುದು ಕಬ್ಬಿಣದ ಕಡಲೆಯಂತಾಗಿದೆ. ಒಂದುವೇಳೆ ಕೆಲಸಗಳಿಗೆ ಅರ್ಜಿ ಆಹ್ವಾನಿಸಿದರೆ ಕೆಲಸಗಾರರೂ ಅಗತ್ಯ ಇರುವ ಇಲಾಖೆಗೆ ಸರಿಯಾದ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುವುದಿಲ್ಲ ಮತ್ತು ಅಗತ್ಯವಿರುವಷ್ಟು ಕೆಲಸಗಾರರನ್ನು ನಿಯೋಜನೆ ಮಾಡಿಕೊಳ್ಳುವುದಿಲ್ಲ ಕಾರಣ ಧರ್ಮ, ಜಾತಿ ಆಧಾರಿತ ಮೀಸಲಾತಿ ಒಟ್ಟಾರೆಯಾಗಿ ಸರ್ಕಾರದ ನಿರ್ಲಕ್ಷದಿಂದ ಯುವಶಕ್ತಿ ಪೋಲಿಯಾಗುತ್ತಿದೆ.

ಇದಲ್ಲದೇ ಕಾಲೇಜು ವಿದ್ಯಾರ್ಥಿಗಳು ಉಜ್ವಲ ಸಮಾಜವನ್ನು ನಿರ್ಮಾಣ ಮಾಡಬೇಕಾದವರು ಬೀದಿ-ಬೀದಿಗಳಲ್ಲಿ ಪೋರ್ಕಿಗಳಂತೆ ಅಡ್ಡಾಡುತ್ತಾರೆ. ಸಮಾಜದಲ್ಲಿ ಭಯ ಹುಟ್ಟಿಸುವಂತಹ ಕೆಲಸ ಮಾಡುತ್ತಿದ್ದಾರೆ. ಬೀಡಿ, ಸಿಗರೇಟ್, ಮದ್ಯಪಾನ, ಧೂಮಪಾನ ಮುಂತಾದ ಅನೇಕ ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ. ದೇಶಕ್ಕಾಗಿಯೇ, ಸಮಾಜಕ್ಕಾಗಿಯೇ ಅಲ್ಲದಿದ್ದರೆ ತಮ್ಮ ತಂದೆ-ತಾಯಿಯರ ಆಸೆಯ ಸಲುವಾಗಿ ಇಂತಹ ವಿದ್ಯಾರ್ಥಿಗಳು ಬದಲಾಗಬಹುದಲ್ಲವೇ. ಸ್ವಾಮಿ ವಿವೇಕನಂದರು "ನನಗೆ ನೂರು ಜನ ಸದೃಢ ಯುವಕರನ್ನು ನೀಡಿ ನಾನು ಬಲಿಷ್ಠ ರಾಷ್ಟ್ರವನ್ನು ಕಟ್ಟುತ್ತೇನೆ. ಭಾರತದ ಯುವಶಕ್ತಿಗೆ ಸರಿಸಾಟಿಯಾಗಿ ನಿಲ್ಲುವಂತದ್ದು ಯಾವುದು ಇಲ್ಲ" ಎಂದು ಜಗತ್ತಿಗೆ ಸಾರುತ್ತಾರೆ. ಎಂತಹ ಛಾತಿ ಇದೆ ಅವರ ಮಾತಿನಲ್ಲಿ ಅಂದು ಅವರಾಡಿದ ಮಾತಿಗೆ ಇಂದು ಬೆಲೆಯೇ ಇಲ್ಲದಂತಾಗಿದೆ. ಅವರು ಕೇಳಿದ್ದು ಕೇವಲ ನೂರು ಸದೃಢ ಯುವಕರನ್ನು ನೋಡಿ ಕೇವಲ ನೂರು ಸದೃಢ ಯುವಕರೊಂದಿಗೆ ಇನ್ನಾದರೂ ದೇಶದ ಸಂಪೂರ್ಣ ಯುವಶಕ್ತಿ ಸರಿಯಾದ ರೀತಿಯಲ್ಲಿ ವಿನಿಯೋಗವಾದರೆ ಎಂತಹ ಮಟ್ಟದ ಭಾರತ ನಿರ್ಮಾಣವಾಗಬಹುದು ನೀವೆ ಅಂದಾಜಿನ ಸಂಶಯವೇ ಇಲ್ಲ ಯುವಶಕ್ತಿ ಜಲಪಾತದಂತೆ ಬೋರ್ಗರೆದು ದೇಶಸೇವೆಗೆ ನಾ ಮುಂದು ತಾ ಮುಂದು ಎಂದು ಧುಮಿಕ್ಕಿದರೆ ನಾವು ಇಡೀ ಪ್ರಪಂಚದ ಯುವ ನಾಯಕರೂ ಊಹಿಸಿದಂತಹ ಬಲಿಷ್ಠ ಭಾರತ ನಿರ್ಮಾಣ ಖಂಡಿತಾ ಸಾಧ್ಯ.

ಉದ್ಯೋಗದಲ್ಲಿ ಎನ್ನುವ ಬದಲು ಉದ್ಯೋಗವನ್ನು ಸೃಷ್ಟಿಸಬೇಕು ಇತರರಿಗೆ ನಾವೇ ಉದ್ಯೋಗ ನೀಡುವಂತಾಗಬೇಕು ಸಾಧ್ಯವಾದರೆ ಸೈನ್ಯಕ್ಕೆ ಸೇರಬೇಕು ಪೋಲೀಸ್ ಇಲಾಖೆಗೆ ಸೇರಿ ನ್ಯಾಯಯುತವಾಗಿ ಸೇವೆ ಸಲ್ಲಿಸಬೇಕು ತಮ್ಮಂತ ಯುವಕರು ಸಂಘಸಂಸ್ಥೆಗಳನ್ನು ಹುಟ್ಟುಹಾಕಿ ನಿಸ್ವಾರ್ಥದಿಂದ ಸಮಾಜ ಸೇವೆ ಮಾಡಬೇಕು.

ಮುಂದುವರೆದ ವಿದ್ಯುನ್ಮಾನ ಯುಗದಲ್ಲಿ ತಮ್ಮ ಪೂರ್ತಿ ಜೀವನವನ್ನು ದೇಶ ಸೇವೆಗೆ ಮಿಸಲಿರಿಸುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ ಆದರೆ ದಿನದ ಕೆಲ ಗಂಟೆಗಳು ಈ ವಾರದಲ್ಲಿ ಒಂದು ಎರಡೇ ದಿನ ಸಮಾಜಕ್ಕಾಗಿ ಮೀಸಲಿಟ್ಟರೆ ಸಾಕು ಅಬ್ದುಲ್ ಕಲಾಂ 2020ರ ಭಾರತದ ಕನಸು ಖಂಡಿತವಾಗಿಯೂ ನನಸಾಗುತ್ತದೆ. ಇದೆಲ್ಲದಕ್ಕೂ ಮೊದಲು ನಮ್ಮಲ್ಲಿ ದೇಶಭಕ್ತಿ ಜಾಗೃತವಾಬೇಕು. ನನ್ನ ದೇಶ, ನನ್ನ ಜನ, ನನ್ನ ಸಮಾಜ ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಹಿಂದೂ ಮುಸ್ಲಿಂ ಕ್ರಿಶ್ಚಿಯನ್, ಜೈನ, ಬೌದ್ಧ ಎಂಬ ಧರ್ಮ ಎಂಬ ಸಂಕೋಲೆಗಳಿಂದ ಹೊರ ಬಂದು ನಾವೆಲ್ಲರೂ ಭಾರತೀಯರು ಎಂಬ ಒಂದೇ ಧರ್ಮದಡಿ ಸೇರಬೇಕು ಸ್ವದೇಶಿ ಉತ್ಪನ್ನಗಳ ಖರೀದಿ ಮರಾಟದ ಬಗ್ಗೆ ಆಸಕ್ತಿ ವಹಿಸಬೇಕು. ಆಗ ಮಾತ್ರ ಈ ದೇಶದಲ್ಲಿ ಬದುಕಿದ್ದೂ ಸಾರ್ಥಕವಾಗುತ್ತದೆ. ಆದ್ದರಿಂದ ವಿವೇಕಾನಂದರ ವಾಕ್ಯದಂತೆ ಏಳಿ ಎದ್ದೇಳಿ ಯುವಕ-ಯುವತಿಯರೇ ಗುರಿ ಮುಟ್ಟುವವರೆಗೂ ನಿಲ್ಲದಿರಿ, ವಿಶ್ರಮಿಸದಿರಿ ತಾಯಿ ಭಾರತಾಂಬೆಯ ಪಾದಕ್ಕೆ ನಮ್ಮನ್ನು ಅರ್ಪಿಸಿಕೊಂಡು ಅವಳ ಸೇವೆಗೆ ಕಂಕಣ ಬದ್ಧರಾಗೋಣ ಇಡೀ ಪ್ರಪಂಚವೇ ಸಹಾಯಕ್ಕಾಗಿ ನಮ್ಮತ್ತ ಕೈ ಚಾಚುಯವಂತಹ ಸದೃಡ ಭಾರತವನ್ನು ನಿರ್ಮಾಣ ಮಾಡಿ ನಮ್ಮ ಸನಾತರಿಗೆ ಗೌರವ ಸಲ್ಲಿಸೋಣ. ■

# ಪ್ಲಾಸ್ಟಿಕ್ ನಿಷೇಧ :

ನಳಿನ ಬಿ.ಎಸ್. III rd B.A

**ಪೀಠಿಕೆ:**

ಮೊದಲನೆಯದಾಗಿ ಪ್ಲಾಸ್ಟಿಕ್ ಎಂಬುದು ಆರೋಗ್ಯಕ್ಕೆ ಹಾನಿಕಾರ ಎನ್ನಬಹುದಾಗಿದೆ. ಪ್ಲಾಸ್ಟಿಕ್‌ನಿಂದ ಎಷ್ಟರ ಪ್ರಮಾಣದಲ್ಲಿ ಉಪಯೋಗವಿದೆಯೋ ಅದೇ ರೀತಿಯಾಗಿ ಪರಿಸರಕ್ಕೆ, ಜೀವಿಗಳಿಗೆ, ಮನುಷ್ಯರ ಆರೋಗ್ಯದ ಮೇಲೆ ಹಾನಿಯುನ್ನುಂಟು ಮಾಡುತ್ತದೆ. ಮೊದಲನೆಯದಾಗಿ ಪ್ಲಾಸ್ಟಿಕ್ ನಿಷೇಧ ಮಾಡಲು ಇರುವ ಹಲವು ಕ್ರಮಗಳನ್ನು ನಾವು ಅನುಸರಿಸಬೇಕು. "ಮುಖ್ಯವಾಗಿ ಪ್ಲಾಸ್ಟಿಕ್ ಉತ್ಪತ್ತಿಯನ್ನು ಮಾಡುವ ಕಂಪನಿ ಅಥವಾ ಕಾರ್ಖಾನೆಗಳನ್ನು ಮೊದಲು ಸರ್ಕಾರ ನಿಷೇಧಿಸಬೇಕು" ಆಗ ಮಾತ್ರ ಪ್ಲಾಸ್ಟಿಕ್ ನಿಷೇಧ ಸಾಧ್ಯವಾಗುತ್ತದೆ.

**ವಿವರಣೆ:**

ಪ್ಲಾಸ್ಟಿಕ್ ನಿಷೇಧಕ್ಕೆ ಮೊದಲು ಹಲವರು ಪ್ರಯತ್ನಿಸಿದರು ಆದರೆ ಇಂದಿನ ಕಾಲಮಾನದಲ್ಲಿ ಪ್ಲಾಸ್ಟಿಕ್ ನಿಷೇಧಕ್ಕೆ ಭಾರತದ ಪ್ರಧಾನಿಯಾದ " ನರೇಂದ್ರ ಮೋದಿ" ಆವರು ಅಡಿಪಾಯ ಹಾಕಿದರು. ಮುಖ್ಯವಾಗಿ ನಮ್ಮ ಪ್ರಧಾನಿ ಭಾರತವನ್ನು ಪ್ಲಾಸ್ಟಿಕ್ ಮುಕ್ತ ಭಾರತವನ್ನಾಗಿಸಲು ಕನಸು ಕಂಡರು ಭಾರತವನ್ನು ಸ್ವಚ್ಛ ಭಾರತದಡಿಗೆ ತರಲು ಹಲವು ಕ್ರಮಗಳನ್ನು ರಾಜ್ಯ ಸರ್ಕಾರವು ಜಾರಿಗೊಳಿಸಿದೆ. ಪ್ಲಾಸ್ಟಿಕ್ ನಿಷೇಧವನ್ನು ಭಾರತದಲ್ಲಿ 2018–19 ರಲ್ಲಿ ಜಾರಿಗೊಳಿಸಲಾಯಿತು. ಇದರಿಂದ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲು ಹಲವು ಯೋಜನೆಗಳನ್ನು ಕಾರ್ಯಕ್ರಮಗಳನ್ನು

ರಾಜ್ಯ ಸರ್ಕಾರ ಜಾರಿಗೊಳಿಸಿತು.

"ರಾಜ್ಯದಲ್ಲಿ ಎಲ್ಲಾ ರೀತಿಯ ಪ್ಲಾಸ್ಟಿಕ್ ಬಳಕೆ ನಿಷೇಧಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದು. ಈಗಾಗಲೇ ಕರಡು ನಿರ್ದೇಶನದ ಪ್ರತಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ' ಎಂದು ಅರಣ್ಯ ಸಚಿವ "ರಮಾನಾಥ ರೈ" ಹೇಳಿದ್ದಾರೆ. ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇಧಕ್ಕೆ ಸಚಿವ ಸಂಪುಟದ ಒಪ್ಪಿಗೆ ಇದೆ ಎಂದಿದ್ದಾರೆ.

**ಪ್ಲಾಸ್ಟಿಕ್ ನಿಷೇಧದ ಆಕ್ಷೇಪಣೆಗಳು:**

ಬೆಂಗಳೂರು, ನವೆಂಬರ್ 4: ಸಚಿವ ಸಂಪುಟದಲ್ಲಿ ಸೇರಿದ್ದ ಸಭೆಯಲ್ಲಿ 40 ಮೈಕ್ರಾನ್‌ಗಿಂತಲು ಕಡಿಮೆ ಪ್ರಮಾಣದ ಎಲ್ಲಾ ರೀತಿಯ "ಪ್ಲಾಸ್ಟಿಕ್" ಉತ್ಪನ್ನಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಲು ಒಪ್ಪಿಗೆ ನೀಡಲಾಗಿದೆ. ಈ ಕುರಿತು ಕರಡು ಅಧಿಸೂಚನೆಯನ್ನು ಸರ್ಕಾರ ಹೊರಡಿಸಿದೆ.

ಬಹುಶಃ ಪ್ಲಾಸ್ಟಿಕ್ ಹುಟ್ಟುಹಾಕಿರುವ ಜೀವಘಾತದ ಅಪಾಯವನ್ನು ಬೇರೆ ಯಾವುದೇ ವಸ್ತುಗಳು ಹುಟ್ಟು ಹಾಕಿಲ್ಲ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನಾವೆಲ್ಲರೂ ಪ್ಲಾಸ್ಟಿಕ್ ಬಳಸುತ್ತೇವೆ. ಹಾಗೆಯೇ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ನಾವೆಲ್ಲರೂ ಅದರ ದುಷ್ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಪ್ಲಾಸ್ಟಿಕ್‌ನ ಭೀಕರತೆ ಅರಿತಿರುವ ವಿಶ್ವಸಂಸ್ಥೆ ಈ ವರ್ಷದ ಪರಿಸರ ದಿನವನ್ನು ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣಕ್ಕೆ ಮೀಸಲಾಗಿಸಿದೆ. ಪ್ಲಾಸ್ಟಿಕ್ ಮಾಲಿನ್ಯವನ್ನು ಸೋಲಿಸಿ (ಬೀಟ್ ಪ್ಲಾಸ್ಟಿಕ್ ಪೊಲ್ಯೂಷನ್) ಎಂಬ ಥೀಮ್‌ನೊಂದಿಗೆ ಪರಿಸರ ದಿನವನ್ನು ಆಚರಿಸಲಾಗುತ್ತಿದ್ದು. ಪ್ಲಾಸ್ಟಿಕ್ ಸೃಷ್ಟಿಸಿರುವ ಜಗತ್ತಿಗೆ ಮನದಟ್ಟು ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆ. ನೆಲ, ಜಲ, ಗಾಳಿ ಎಲ್ಲವನ್ನು ಪ್ಲಾಸ್ಟಿಕ್ ಮಾಲಿನ್ಯ ಮಾಡಿದೆ. ಅಂತರ್ಜಾಲದಿಂದ ಒಡಿದು ಸಮುದ್ರದ ನೀರಿನವರೆಗೂ ಪ್ಲಾಸ್ಟಿಕ್ ತನ್ನ ಕಬಂದ ಬಾಹು ಚಾಚಿದೆ. ನಾವು ತಿನ್ನುವ ಆಹಾರದಲ್ಲೂ ಪ್ಲಾಸ್ಟಿಕ್ ಬಾಟಲಿಗಳು, ತಿಂದು ಎಸೆಯುವ ಆಹಾರ ಪೊಟ್ಟಣಗಳು ಹೇಗೆಲ್ಲ ಗೊತ್ತಿದೆಯೇ? ಅಗ್ಗವಾಗಿ ದೊರೆಯುವ ಪ್ಲಾಸ್ಟಿಕ್ ಅನ್ನು ಹಿಂದು ಮುಂದು ನೋಡದೆ ಬಳಸುವ ನಾವು ನಮಗೆ ಅರಿವಿಲ್ಲದಂತೆ ನಮ್ಮ ಸುತ್ತಲಿನ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ನಮ್ಮಿಂದಲೇ ಆಗಿರುವ ಈ ಪ್ರಮಾದವನ್ನು ನಾವೇ ಸರಿಪಡಿಸಬೇಕಿದೆ. ವ್ಯಕ್ತಿಗತ ಸಾಮೂಹಿಕ ಮತ್ತು ಸರಕಾರದ ಹಂತದಲ್ಲಿ ನಾವೆಲ್ಲರೂ ಒಗ್ಗೂಡಿ ಪರಿಹಾರ ಕಂಡುಕೊಳ್ಳಬೇಕಿದೆ. ಅಷ್ಟೆಯಲ್ಲದೆ ಮುಂದೊಂದು ದಿನ ಇಡೀ ಪರಿಸರ ಪ್ಲಾಸ್ಟಿಕ್ ಮಯವಾಗಿ ಉಸಿರಾಡಲು ಗಾಳಿ ಕುಡಿಯಲು ನೀರು ಮತ್ತು ತಿನ್ನಲು ಆಹಾರ ಎಲ್ಲವನ್ನು ವಿಷಯಮಯವಾಗಿಸುತ್ತದೆ. ಈಗಲೂ ಕಾಲ ಮಿಂಚಿಲ್ಲ. ಪ್ಲಾಸ್ಟಿಕ್ ಮಾಲಿನ್ಯ ತಡೆಯಬಹುದಾಗಿದೆ.

**ಪ್ಲಾಸ್ಟಿಕ್ ಮಾಲಿನ್ಯಕ್ಕೆ ಕಾರಣಗಳೇನು?**

ಪರಿಸರ ಮಾಲಿನ್ಯವುಂಟು ಮಾಡಲು ಅನೇಕ ಅಂಶಗಳಲ್ಲಿ ಪ್ಲಾಸ್ಟಿಕ್‌ನ ಕೊಡುಗೆ ಹೆಚ್ಚಾಗಿದೆ.

• **ಎಲ್ಲೆಂದರಲ್ಲಿ ಬಿಸಾಡುವ ಪ್ಲಾಸ್ಟಿಕ್:** ನಾವು ಈಗ ಪ್ಲಾಸ್ಟಿಕ್ ರಹಿತವಾದ ಜೀವನವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹಾಲಿನ ಪಾಕೆಟ್‌ಗಳು, ಕುಡಿಯುವ ನೀರಿನ ಬಾಟಲಿಗಳು ಪೀಠೋಪಕರಣಗಳು ಹೀಗೆ ಪ್ಲಾಸ್ಟಿಕ್ ನಮ್ಮ ನಿತ್ಯದ ಜೀವನವನ್ನು ಹಾಸುಹೊಕ್ಕಾಗಿದೆ. ಪ್ಲಾಸ್ಟಿಕ್ ಸಾಧನಗಳ ಬಳಕೆಯಾದ ನಂತರ ಅವುಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತವೆ. ಹೀಗೆ ಬಿಸಾಡಲಾದ ಪ್ಲಾಸ್ಟಿಕ್ ಮುಂದೆ ಎಲ್ಲೋ ಒಂದು ಕಡೆ ಸಂಗ್ರಹಗೊಂಡು ಮಾಲಿನ್ಯಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ವನ್ಯ ಮೃಗಗಳ ಪ್ರಾಣಕ್ಕೆ ಸಂಚಕಾರ ಬರುತ್ತದೆ. ಅಂತರ್ಜಲ ಕಲುಷಿತಗೊಳ್ಳುತ್ತದೆ.

• **ಅತಿಯಾದ ಪ್ಲಾಸ್ಟಿಕ್ ಬಳಕೆ:** ಅಗ್ಗದಲ್ಲಿ ದೊರೆಯುವ ಪ್ಲಾಸ್ಟಿಕ್ ವಸ್ತುಗಳನ್ನು ಬಹುತೇಕರು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾರೆ. ಜಗತ್ತಿನಲ್ಲೇ ಇಂದು ಅತಿ ಹೆಚ್ಚು ಬಳಸುವ ವಸ್ತುಗಳೆಂದರೆ ಪ್ಲಾಸ್ಟಿಕ್‌ಗಳದ್ದಾಗಿರುತ್ತವೆ. ಅವುಗಳನ್ನು ವಿಲೇವಾರಿ ಮಾಡಿದಾಗ ಅವು ಕೊಳೆಯುವುದಿಲ್ಲ ಹಾಗೆ ಮಣ್ಣು ಸೇರುವ ಪ್ಲಾಸ್ಟಿಕ್ ಭೂಮಿ, ಮಣ್ಣು., ಗಾಳಿಯನ್ನು ಕಲುಷಿತಗೊಳಿಸುತ್ತದೆ. ಪ್ಲಾಸ್ಟಿಕ್ ಸುಟ್ಟು ಹಾಕಿದರೆ ಅದರಿಂದಾಗುವ ದುಷ್ಪರಿಣಾಮ ಇನ್ನೂ ಹೆಚ್ಚು.

• **ಫಿಶಿಂಗ್ ನೆಟ್:** ಪ್ಲಾಸ್ಟಿಕ್ ಹಾವಳಿಯಿಂದ ಅತಿ ಹೆಚ್ಚು ದುಷ್ಪರಿಣಾಮ ಸಮುದ್ರಗಳ ಮೇಲಾಗುತ್ತದೆ. ಜಗತ್ತಿನ ಬೀಚ್‌ಗಳು ಈ ಪ್ಲಾಸ್ಟಿಕ್ ಎಂಬ ರಾಕ್ಷಸನ ಹೊಡೆತಕ್ಕೆ ಸಿಕ್ಕು ನಲುಗುತ್ತಿವೆ. ಭೂಮಿ ಸೇರಿ ಅದು ಅಂತರ್ಜಲದಲ್ಲಿ ಲೀನವಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಮೀನುಗಾರಿಕೆಗೆ ಬಳಸಲಾಗುವ ಫಿಶಿಂಗ್ ನೆಟ್ ಕೂಡ ಪ್ಲಾಸ್ಟಿಕ್ ಮಾಲೀನ್ಯಕ್ಕೆ ಕಾರಣವಾಗುತ್ತದೆ. ಪ್ಲಾಸ್ಟಿಕ್‌ನಿಂದ ಮಾಡಿದ ಈ ಬಲೆಯನ್ನು ದೀರ್ಘಕಾಲದವರೆಗೆ ಸಮುದ್ರದ ಒಳಗೆ ಬೀಡುವುದರಿಂದ ಇದರಿಂದ ವಿಷಕಾರಿ ಅನಿಲ ನೀರಿನಲ್ಲಿ ಸೇರಿ ವಿಲೀನವಾಗುವುದು.

- ಭೂ ಮಾಲಿನ್ಯ
- ವಾಯು ಮಾಲಿನ್ಯ
- ಪ್ರಾಣಿಗಳು ಮತ್ತು ಜೀವಕ್ಕೆ ಕುತ್ತು
- ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರ ಹೇಗೆ?

ಜಗತ್ತಿನಲ್ಲಿ ಪರಿಹಾರವಿಲ್ಲದೇ ಸಮಸ್ಯೆಗಳೇ ಇಲ್ಲ ಒಂದು ವೇಳೆ ಪರಿಹಾರ ಇಲ್ಲ ಎಂಬುದಾದರೆ ಅದು ಸಮಸ್ಯೆಯೇ ಅಲ್ಲ

• **ನಿಸರ್ಗ ಸ್ನೇಹ ಶಾಪಿಂಗ್:** ವೈಯಕ್ತಿಕ ನೆಲೆಗಟ್ಟಿನಲ್ಲಿ ಪ್ಲಾಸ್ಟಿಕ್ ಮಾಲಿನ್ಯ ತಪ್ಪಿಸಲು ನಾವೆಲ್ಲರೂ ಎಷ್ಟು ಸಾಧ್ಯವೋ ಅಷ್ಟು ಪ್ಲಾಸ್ಟಿಕ್ ಅವಲಂಬನೆಯನ್ನು ಬೀಡಬೇಕು ಸಾಧ್ಯವಾದಷ್ಟು ಪರಿಸರ ಸ್ನೇಹಿ ಬ್ಯಾಗ್‌ಗಳನ್ನು ಬಳಸಬೇಕು.

• **ಬಾಟಲ್ ಬಿಟ್ಟು ಬಿಡಿ :** ಪ್ಲಾಸ್ಟಿಕ್ ಬಾಡಲ್‌ಗಳು ಹೆಚ್ಚು ನೀರು ತುಂಬಲು ಬಳಕೆಯಾಗುತ್ತದೆ. ವರ್ಷಕ್ಕೆ ನೂರಾರು ಕೋಟಿ ಬಾಟಲ್‌ಗಳು ಉತ್ಪಾದನೆಯಾಗುತ್ತವೆ. ಇವು ಒಂದುಸಾರಿ ಬಳಸಲು ಮಾತ್ರ ಅರ್ಹವಾಗುತ್ತವೆ.

• **ಪ್ಯಾಕೆಜಿಂಗ್:** ಆಹಾರ ಪೊಟ್ಟಣಗಳ ತಯಾರಿಕೆ ಮತ್ತು ಪ್ಯಾಕೇಜಿಂಗ್‌ನಲ್ಲೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಸ್ಟಿಕ್ ಬಳಕೆಯಾಗುತ್ತಿದೆ.

ಮತ್ತು ನೀವು ಟೀ ಅಂಗಡಿಯಲ್ಲಿ ಟೀ ಕುಡಿಯುವ ಕಪ್ ಕೂಡ ಪ್ಲಾಸ್ಟಿಕ್.

• **ನೀತಿ ನಿರೂಪಣೆ:** ಪ್ಲಾಸ್ಟಿಕ್ ಮಾಲಿನ್ಯ ತಡೆಯಾದಲ್ಲಿ ಕಾನೂನುಗಳು ಪ್ರಮುಖ ಪಾತ್ರ ವಹಿಸುತ್ತದೆ. ಈ ಕಾರ್ಯದಲ್ಲಿ ವಿಶ್ವಸಂಸ್ಥೆ ಸೇರಿ ಅನೇಕ ಅಂತರಾಷ್ಟ್ರೀಯ ಸಂಘ ಸಂಸ್ಥೆಗಳು ಕೆಲಸ ಮಾಡುತ್ತಿವೆ.

**ಪ್ಲಾಸ್ಟಿಕ್ ವಿಲೇವಾರಿ ಮತ್ತು ತ್ಯಾಜ್ಯ**

ಮಾಲೀನ್ಯಕ್ಕೆ ಪ್ಲಾಸ್ಟಿಕ್ ವಿಲೇವಾರಿಯು ಬಹುದೊಡ್ಡ ಕಂಟಕವಾಗಿ ಪರಿಣಮಿಸಿದೆ. ವೈದ್ಯಕೀಯ ಪ್ಲಾಸ್ಟಿಕ್ ತ್ಯಾಜ್ಯ ಸೇರಿದಂತೆ ಪ್ಲಾಸ್ಟಿಕ್ ಸಂಬಂಧಿ ಅನೇಕ ತ್ಯಾಜ್ಯ ವಿಲೇವಾರಿ ಸ್ಥಳೀಯ ಆಡಳಿತಗಳಿಗೆ ಬಹುದೊಡ್ಡ ಸವಾಲಿನ ಕೆಲಸವಾಗಿದೆ.

## : ದುಷ್ಪರಿಣಾಮಗಳು :

**1 ಆಹಾರ ಸರಪಳಿ ಮೇಲೆ ಪರಿಣಾಮ:** ಪ್ಲಾಸ್ಟಿಕ್ ಮಾಲೀನ್ಯದಿಂದ ಇಡೀ ಆಹಾರ ಸರಪಳಿ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದು ಎಷ್ಟು ತೀಕ್ಷ್ಣವಾಗಿದೆ ಎಂದರೆ ಅತ್ಯಂತ ಚಿಕ್ಕ ಜೀವಿಗಳಾಗಿರುವ ಪ್ಲಾಂಕ್ಟನ್ (ಸೂಕ್ಷ್ಮ ಜೀವಿಗಳಿಂದ ಕೂಡಿದ ಪ್ರಾಣಿ ಮತ್ತು ಸಸ್ಯಜೀವಿಗಳ ಸಮುದಾಯ) ಕೂಡ ವಿಷಯುಕ್ತವಾಗಿದೆ.

2.ವಿಷವಾಗುವ ಅಂತರ್ಜಲ: ಅಂತರ್ಜಲ ಕೊರತೆ ಮತ್ತು ದೊರೆಯುವ ಅಲ್ಪ ನೀರು ಕೂಡ ವಿಷವಾಗುತ್ತಿರುವ ಸಮಸ್ಯೆ ಜಗತ್ತಿನ ಎಲ್ಲಾ ಭಾಗಗಳಲ್ಲೂ ಇದೆ. ಆದರೆ ಅಂತರ್ಜಲ ವಿಷವಾಗಲು ಈ ಪ್ಲಾಸ್ಟಿಕ್‌ನ ಕೊಡುಗೆ ಕೂಡ ಸಾಕಷ್ಟು ಪ್ರಮಾಣದಲ್ಲಿದೆ. ಪ್ಲಾಸ್ಟಿಕ್‌ನಿಂದ ಸೋರಿಕೆಯಾಗುವ ವಿಷ.

**ಉಪಸಂಹಾರ:**

ಒಟ್ಟಾರೆಯಾಗಿ ಹೇಳುವುದಾದರೆ ಪ್ಲಾಸ್ಟಿಕ್‌ನಿಂದ ಎಷ್ಟು ಉಪಯೋಗವಿದೆಯೋ ಅಷ್ಟೆ ಹಾನಿಯು ಇದೆ ಎಂಬುದು ತಿಳಿಯುತ್ತದೆ. ಪ್ಲಾಸ್ಟಿಕ್‌ನಿಂದ ಅನೇಕ ತೊಂದರೆಗಳು ಆರೋಗ್ಯಕಾರಕ ಸಮಸ್ಯೆಗಳು ಉಲ್ಬಣಗೊಳ್ಳುತ್ತದೆ. ನಾವೆಲ್ಲರೂ ಒಟ್ಟಾಗಿ ಸೇರಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ಸುಲಭ ಮತ್ತು ಕಾರ್ಯಕ್ರಮಗಳನ್ನು ಸರ್ಕಾರದಲ್ಲಿ ರೂಪಿಸುವಂತೆ ಎಚ್ಚರಿಕೆ ವಹಿಸಬೇಕು.

<u>ಸ್ವಚ್ಛ ಭಾರತ ಆರೋಗ್ಯಕರ ಭಾರತ</u>

* ಸ್ವಚ್ಛತೆಯೇ ಉಸಿರಾದರೆ ಜೀವನ ಹಸಿರು.
* ಮನೆ ಮನಗಳಲ್ಲೂ ಸ್ವಚ್ಛತೆ ತರುವುದು ನೆಮ್ಮದಿ.
* ಇದರಿಂದ ಆಗುವುದು ದೇಶದ ಅಭಿವೃದ್ಧಿ.
* ಎಲ್ಲರಲ್ಲೂ ಮೂಡಲು ಸ್ವಚ್ಛತೆಯ ಅರಿವು ಸ್ವಚ್ಛ ಭಾರತ
  ಆಗಲಿ ನಮ್ಮ ನಿಲುವು.

************************

## ಲಲಿತ ಕಲೆಗಳು


**ಪ್ರತಿಭಾ ಜಿ.ಎಂ.** ತೃತೀಯ ಬಿ.ಎ. (ಹೆಚ್.ಎಸ್.ಕೆ.)

ಮನುಷ್ಯನನ್ನು ಮಾನವನನ್ನಾಗಿಸುವ ಬಹುಮುಖ್ಯ ಪರಿಕರಗಳಲ್ಲಿ ಕಲೆಗಳ ಪಾತ್ರವೂ ಮಹತ್ವದ್ದಾಗಿದೆ. ಕಲೆಗಳು ಜೀವನಕ್ರಮವನ್ನು ಭವ್ಯತೆಗೊಯ್ಯುವ ಶಕ್ತಿ ಪಡೆದಿದ್ದು ಅವು ಮಾನವತವಾದದ ಅಭಿವೃದ್ಧಿ ಎಂದರೂ ತಪ್ಪಿಲ್ಲ ಅಂತೆಯೇ ಕಲೆಗಳು ವಿಶ್ವ ಮಾನವತೆಯ ಪ್ರತಿಬಿಂಬವೆನ್ನಬೇಕು. ಕಲೆಗಳು ವ್ಯಷ್ಠಿ– ಸಮಷ್ಠಿಯ ಬೆಳವಣಿಗೆಗೆ ಪರಿಣಾಮಕಾರಿ ಸಾಧನವಾಗಿದೆ.

ಲಲಿತಾ ಕಲೆಗಳನ್ನು ಜನಪದ ಕಲೆಗಳು ಮತ್ತು ಶ್ರೇಷ್ಠ ಕಲೆಗಳೆಂದು ವರ್ಗೀಕರಿಸಬಹುದು. ಒಟ್ಟು ಲಲಿತ ಕಲೆಗಳನ್ನು ಪಂಚ ಕಲೆಗಳೆಂದು ಕರೆಯುತ್ತೇವೆ. ಅವೆಂದರೆ, ಸಂಗೀತಾ, ನೃತ್ಯ, ಶಿಲ್ಪ, ಚಿತ್ರ, ಸಾಹಿತ್ಯ ಕಲೆಗಳೆಂದು ಕರೆಯಲಾಗಿದೆ. ಈ ಕಲೆಗಳ ಆಕರ ಪರಿಕರಗಳೆಂದರೆ ಪ್ರತಿಭೆ, ಸ್ವಯಂ ಕಲ್ಪನೆ, ಸತತ ಅಭ್ಯಾಸ ಇವುಗಳಿಂದಲೇ ಕಲೆ ಅರಳಲು ಸಾಧ್ಯವಾಗಿದೆ. ಇವೇ ಕಲೆಗಳು ಪರಂಪರೆಯಿಂದ ನಮ್ಮಲ್ಲಿ ಬೆರೆತು ಹೋಗಿದ್ದು, ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣವಾಗಿವೆ. ಮಾನಸಿಕ ಹಸಿವನ್ನು ಹಿಂಗಿಸಿವೆ. ಅಂದರೆ ಈ ಕಲೆಗಳು ಇಂದು ತೀರ ಅತಂತ್ರ ಸ್ಥಿತಿಯಲ್ಲಿರುವುದು ಅವಸಾನದ ಅಂಚನ್ನು ತಲುಪಿರುವುದು ಸಾಂಸ್ಕೃತಿಕ ದುರಂತವಾಗಿದೆ. ಇವುಗಳ ದುರಂತಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು ಅವ್ಯಾಹತವಾಗಿ ಬೆಳೆಯುತ್ತಿರುವ ವೈಜ್ಞಾನಿಕತೆ ಮಾಹಿತಿ ಮತ್ತು ತಂತ್ರಜ್ಞಾನ ಅದರೊಂದಿಗೆ ತಳುಕು ಹಾಕಿಕೊಂಡು ಬೆಳೆಯುತ್ತಿರುವ ಆಧುನಿಕತೆ. ಇನ್ನೊಂದೆಡೆ ತನ್ನ ಕಬಂಧ ಬಾಹುಗಳನ್ನು ಬಾಚಿಕೊಂಡಿರುವ ಜಾಗತೀಕರಣ ಇದರೊಂದಿಗೆ ಬೆಸೆದುಕೊಂಡಿರುವ ಖಾಸಗೀಕರಣ ಹಾಗೂ ಉದಾರೀಕರಣ ಇವೆಲ್ಲವುಗಳ ಮಧ್ಯೆ ಕಲೆಗಳು ಇಂದು ಮಾಯವಾಗುತ್ತಿರುವುದು ನಮ್ಮ ಸಾಂಸ್ಕೃತಿಕ ಅಳಿವಿನ ಸಂಕೇತವೆ ಆಗಿವೆ. ವಾಸ್ತವಿಕವಾಗಿ ಭಾರತವೆಂದರೆ ಬಹು ಸಂಸ್ಕೃತಿಯ ಬಹುಭಾಷೆಯ ನೆಲೆಯಾಗಿದೆ. ಇಲ್ಲಿನ ಕಲೆಗಳ ಮುಖ್ಯ ಲಕ್ಷಣವೇ ವೈವಿಧ್ಯತೆ. ಜಾಗತೀಕರಣವೆಂದರೆ ಅದೊಂದು ಶುದ್ಧ ವ್ಯವಹಾರಿಕ ಮನಸ್ಸಿನ ಅಚ್ಚಾಗಿದೆ. ಅಲ್ಲಿರುವುದು ಒಂದೇ ಸಂಸ್ಕೃತಿ, ಅದೇ ಕೊಳ್ಳುಬಾಕ ಸಂಸ್ಕೃತಿ ಚಾವುಂಡರಾಯನು ನಿರ್ಮಿಸಿದ ಗೊಮ್ಮಟೇಶ್ವರನ ವಿಗ್ರಹ, ಹೊಯ್ಸಳರ ಶಿಲಾಬಾಲಿಕೆ, ಖಜುರಾಹೋ ನಗ್ನ ಶಿಲ್ಪಗಳು ಇವೆಲ್ಲ ಕಂಡಾಗ ಕಾಮ, ಭಾವ, ಬರದು, ಬದಲಿಗೆ ನಾವು ಹೊಂದಬೇಕಾದ ಸಮರ್ಪಣಭಾವವನ್ನು ಬಿತ್ತರಿಸುತ್ತವೆ. ಅಲ್ಲೆಲ್ಲ ಸೌಂದರ್ಯ ಪ್ರಜ್ಞೆ ಎದ್ದು ಕಾಣುತ್ತದೆ. ಮುಚ್ಚು ಮರೆಯಿಲ್ಲದ ತೆರೆದ ಮನ ಅದರ ಪ್ರತೀಕವಾಗಿ ನಗ್ನ ವಿಗ್ರಹಗಳಿರುತ್ತವೆ. ಹೊರತು ವಿಷಯ

ಲೋಲುಪತೆಗಳಲ್ಲ ಏಕೆಂದರೆ ವ್ಯಕ್ತಿ ಹಾಗೂ ಸಾಮಾಜಿಕ ಸಂಬಂಧದಲ್ಲಿ ಕಲೆಗಳು ವಹಿಸುವ ಪಾತ್ರ ಅಪಾರವಾದದ್ದು. ಕಲೆಗಳು ಯುಗದ ಮನಸ್ಸಿನ ಪ್ರತಿನಿಧಿಗಳಾಗಿರುತ್ತವೆ. ಸಮಕಾಲಿನತೆಯ ಕನ್ನಡಿಯಾಗಿರುತ್ತದೆ. ವ್ಯಕ್ತಿ ಸಮೂಹದ ಪ್ರತಿಬಿಂಬಗಳಾಗಿರುತ್ತವೆ. ಯಾವತ್ತೂ ಕಲಾ ಪ್ರೇಮಿಯಾದವನು ಕ್ರೂರಿಯಾಗಿರಲಾರ ವ್ಯಕ್ತಿ ಮತ್ತು ಕಲೆಯ ಸಂಬಂಧವೆಂದರೆ ತಾಯಿ ಮಗುವಿನ ಸಂಬಂಧದಂತೆ ಬೀಜ ವೃಕ್ಷದ ಸಂಬಂಧದಂತೆ

ಉತ್ತಮ ಕಲಾ ಪ್ರಪಂಚದಲ್ಲಿ ಉತ್ತಮ ಸಮಾಜ ಅರಳಲು ಸಾಧ್ಯ ಕಾವ್ಯ ಮೀಮಾಂಸೆಯಲ್ಲಿ ಕಾವ್ಯ ಪ್ರಯೋಜನಗಳಿದ್ದಂತೆ ಲಲಿತಾ ಕಲೆಯ ಪ್ರಯೋಜನಗಳು ಇವೆ. ಸಂಗೀತಕ್ಕೆ ಸಸಿಗಳು ತಲೆಬಾಗುತ್ತವೆ. ಪರ್ವತಗಳು ಕರಗುತ್ತವೆ. ಹೂವು ಅರಳುತ್ತವೆ ಹಾಗೆಯೇ ದೀಪರಾಗದಿಂದ ಕ್ಯಾಲ್ಸಿಯಂ ದೊರೆಯುತ್ತದೆ ಆನಂದ ಭೈರವಿಯಿಂದ ನಿದ್ರೆ ಖಿನ್ನತೆಯಿಂದ ಜಾಗೃತತೆ ತಾಳದಿಂದ ಹೃದಯ ಅರಳುವುದು. ಮೇಘರಾಗದಿಂದ ಮಳೆ ಮೊದಲಾದ ಉಪಯುಕ್ತತೆಗಳು ಸಂಗೀತದ ಕಲೆಯಿಂದ ಉಂಟಾಗುತ್ತದೆ. ಇವುಗಳ ದುರಂತಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು ಅವ್ಯಾಹತವಾಗಿ ಬೆಳೆಯುತ್ತಿರುವ ವೈಜ್ಞಾನಿಕತೆ ಮಾಹಿತಿ ಮತ್ತು ತಂತ್ರಜ್ಞಾನ ಅದರೊಂದಿಗೆ ತಳುಕು ಹಾಕಿಕೊಂಡು ಬೆಳೆಯುತ್ತಿರುವ ಆಧುನಿಕತೆ. ಇನ್ನೊಂದೆಡೆ ತನ್ನ ಕಬಂಧ ಬಾಹುಗಳನ್ನು ಬಾಚಿಕೊಂಡಿರುವ ಜಾಗತೀಕರಣ ಇದರೊಂದಿಗೆ ಬೆಸೆದುಕೊಂಡಿರುವ ಖಾಸಗೀಕರಣ ಹಾಗೂ ಉದಾರೀಕರಣ ಇವೆಲ್ಲವುಗಳ ಮಧ್ಯೆ ಕಲೆಗಳು ಇಂದು ಮಾಯವಾಗುತ್ತಿರುವುದು ನಮ್ಮ ಸಾಂಸ್ಕೃತಿಕ ಅಳಿವಿನ ಸಂಕೇತವೆ ಆಗಿವೆ. ವಾಸ್ತವಿಕವಾಗಿ ಭಾರತವೆಂದರೆ ಬಹು ಸಂಸ್ಕೃತಿಯ ಬಹುಭಾಷೆಯ ನೆಲೆಯಾಗಿದೆ. ಇಲ್ಲಿನ ಕಲೆಗಳ ಮುಖ್ಯ ಲಕ್ಷಣವೇ ವೈವಿಧ್ಯತೆ. ಕಂಪ್ಯೂಟರ್ ಡಿಜಿಟಲ್ ಮೂಲಕ ಸುಂದರ ಹೂವನ್ನು ಹೆಣ್ಣನ್ನು ಸೃಷ್ಟಿಯ ಚಿತ್ರವನ್ನು ರೂಪಿಸಬಹುದು ಅದರ ಕಂಪನ್ನಾಗಲಿ ಪ್ರೀತಿಯನ್ನಾಗಲಿ, ಚಲನೆಯನ್ನಾಗಲಿ, ಸೃಷ್ಟಿಸಲಾಗದು ಕಂಪ್ಯೂಟರ್‌ನಲ್ಲಿ ಕುವೆಂಪು ಅವರ ಕಾವ್ಯವನ್ನು ಸೆರೆ ಹಿಡಿಯಬಹುದೇ ಏನಃ ರಾಮಾಯಣ ದರ್ಶನಂ ನಂತಹ ಕಾವ್ಯ ಮಹಾ ಕಾದಂಬರಿಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ ಕಂಪ್ಯೂಟರ್‌ನಲ್ಲಿ ಶಹನಾಯಿಯನಾದ ಶೇಖರಿಸಿ ನುಡಿಸಬಹುದೇ ಹೊರತಾಗಿ ಬಿಸಮಿಲ್ಲಾಖಾನನನ್ನು ಸೃಷ್ಟಿಸಲು ಸಾಧ್ಯವಿಲ್ಲ ಅದಕ್ಕಾಗಿ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನವೇ ನಮ್ಮ ಎಲ್ಲಾ ಆಶೆಗಳನ್ನು ಕೊರತೆಗಳನ್ನು ಪೂರೈಸುತ್ತದೆನ್ನಲಾಗದು ಲಲಿತಾ ಕಲೆಗಳು ಮಾತ್ರ ನಮ್ಮ ಬಹುತೇಕ ಆಶಾವಾದ ಪೂರೈಕೆಯ ಸಾಧನವೆಂಬುದನ್ನು ಎಲ್ಲರೂ ಮನವರಿಕೆ ಮಾಡಿಕೊಂಡು ಲಲಿತಾ ಕಲೆಗಳನ್ನು ಉಳಿಸಿ ಬೆಳಸಬೇಕಾಗಿದೆ.



# ರಸ್ತೆಗಳ ಮಹತ್ವ

**ಪುರುಷೋತ್ತಮ. ಬಿ.**
ತೃತೀಯ ಬಿ.ಎ. (ಹೆಚ್.ಇ.ಪಿ.)

ಪ್ರಾಚೀನ ಕಾಲದಿಂದಲು ರಸ್ತೆಗಳು ತನ್ನದೆಯಾದ ಮಹತ್ವವನ್ನು ಹೊಂದಿವೆ. ರಸ್ತೆಗಳು ಜನರ ಜೀವನಾಡಿಗಳಂತೆ ಕಾರ್ಯ ನಿರ್ವಹಿಸುತ್ತವೆ. ರಸ್ತೆಗಳು ಮನುಷ್ಯನನ್ನು ಸಂಪರ್ಕಿಸುವ ಕೊಂಡಿಗಳಂತೆ ಕಾರ್ಯ ನಿರ್ವಹಿಸುತ್ತವೆ. ಪ್ರಾಚೀನ ಕಾಲದಲ್ಲಿ ರಸ್ತೆಗಳಿಗೆ ಯಾವುದೇ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿರಲಿಲ್ಲ ಆದರೆ ಇಂದಿನ ದಿವಸ ದೇಶದ ಅಭಿವೃದ್ಧಿಯಲ್ಲಿ ರಸ್ತೆಗಳ ಪಾತ್ರ ಬಹಳ ಮುಖ್ಯವಾಗಿದೆ. ಮಾನವನ ದೇಹದಲ್ಲಿ ರಕ್ತವು ಹೇಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತದೆಯೋ ಹಾಗೆ ಸರಕು ಮತ್ತು ಸೇವೆಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಪ್ರಮುಖ ಮಾರ್ಗವೆಂದರೇ ಅದು ರಸ್ತೆಗಳು ಮಾತ್ರ.

ಒಂದು ದೇಶದ ರಸ್ತೆಗಳು ಮತ್ತು ದೇಶದ ಅಭಿವೃದ್ಧಿ ಹಾಗೂ ಸೌಂದರ್ಯವನ್ನು ನಿರ್ಧರಿಸುತ್ತವೆ. ರಸ್ತೆಗಳು ಮೂಲಕ ಜನರು ಒಂದು  ಕಡೆಯಿಂದ ಮತ್ತೊಂದು ಕಡೆ ಇರುವ ಜನರ ನಡುವೆ ಸಂಪರ್ಕವನ್ನು ಕಲ್ಪಿಸುತ್ತವೆ.

ರಾಜ್ಯ ರಾಜ್ಯಗಳ ನಡುವೆ ಸಂಪರ್ಕವನ್ನು ಕಲ್ಪಿಸಿ ವ್ಯವಹಾರಗಳನ್ನು ನಡೆಸಲು ಉತ್ತಮವಾದ ಬಾಂಧವ್ಯವನ್ನು ಹೊಂದಲು ಸಹಕಾರಿಯಾಗುತ್ತವೆ. ರಸ್ತೆಗಳಲ್ಲಿ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಾಹನಗಳಲ್ಲಿ ಚಲಿಸಲು ಹಾಗೂ ಕಡಿಮೆ ಸಮಯದಲ್ಲಿ ತಲುಪುವಲ್ಲಿ ಸಹಾಯಕಾರಿಯಾಗುತ್ತದೆ. ರಸ್ತೆಗಳು ಕೃಷಿ ಕ್ಷೇತ್ರದ ಅಭಿವೃದ್ಧಿಗೂ ಸಹಾಯಕವಾಗಿದೆ. ರೈತರು ಬೆಳೆದ ವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು ಸಹಕಾರಿಯಾಗಿದೆ. ರಸ್ತೆಗಳು ತನ್ನದೇ ಆದ ವಿಧಗಳನ್ನು ಹೊಂದಿದೆ ಅವುಗಳೆಂದರೆ:–

- **ರಾಷ್ಟ್ರೀಯ ಹೆದ್ದಾರಿಗಳು:**– 7 ರಸ್ತೆಗಳು ದೇಶದ ರಾಜಧಾನಿ ಮತ್ತು ಎಲ್ಲಾ ರಾಜ್ಯಗಳ ರಾಜಧಾನಿಗಳು ಮತ್ತು ಪ್ರಮುಖ ಬಂದರುಗಳಿಗೆ ಸಂಪರ್ಕವನ್ನು ಕಲ್ಪಿಸುತ್ತವೆ.

**ಭಾರತದ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳು :**

NH No – 1  ದೆಹಲಿ – ಅಮೃತಸರ

NH No – 2  ದೆಹಲಿ – ಕೋಲ್ಕತ್ತಾ

NH No – 1 + NH No – 2  ಆಗ್ರಾ – ಮುಂಬೈ

NH No – 4  ಥಾಣೆ –  ಚೆನ್ನೈ

NH No – 6  ಧುಲೇ – ಕೋಲ್ಕತ್ತಾ

NH No – 7  ವಾರಣಾಸಿ – ಕನ್ಯಾಕುಮಾರಿ

NH No – 8 ದೆಹಲಿ – ಮುಂಬೈ

- **ರಾಜ್ಯ ಹೆದ್ದಾರಿಗಳು :** ಇವುಗಳು ರಾಜ್ಯಗಳ ನಡುವೆ ಎಲ್ಲಾ ಜಿಲ್ಲೆ ಮತ್ತು ಪ್ರಮುಖ ಪ್ರದೇಶಗಳನ್ನು ಸಂಪರ್ಕಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.
- **ಜಿಲ್ಲಾ ರಸ್ತೆಗಳು :** ಇವುಗಳು ಜಿಲ್ಲಾ ಕೇಂದ್ರದಿಂದ ಎಲ್ಲಾ ತಾಲ್ಲೂಕು ಹಾಗೂ ಇತರೆ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳಾಗಿವೆ.
- **ಗ್ರಾಮೀಣ ರಸ್ತೆಗಳು:** ಇವುಗಳು ಗ್ರಾಮೀಣ ಪ್ರದೇಶದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಗ್ರಾಮ ಗ್ರಾಮಗಳ ನಡುವೆ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತವೆ.

ಹೀಗೆ ರಸ್ತೆಗಳು ಜನ ದಿನ ನಿತ್ಯದ ಜೀವನದಲ್ಲಿ ಅತಿ ಮುಖ್ಯ ಅಂಶವಾಗಿದೆ. ರಸ್ತೆಗಳು ಇಲ್ಲದೆ ಹೋದರೆ ಮನುಷ್ಯರ ನಡುವೆ ಸಂಪರ್ಕವೆ ಇಲ್ಲದಂತೆ ಆಗುತ್ತದೆ ಇದರಿಂದ ಇತ್ತೀಚಿನ ದಿನಗಳಲ್ಲಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತದೆ. ■

# ಕಾವ್ಯ ಪ್ರಯೋಜನ

**ಅರ್ಪಿತಾ ಎಸ್.**
ದ್ವಿತೀಯ ಬಿ.ಎಸ್‌ಸಿ. ('ಸಿ' ವಿಭಾಗ)

ಕಾವ್ಯವನ್ನು ರಚಿಸುವುದರಿಂದ ಕವಿಗಾಗಲೀ ರಚಿಸಿದ ಕಾವ್ಯಗಳನ್ನು ಓದುವುದರಿಂದ ಸಹೃದಯರಿಗೆ ಆಗುವ ಉಪಯೋಗವೇನು ಎಂಬ ಪ್ರಶ್ನೆಗೆ ಅನೇಕ ಲಾಕ್ಷಣಿಕರು ಅನೇಕ ಬಗೆಯಲ್ಲಿ ಉತ್ತರಿಸಿದ್ದಾರೆ.

ಭರತ ಮುನಿ ತನ್ನ ನಾಟ್ಯ ಶಾಸ್ತ್ರದಲ್ಲಿ ನಾಟ್ಯ ಪ್ರಯೋಜನವನ್ನು ಹೇಳುತ್ತ ಲೋಕದಲ್ಲಿ ನಾಟ್ಯವೆಂಬುದು ದುಃಖ, ಶ್ರಮ ಮತ್ತು ಶೋಕದಿಂದ ಬೇಸತ್ತ ಜನರಿಗೆ ವಿಶ್ರಾಮಜನಕವಾಗುತ್ತದೆ ಎಂದಿದ್ದಾರೆ.

ಸಾಧುಕಾವ್ಯ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಲ್ಲಿ ವೈಚಕ್ಷಣ್ಯವನ್ನು, ಪ್ರೀತಿಯನ್ನು ಕೀರ್ತಿಯನ್ನು ಉಂಟುಮಾಡುತ್ತದೆ ಎಂಬುದು ಭಾಮಹ, ವಾಮನ ಮುಂತಾದವರ ಅಭಿಪ್ರಾಯ.

"ಕಾವ್ಯಂಯಶಸೇ ಅರ್ಥಕೃತೆ ವ್ಯವಹಾರವಿದೇ ಶ್ರೀವೇತರಕ್ಷತಯೇ। ಸಧ್ಯ ಪರನಿರ್ವೃಯೇ ಕಾಂತಾಸಂಮಿತ ತಯೋಪದೇಶಯುಜೇ" ॥ (ಮಮ್ಮಟ) ಕಾವ್ಯ ಪ್ರಕಾಶಕಾರನಾದ ಮಮ್ಮಟ ಎಲ್ಲ ಅಲಂಕಾರಿಕರ ಅಭಿಪ್ರಾಯವನ್ನು ಕ್ರೋಢಿಕರಿಸಿ ಕಾವ್ಯದ ಯಶಸ್ಸಿಗಾಗಿ, ಧನಾರ್ಜನೆಗಾಗಿ, ವ್ಯವಹಾರರ ಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲೇ ಆನಂದಾನುಭವಕ್ಕಾಗಿ ಮತ್ತು ಕಾಂತೆಯಂತೆ ಉಪದೇಶಿಸುವುದಕ್ಕಾಗಿ ಎಂದು ಹೇಳಿ ಕಾವ್ಯ ಸೃಷ್ಟಿಗೆ ಹೆಚ್ಚು ವ್ಯಾಪಕದ ಪ್ರಯೋಜನವನ್ನೇ ಹೇಳಿದ್ದರೂ ರಸಾಸ್ವಾದನ ಕ್ಷಣದಲ್ಲಿಯೇ ಜನಿಸಿ, ಬೇರೆಲ್ಲವನ್ನು ಮರೆಸಿಬಿಡುವಂಥ ಪರನಿರ್ವೃತಿಯ ಆನಂದವೇ – ಸಕಲ ಪ್ರಯೋಜನಗಳ ಮೂಲ ಭೂತವಾದುದು' ಎಂಬ ಅಂಶವನ್ನು ಒತ್ತಿ ಹೇಳಿದ್ದಾರೆ.

**ಮಮ್ಮಟನ (ಅಭಿಪ್ರಾಯದಂತೆ) ಕಾವ್ಯದಿಂದ ಸಹೃದಯರಿಗೆ ಆಗುವ ಪ್ರಯೋಜನಗಳು :–**

- ಕಾವ್ಯ ಓದುವುದರಿಂದ ವ್ಯವಹಾರ ಜ್ಞಾನ ಬೆಳೆಸಿಕೊಳ್ಳುತ್ತಾರೆ ಅವರ ಅನುಭವ ವಿಸ್ತಾರವಾಗುತ್ತದೆ.
- ಓದುಗರ ಲೋಕ ವ್ಯವಹಾರಗಳಿಂದ ಅಲ್ಪಸಮಯ ನಿವೃತ್ತಿ ಹೊಂದಿ ರಸಾನುಭವಕ್ಕೊಳಗಾಗುತ್ತಾರೆ.
- ಕಾವ್ಯವಯ ಸಹೃದಯರಿಗೆ ಕಾಂತೆಯಂತೆ ಉಪದೇಶವನ್ನು ನೀಡುವುದು ಅವರ ಬುದ್ಧಿ, ನಡತೆಯನ್ನು ತಿದ್ದುವ ಕೆಲಸ ಮಾಡುತ್ತದೆ.
- ಕೃತಿಯನ್ನು ಓದುವುದರಿಂದ ಅಮಂಗಳ ಪ್ರವೃತ್ತಿಗಳು ನಾಶವಾಗಿ ಓದುಗರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ.

ಪಂಪ ತನ್ನ ಆದಿಪುರಾಣದ ಪೀಠಿಕಾ ಪ್ರಕರಣದಲ್ಲಿ ಹೇಳಿರುವ ಮಾತುಗಳು ಬಹಳ ಮಾರ್ಮಿಕವಾಗಿವೆ. ಕವಿತೆಯಲ್ಲಿ ಆಸೆ ಮಾಡುವುದರಿಂದ ಒದಗುವ ಫಲವೇನು? ಪೂಜೆಯೇ? ಕೀರ್ತಿಯೇ? ಧನಕನಕಗಳೇ? ಲೋಕೋತ್ತರವಾದ ಕೀರ್ತಿ ಮುಕ್ತಿಲಾಭ ಇವು ಜಿನೇಂದ್ರನ ಗುಣಸ್ತುತಿಯಿಂದ ತಾನೇ ಒದಗುತ್ತವೆ. ಬೇರೆಯವರು ಕೊಡುವುದೇನನ್ನು, ಮಾಡುವುದೇನನ್ನು ಅವರಿಂದ ಆಗಬೇಕಾದದ್ದೇನು ಎಂಬ ಪ್ರಶ್ನೆಗಳಿವೆ.

ಕಾವ್ಯವು ಸೃಷ್ಟಿಸಿದ ಕವಿಗೆ ಆನಂದ, ಯಶಸ್ಸುಗಳನ್ನು, ಸಹೃದಯರಿಗೆ ಆನಂದ, ವ್ಯವಹಾರಜ್ಞಾನ ಮತ್ತು ಉಪದೇಶಾದಿಗಳನ್ನು ಒದಗಿಸುತ್ತದೆ. ಕಾವ್ಯ ಕಲೆಯ ಸದ್ಯದ ಪ್ರಯೋಜನವು ಕವಿ ಸಹೃದಯರಿಬ್ಬರಿಗೂ ಸೌಂದರ್ಯಾನುಭೂತಿಯಿಂದುಂಟಾಗುವವ ಲೋಕೊತ್ತರವಾದ ಆನಂದದ ಮೂಲಕ ಸಿಗುವುದು. ಕೆಲ ಅಭಿಪ್ರಾಯಗಳನ್ನು ನೋಡಿದಾಗ ಕಾವ್ಯಮೀಮಾಂಸಕರು ಪ್ರಯೋಜನ ಎಂಬ ಪದವನ್ನು ವಿಶಿಷ್ಟಾರ್ಥದಲ್ಲಿ ಬಳಸಿರುವಂತೆ ಕಾಣುತ್ತದೆ. ಇಲ್ಲಿಯ ಪ್ರಯೋಜನ ವ್ಯಾವಹಾರಿಕ ದೃಷ್ಟಿಯದಲ್ಲ ವ್ಯವಹಾರದಲ್ಲಿ ಮನುಷ್ಯ ಹಣದ ಆಸೆಯಿಂದ, ಯಶಸ್ಸಿನ ಆಸೆಯಿಂದ, ಬೇರಾವುದೋ ಲಾಭದ ಆಸೆಯಿಂದ ಕೆಲಸ ಮಾಡುತ್ತಾನೆ. ಅಂತಹ ಲಾಭ ಕಾವ್ಯ ರಚನೆಯಿಂದ ಕವಿಗೆ ಅಥವಾ ಕಾವ್ಯವ್ಯಾಸಂಗದಿಂದ ಓದುಗರಿಗೆ ಲಭಿಸುವುದಿಲ್ಲವೆಂಬುದು ಲಾಕ್ಷಣಿಕರ ಅಭಿಪ್ರಾಯ.

ಕಲೆಯಿಂದ ದೊರಕುವ ಪ್ರಯೋಜನ ಲೌಕಿಕ ಲಾಭವಲ್ಲ. ಅದು ಬರೆದವರಿಗೂ, ಓದುವವರಿಗೂ ಸಿಗುವ ಆನಂದ. ಅದೇ ಕಲೆಯ ಪರಮ ಪ್ರಯೋಜನ. ಕಾವ್ಯ ರಚನೆ ಮತ್ತು ಕಾವ್ಯವ್ಯಾಸಂಗದ ಹವ್ಯಾಸ ಜನರ ದುಃಖವನ್ನು ನಿವಾರಿಸಿ ವಿಶ್ರಾಂತಿ – ಚೈತನ್ಯವನ್ನು ಒದಗಿಸುತ್ತದೆ. ಎಲ್ಲ ಹವ್ಯಾಸಗಳಿಗಿಂತ ಕಲೆಯ ಹವ್ಯಾಸ ಉತ್ತಮವಾದದ್ದು.

ಮಹೇಂದ್ರ, ಈ. ಪ್ರಥಮ ಬಿ.

ಏಳಿ ಎಚ್ಚರಗೊಳ್ಳಿ!
ಇತರರನ್ನು ಎಚ್ಚರಗೊಳಿಸಿ!
ಗುರಿ ಮುಟ್ಟುವವರೆಗೂ ನಿಲ್ಲದಿರಿ!
ನಿಮ್ಮೊಳಗೊಂದು ವ್ಯಕ್ತಿತ್ವ ಅಡಗಿದೆ!
ಯಾವಾಗ ನೂರಾರು ಉದಾರ
ಹೃದಯಗಳಾದ ಯುವಕ
ಯುವತಿಯರು ಭೋಗ ಮತ್ತು
ಸುಖ ಸೌಕರ್ಯಗಳ ಲಾಲಸೆಯನ್ನು
ತೊರೆದು ದಾರಿದ್ರ್ಯ ಮತ್ತು
ಅಜ್ಞಾನದಲ್ಲಿ ಮುಳುಗುತ್ತಿರುವ
ಕೋಟಿಗಟ್ಟಲೆ ಭಾರತೀಯರ
ಮೇಲ್ಮೆಗಾಗಿ ಶಕ್ತಿ ಮೀರಿ
ದುಡಿಯುವರೋ ಅಂದು
ನಮ್ಮ ದೇಶ ಉದ್ದಾರವಾಗುವುದು.

## ಸ್ವಾಮಿ ವಿವೇಕಾನಂದರು

**ಜೀವನ ಕಥೆ :** 1863 ಜನವರಿ 12 ರಂದು ಕಲ್ಕತ್ತದಲ್ಲಿ ಜನಿಸಿದ ನರೇಂದ್ರನಾಥದತ್ತ ಸದಾ ಅಧ್ಯಯನಶೀಲ, ಪ್ರಪಂಚ ಮೇಧಾವಿ, ಬುದ್ಧಿವಂತ ತನ್ನ ತಾರುಣ್ಯ ಹೊಸ್ತಿಲಲ್ಲಿ 1881 ನವೆಂಬರ್‌ನಲ್ಲಿ ದಿವ್ಯಪುರುಷ ಶ್ರೀರಾಮಕೃಷ್ಣ ಪರಮಹಂಸರ ಸಂಪರ್ಕದಿಂದ ಆಧ್ಯಾತ್ಮ ಹಾದಿ ಹಿಡಿದು ಸರ್ವಸಂಗ ಪರಿತ್ಯಾಗಿಯಾಗಿ ಆತ್ಮಾನುಭವ ಪಡೆದು ಸ್ವಾಮಿ ವಿವೇಕನಂದರಾಗಿ ಪ್ರಸಿದ್ಧರಾದರು. ಕಾವಿಯನ್ನುಟ್ಟು ತಾಯ್ನಾಡಿನ ಮೇಲಿನ ಅಪಾರ ಪ್ರೇಮದಿಂದ ಈ ದೇಶದ ಉದ್ದಗಲವನ್ನು ಕಾಲ್ನಡಿಗೆಯಲ್ಲಿ ಸುತ್ತಿ ದೇಶವಾಸಿಗಳ ಹೃದಯ ಮಿಡಿತವನ್ನು ಅರಿತರು. 1892 ಡಿಸೆಂಬರ್‌ನಲ್ಲಿ ಕನ್ಯಾಕುಮಾರಿಯ ಸಮುದ್ರದ ನಡುಗಡ್ಡೆಯಲ್ಲಿ ಧ್ಯಾನದಲ್ಲಿ ಮಗ್ನರಾಗಿ ಕುಳಿತ ನಂತರ ಸಮ್ಮೇಳನದಲ್ಲಿ ಭಾರತದ ಹಿರಿಮೆಯನ್ನು ಸಾರಿದರು.

1897 ಮೇ 1 ರಂದು ಸಮಾಜಸೇವೆಗಾಗಿ ರಾಮಕೃಷ್ಣ ಮಠ ಸ್ಥಾಪಿಸಿದರು. 1902 ಜುಲೈ 4 ರಂದು ಕಲ್ಕತ್ತಾದ ಬೇಲೂರು ಮಠದಲ್ಲಿ ಕೊನೆಯುಸಿರೆಳೆದ ಸ್ವಾಮಿ ವಿವೇಕಾನಂದರು ಕೇವಲ 39 ವರ್ಷಗಳ ಕಾಲ ಜೀವಿಸಿದ್ದರು. ಇಷ್ಟು ಅಲ್ಪಸಮಯದಲ್ಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅರಿವು ಮೂಡಿಸಿದರು. ಭಾರತದ ಆತ್ಮವನ್ನು ಎಚ್ಚರಿಸಿದರು.

ಸನಾತನ ಧರ್ಮವನ್ನು ಸಿಂಹಘರ್ಜನೆಯಿಂದ ದೇಶವಿದೇಶಗಳಲ್ಲಿ ಸಾರಿದ ವೇದಾಂತ ಕೇಸರಿ, ಭರತ ಖಂಡಕ್ಕಾಗಿ ತನ್ನ ಎದೆಯ ರಕ್ತವನ್ನು ಬಸಿದ ಉಜ್ವಲ ದೇಶಭಕ್ತತನ ವಿಚಾರಗಳು ಇಂದಿಗೂ ಪ್ರಸ್ತುತ ಆ ಮಹಾಸಂತ ತೋರಿದ ಬೆಳಕಲ್ಲಿ ನಾವು ಮುನ್ನಡೆದು ಭವ್ಯ ಭಾರತ ನಿರ್ಮಿಸೋಣ.

**ಕೃತಿಗಳು :** ಕೋಲಂಬೋದಿಂದ ಆಲ್ಮೋರಕೆ, ನನ್ನ ಸಮರ ನೀತಿ, ನಾಡಿಗೆ ಕರೆ, ಭಕ್ತಿ, ಶಿಷ್ಯನ ಲಕ್ಷಣ, ಭವ್ಯ ಭಾರತ ನಿರ್ಮಾಣ. ಸ್ವಾಮಿ ವಿವೇಕನಂದರ ಕೃತಿಶ್ರೇಣಿ (1 ರಿಂದ 8 ಸಂಪುಟಗಳು) ಮಕ್ಕಳ ವಿವೇಕಾನಂದ (ಸಚಿತ್ರ)

* ಭಾರತೀಯರು ಮೊದಲು ಧಾರ್ಮಿಕ ನಂತರ ಮಿಕ್ಕೆಲ್ಲವೂ ಹೌದು ನಮ್ಮ ಜೀವನದ ರಕ್ತವೇ ಆಧ್ಯಾತ್ಮಿಕತೆ ಅದು ಸ್ವಚ್ಛವಾಗಿ ಶುದ್ಧವಾಗಿ ಶಕ್ತವಾಗಿ ಸತ್ವ ಸ್ಪೂರ್ತಿಗಳಿಂದ ಹರಿದರೆ ಎಲ್ಲವೂ ಸರಿ ಹೋಗುವುದು.
* ಎಲ್ಲಾ ದೇಶಗಳಿಂದ ಉತ್ತಮವಾದುದನ್ನು ಪಡೆದುಕೊಳ್ಳಬೇಕು ಅದನ್ನು ಜೀರ್ಣಿಸಿಕೊಳ್ಳಬೇಕು. ಆದರೆ ನಾವು ಹಿಂದುಗಳೆಂಬುದನ್ನು ಮರೆಯಬಾರದು ನಮ್ಮ ತನವನ್ನು ತ್ಯಜಿಸಿ ಪಾಶ್ಚಾತ್ಯ ನಾಗರಿಕತೆಗೆ ದಾಸರಾದರೆ ನಮ್ಮ ನಾಶ ನಿಶ್ಚಿತ ನಮ್ಮ ಪೂರ್ವಜರು ನಮಗಿತ್ತಿರುವ ಅಮೂಲ್ಯವಾದ ಧರ್ಮವನ್ನು ರಕ್ಷಿಸುವುದೇ ನಮ್ಮ ಶ್ರೇಯಸ್ಸಿನ ದಾರಿ.

## ಸ್ವಾಮಿ ವಿವೇಕಾನಂದರ ಜೀವನದ ಘಟನೆಗಳು

ಒಂದು ದಿನ ನರೇಂದ್ರನು (ಸ್ವಾಮಿ ವಿವೇಕಾನಂದ) ಜೊತೆಯ ಹುಡುಗರನ್ನೆಲ್ಲ ಕೂಡಿಕೊಂಡು ಆಟಕ್ಕಾಗಿ ದೇವರ ಪೂಜೆ ಭಜನೆ ಮಾಡಿ ಧ್ಯಾನಕ್ಕೆ ಕುಳಿತನು. ಕುಳಿತ ಹಲವು ಹುಡುಗರು ಕಣ್ಣನ್ನು ಮುಚ್ಚಿದರೂ ಅವರ ಪ್ರಜ್ಞೆಯೆಲ್ಲ ಸುತ್ತ ಮುತ್ತಲ ವಸ್ತುವಿನ ಕಡೆ. ನರೇಂದ್ರನು ಆಟಕ್ಕಾಗಿ ಧ್ಯಾನಕ್ಕೆ ಕುಳಿತುಕೊಂಡರೂ ಅದು ನಿಜವಾದ ಧ್ಯಾನವಾಗಿ ಸುತ್ತ ಮುತ್ತಲಿರುವುದನ್ನೆಲ್ಲಾ ಸಂಪೂರ್ಣ ಮರೆತ. ಆ ಸಮಯದಲ್ಲಿ ಒಂದು ಸರ್ಪ ಮೂಲೆಯೊಂದರಿಂದ ಹೆಡೆ ಎತ್ತಿಕೊಂಡು ಬರುತ್ತಿತ್ತು. ಕಣ್ಣು ಬಿಟ್ಟುಕೊಂಡಿದ್ದ ಇತರ ಹುಡುಗರು 'ಹಾವು' ಎಂದು ಕಿರಿಚಿಕೊಂಡೊಡನೆಯೇ ಎಲ್ಲರೂ ಪರಾರಿಯಾದರು. ಅವರಲ್ಲಿ ಒಬ್ಬ ಧೈರ್ಯಶಾಲಿ ಹುಡುಗ ಬಂದು ನರೇಂದ್ರನನ್ನು ಅಲ್ಲಾಡಿಸಿ. "ಹಾವೊಂದು ಬರುತ್ತಿದೆ. ಎದ್ದು ಓಡು" ಎಂದು ಹೇಳಿ ತಾನೂ ಪರಾರಿಯಾದನು ನರೇಂದ್ರನಾದರೂ ಸ್ವಲ್ಪವೂ ಚಲಿಸಲಿಲ್ಲ. ಹೆಡೆ ಎತ್ತಿದ ಹಾವು ಬಂದು ಇವನ ಸುತ್ತ ಸಂಚರಿಸಿ ಹುಡುಗನಿಗೆ ಯಾವ ಅಪಾಯವನ್ನು ಮಾಡದೆ ಹೊರಟು ಹೋಯಿತು. ಇವನ ಗುರುಗಳಾದ ಶ್ರೀರಾಮಕೃಷ್ಣ ಪರಮಹಂಸರು ಕಂಡ ತತ್‌ಕ್ಷಣವೇ ಇವನ ಕಣ್ಣುಗಳನ್ನು ನೋಡಿ ಹೇಳಿದರು. "ಇವನು ಧ್ಯಾನಸಿದ್ಧ" ಎಂದು ನರೇಂದ್ರ ಅದ್ಭುತವಾದ ಮಾನಸಿಕ ಏಕಾಗ್ರತೆಯನ್ನು ಪಡೆದು ಬಂದಿದ್ದನು. "ಮನಸ್ಸು ನನ್ನ ಕೈಯಲ್ಲಿ ಬಂದು ಜೇಡಿಮಣ್ಣಿನ ಮುದ್ದೆಯಂತೆ ಅದಕ್ಕೆ ಏನನು ಆಕಾರ ಕೊಟ್ಟರೆ ಅದನ್ನು ಅದು ತೆಗೆದುಕೊಳ್ಳಬೇಕು" ಎಂದು ನರೇಂದ್ರ ಹೇಳುತ್ತಿದ್ದ.

ನರೇಂದ್ರನಾಥನಿಗೆ ಎಂಟು ವರುಷಗಳು ತುಂಬುವ ಹೊತ್ತಿಗೆ ಅವನನ್ನು ಈಶ್ವರಚಂದ್ರ ವಿದ್ಯಾಸಾಗರನ ಶಾಲೆಗೆ ಹಾಕಿದರು. ಅಲ್ಲಿ ನರೇಂದ್ರ ಚೆನ್ನಾಗಿ ಓದಲು ಉಪಕ್ರಮಿಸಿದನು. ತನ್ನ ಬುದ್ಧಿ ಚತುರತೆಯಿಂದ ಎಲ್ಲಾ ಉಪಾಧ್ಯಾಯರನ್ನ ಒಲಿಸಿಕೊಂಡನು. ಆದರೆ ನರೇಂದ್ರ ಕ್ಲಾಸಿನ ರೂಮಿನಲ್ಲಿರುವಾಗಲು ಶಾಂತಿಯಿಂದ ಇರುತ್ತಿರಲಿಲ್ಲ. ನರೇಂದ್ರನದು ಅಂತಹ ಪ್ರಪಂಚ ಬುದ್ಧಿಶಕ್ತಿ. ಉಪಾಧ್ಯಾಯರು ಹೇಳುವ ಪಾಠವೇ ಕ್ಷಣಾರ್ಧದಲ್ಲಿ ಗ್ರಹಿಸಿ ಬಿಡುತ್ತಿದ್ದ ಮಿಕ್ಕ ಕಾಲವನ್ನು ಸ್ನೇಹಿತರೊಡನೆ ಹಾಸ್ಯ ಪರಿಹಾಸ್ಯಗಳನ್ನು ಮಾಡುತ್ತಿದ್ದನು. ತಾನು ಓದಿದ ಅಥವಾ ಕೇಳಿದ ಕಥೆಗಳನ್ನು ಹುಡುಗರಿಗೆ ಹೇಳುವುದು ಅವರಲ್ಲಿತ್ತು.

**ಒಂದು ಸಲ ಶ್ರೀರಾಮಕೃಷ್ಣರು ವೈಷ್ಣವ ಸಂಪ್ರದಾಯವನ್ನು ಕುರಿತು ಅದರಲ್ಲಿ ಮೂರು ವರ್ಷಗಳಿವೆ:**

ಮೊದಲನೆಯದು ದೇವರ ಹೆಸರಿನಲ್ಲಿ ಆನಂದ ಪಡುವುದು.

ಎರಡನೇಯದು ಜೀವಿಗಳಿಗೆ ದಯೆ ತೋರುವುದು.

ಮೂರನೇಯದು ವೈಷ್ಣವರಿಗೆ ಸೇವೆ ಮಾಡುವುದು ಎಂದು ಹೇಳಿದರು.

ಜೀವಿಗಳಿಗೆ ದಯೆ ತೋರುವುದೆಂಬ ಪದವನ್ನು ಎಚ್ಚರಿಸಿದೊಡನೆಯೇ ಅವರು ಸಮಾಧಿ ಮಗ್ನರಾಗಿ ಹಿಂತಿರುಗಿ ಬಂದ ಮೇಲೆ "ಜೀವರಿಗೆ ದಯೆ! ಜೀವರಿಗೆ ದಯೆ! ಎಂದು ಅವಕ್ಕಾದರು "ಮಾನವ ತೃಣದಂತೆ ನೆಲದ ಮೇಲೆ ಹರಿದಾಡುತ್ತಿರುವನು. ಇವನು ಮತ್ತೊಬ್ಬ ಜೀವಿಗೆ ದಯೆ ತೋರುವನೆ! ಇಲ್ಲ ಎಂದಿಗೂ ಇದು ಸಾಧ್ಯವಾಗಲಾರದು. ಪ್ರತಿಯೊಂದು ಜೀವಿಯಲ್ಲಿಯೂ ಈಶ್ವರನಿರುವನು ಎಂದು ತಿಳಿದು ಅವನಿಗೆ ಸೇವೆಯನ್ನು ಮಾತ್ರ ಮಾಡಬಹುದು" ಎಂದರು ಅವರ ದೃಷ್ಟಿಯಲ್ಲಿ ಭಗವಂತನೊಬ್ಬನೇ ಜೀವರಿಗೆ ದಯೆ ತೋರಬಲ್ಲ ಜೀವಿಗಳಾದರೊ ಮತ್ತೊಬ್ಬರಿಗೆ "ಇಂದು ನಾನೊಂದು ಹೊಸ ಬೆಳಕನ್ನು ಕಂಡೆ ಬದುಕಿದ್ದರೆ ಜಗತ್ತಿನಲ್ಲಿ ಇದನ್ನು ಸಾರುತ್ತೇನೆ". ಎಂದು ಹೇಳಿದನು. ಅನಂತರ ವಿವೇಕಾನಂದರಾದ ಮೇಲೆ ಮಾಡಿದ ಮೇಘವಾದ ಕರ್ಮ ಯೋಗದ ಉಪನ್ಯಾಸವೆಲ್ಲ ಶ್ರೀರಾಮಕೃಷ್ಣರ ಬಾಯಿಂದ ಕೇಳಿದ ಒಂದು ಸೂತ್ರದಂತಹ ಮಾತಿಗೆ ಮಾಡಿದ ವ್ಯಾಖ್ಯಾನ.

ವಿವೇಕಾನಂದರು ಒಂದು ದಿನ ಕಾಶೀಯ ಬೀದಿಯಲ್ಲಿ ಹೋಗುತ್ತಿದ್ದರು. ಕೆಲವು ಕಪಿಗಳು ಅವರನ್ನು ಅಟ್ಟಿಸಿಕೊಂಡು ಬಂದವು. ಮೊದಲು ಅವುಗಳಿಂದ ತಪ್ಪಿಸಿಕೊಳ್ಳಲು ಓಡತೊಡಗಿದರು ಯಾರೋ ಒಬ್ಬರು ಒಂದು ಮಹಡಿಯ ಮೇಲೆ ನಿಂತು ಇದನ್ನು ನೋಡುತ್ತಿದ್ದವರು "ಸ್ವಾಮಿಗಳೇ ಓಡಿ ಹೋಗಬೇಡಿ ಕಪಿಗಳನ್ನು ಎದುರಿಸಿ" ಎಂದು ಹೇಳಿದರು. ವಿವೇಕಾನಂದರು ಆತನ ಬುದ್ಧಿವಾದದಂತೆ ಹಿಂತಿರುಗಿ ಕಪಿಗಳನ್ನು ಧೈರ್ಯವಾಗಿ ಎದುರಿಸಿ ನಿಂತರೋ ಇಲ್ಲವೋ ಕಪಿಗಳೆಲ್ಲ ಪಲಾಯನ ಮಾಡಿದವು ವಿವೇಕಾನಂದರು ಆ ಬಂದು ಘಟನೆಯ ಉದಾಹರಣೆಯನ್ನು ಅನೇಕ ವೇಳೆ ತಮ್ಮ ಉಪನ್ಯಾಸಗಳಲ್ಲಿ ಕೊಡುತ್ತಿದ್ದರು. ಪ್ರಕೃತಿಯನ್ನು ಎದುರಿಸಬೇಕು. ಅಜ್ಞಾನವನ್ನು ಎದುರಿಸಬೇಕು. ಭ್ರಾಂತಿಯನ್ನು ಎದುರಿಸಬೇಕು ಆಗಲೇ ಅವು ತಮ್ಮ ಹಿಂದಿರುವ ಸತ್ಯವನ್ನು ನಮಗೆ ತೋರಿಸುತ್ತವೆ.

## ಸ್ವಾಮಿ ವಿವೇಕಾನಂದರ ಬೋಧನೆ ವಿದ್ಯಾಭ್ಯಾಸ

ಮನುಷ್ಯನಲ್ಲಿ ಆಗಲೇ ಅಂತರ್ಗತವಾಗಿರುವ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ವಿದ್ಯಾಭ್ಯಾಸ ಜ್ಞಾನ ಮಾನವನಿಗೆ ಸ್ವಾಭಾವಿಕವಾದುದು ಯಾವ ಜ್ಞಾನವೂ ಹೊರಗಿನಿಂದ ಬರುವುದಿಲ್ಲ. ಎಲ್ಲವೂ ಆಗಲೇ ಅಂತರ್ಗತವಾಗಿದೆ. ನಾವು ಯಾವ... ಮನುಷ್ಯ ತಿಳಿಯುತ್ತಾನೆ" ಅಥವಾ 'ಅನಾವರಣಗೊಳಿಸುತ್ತಾನೆ. ಎಂದಿರಬೇಕು. ಮನುಷ್ಯ ಯಾವುದನ್ನು ಕಲಿಯುತ್ತಾನೋ ಅದು ಅನಂತ ಜ್ಞಾನನಿಧಿಯಾದ ತನ್ನ ಆತ್ಮದ ಮೇಲೆ ಇದ್ದ ಮುಸುಕನ್ನು ತೆರೆದು ನಿಜವಾಗಿಯೂ ತನ್ನಲ್ಲಿ ತಾನೇ ಕಂಡು ಹಿಡಿದದ್ದು.

ಕಟ್ಟಿಗೆಯ ಚೂರಿನಲ್ಲಿ ಇರುವ ಬೆಂಕಿಯಂತೆ ಜ್ಞಾನ ಮನಸ್ಸಿನಲ್ಲಿ ಹುಗಿದೆ. ಸೂಚನೆ ಅದನ್ನು ವ್ಯಕ್ತ ಪಡಿಸುವ ಘರ್ಷಣೆ ಎಲ್ಲ ಜ್ಞಾನವೂ ಎಲ್ಲ ಶಕ್ತಿಯೂ ಆಗಲೆ ಒಳಗಿದೆ. ಯಾವುದನ್ನು ನಾವು ಶಕ್ತಿ ಪ್ರಕೃತಿಯ ರಹಸ್ಯ ಎಂದು ಕರೆಯುವೆವೂ ಅದು ಆಗಲೇ ನಮ್ಮಲ್ಲಿದೆ. ಜ್ಞಾನವೆಲ್ಲ ಅಂತರಾತ್ಮನಿಂದ ಬರುವುದು ತನ್ನಲ್ಲಿ ಅನಾದಿಯಿಂದಲೂ ಅಡಗಿರುವ ಜ್ಞಾನ ಮಾನವನು ವ್ಯಕ್ತಪಡಿಸುತ್ತಾನೆ, ಕಂಡುಹಿಡಿಯುತ್ತಾನೆ.

ಯಾರೊಬ್ಬರೂ ಮತ್ತೊಬ್ಬರಿಂದ ಕಲಿತುಕೊಳ್ಳಲಿಲ್ಲ ಪ್ರತಿಯೊಬ್ಬರೂ ತಮಗೆ ತಾವೆ ಕಲಿತುಕೊಳ್ಳಬೇಕಾಗಿದೆ. ಬಾಹ್ಯ ಗುರು ಕೇವಲ ಒಂದು ಸಲಹೆಯನ್ನು ಕೊಡುತ್ತಾನೆ ಅದು ಅಂತರಂಗದಲ್ಲಿ ಇರುವವ ಗುರುವನ್ನು ಜಾಗ್ರತನನ್ನಾಗಿ ಮಾಡಿ ವಿಷಯವನ್ನು ತಿಳಿದುಕೊಳ್ಳುವಂತೆ ಪ್ರೇರೇಪಿಸುವುದು ಆಗ ನಮ್ಮ ಇಂದ್ರಿಯ ಗ್ರಹಣ ಮತ್ತು ಆಲೋಚನಾ ಶಕ್ತಿಗಳಿಂದ ಅದು ನಮಗೆ ಸ್ಪಷ್ಟವಾಗಿ ನಮ್ಮ ಅಂತರಾಳದಲ್ಲಿ ನಾವು ಅದನ್ನು ತಿಳಿಯುತ್ತೇವೆ. ಅನೇಕ ಎಕರೆಗಳಷ್ಟು ವಿಸ್ತಾರವಾದ ಆಲದ ಮರ ಸಾಸುವೆ ಕಾಳಿನಲ್ಲಿ ಎಂಟನೇ ಒಂದು ಭಾಗದಷ್ಟು ಕೂಡ ದೊಡ್ಡದಾಗಿಲ್ಲದ ಅದರ ಬೀಜದಲ್ಲಿತ್ತು ಇಷ್ಟೊಂದು ಶಕ್ತಿಯು ಕೂಡ ಅಲ್ಲಿ ಅಡಗಿತ್ತು. ಅತ್ಯದ್ಭುತವಾದ ಬುದ್ಧಿಶಕ್ತಿ ಜೀವಾಣುವಿನಲ್ಲಿ ಸುಪ್ತವಾಗಿರುವುದು ನಮಗೆ ಗೊತ್ತಿದೆ.

## ಶೀಲ ನಿರ್ಮಾಣ

ಶೀಲವಾಗಲಿ ಅದು ಅವನಲ್ಲಿ ಇರುವ ಸ್ವಭಾವಗಳ ಮೊತ್ತ. ಅವನ ಮಾನಸಿಕ ಇಚ್ಛೆಗಳ ಮೊತ್ತ ಅವನ ಆತ್ಮದ ಮುಂದೆ ಸುಖದುಃಖಗಳು ಹೋದಂತೆಲ್ಲ ಅದರ ಮೇಲೆ ಅನೇಕ ದೃಶ್ಯಗಳನ್ನು ಬೀರುತ್ತದೆ. ಈ ಶೇಖರಿಸಿದ ದೃಶ್ಯಗಳು ಒಟ್ಟು ಪರಿಣಾಮವೇ ಮನುಷ್ಯನ ಶೀಲವೆನ್ನುವುದು. ನಮ್ಮ ಆಲೋಚನೆಗಳು ಪ್ರೇರೇಪಿಸಿದಂತೆ ನಾವು ಇರುವೆವು. ಪ್ರತಿಯೊಂದು ಆಲೋಚನೆಯೂ ಕಬ್ಬಿಣದ ಮುದ್ದೆಯಂತಿರುವ ನಮ್ಮ ದೇಹದ ಮೇಲೆ ಕೂಡುವ ಸುತ್ತಿಗೆಯ ಪೆಟ್ಟಿನಂತೆ ಇದರಿಂದ ನಾವು ಏನು ಆಗಬೇಕೆಂದು ಬಯಸುವೆವೂ ಅದನ್ನು ತಯಾರು ಮಾಡುವುದು ಮಾತುಗಳು ಗೌಣ, ಆಲೋಚನೆ ಸಜೀವವಾಗಿದೆ. ಅವು ಬಹಳ ದೂರ ಚಲಿಸುತ್ತವೆ. ಆದ ಕಾರಣವೇ ನೀವು ಏನನ್ನು ಆಲೋಚನೆ ಮಾಡುತ್ತೀರಿ ಎಂಬುದನ್ನು ಗಮನದಲ್ಲಿ ಇಡಿ.

ನಮ್ಮ ಶೀಲವನ್ನು ತಿದ್ದುವುದರಲ್ಲಿ ಸುಖದುಃಖಗಳೆರಡಕ್ಕೂ ಸಮಭಾಗವಿದೆ. ಕೆಲವು ವೇಳೆ ದುಃಖ ಸುಖಕ್ಕಿಂತ ದೊಡ್ಡ ಗುರು. ಪ್ರಪಂಚದಲ್ಲಿ ಜನಿಸಿದ ಅನೇಕ ಮಹನೀಯರು ಜೀವನವನ್ನು ಓದಿದಾಗ ಅವರಲ್ಲಿ ಬಹುಪಾಲು ಜನರಿಗೆ ದುಃಖವೇ ಸುಖಕ್ಕಿಂತ ಹೆಚ್ಚು ಕಲಿಸಿತು. ಐಶ್ವರ್ಯಕ್ಕಿಂತ ಬಡತನ ಅವರಿಗೆ ಹೆಚ್ಚು ಕಲಿಸಿತು ಎಂದು ಧೈರ್ಯವಾಗಿ ಹೇಳಬಹುದು.

ಚಿತ್ತವನ್ನು ಒಂದು ಸರೋವರಕ್ಕೆ ಹೋಲಿಸಬಹುದು. ಅಲ್ಲಿ ಏಳುವ ಎಷ್ಟು ಚಿಕ್ಕ ಅಲೆಯಾಗಲಿ ಅದು ಶಾಂತವಾದಾಗ ಸಂಪೂರ್ಣ ನಾಶವಾಗುವುದಿಲ್ಲ ಅಲ್ಲಿ ತನ್ನ ಗುರುತನ್ನು ಬಿಡುವುದು ಮುಂದೆ ಇದೇ ಮತ್ತೊಮ್ಮೆ ಓಂದಿನಂತೆ ವ್ಯಕ್ತವಾಗುವ ಸಂಭವವಿರುವುದು ನಾವು ಮಡುವ ಪ್ರತಿಯೊಂದು ಕೆಲಸವೂ ನಮ್ಮ ದೇಹದ ಪ್ರತಿಯೊಂದು ಚಲನೆಯೂ ನಮ್ಮ ಚಿತ್ತ ಭಿತ್ತಿಯ ಮೇಲೆ ನನ್ನ ಸಂಸ್ಕಾರವನ್ನು ಬಿಡುವುದು. ಇಂತಹ ಸಂಸ್ಕಾರಗಳು ಚಿತ್ತ ಸರೋವರದ ಮೇಲೆ ಕಾಣಿಸಿದಂತೆ ಇದ್ದರೂ ಸರೋವರದ ಕೆಳಗೆ ನಮಗರಿವಿಲ್ಲದಂತೆ ಕೆಲಸ ಮಾಡುತ್ತಿರುತ್ತವೆ. ನಾವು ಪ್ರತಿಕ್ಷಣವೂ ಏನಾಗಿರುವೆವೂ ಅದು ಈ ಸಂಸ್ಕಾರಗಳ ಒಟ್ಟು ಮೊತ್ತದಿಂದ ನಿರ್ಧರಿಸಲ್ಪಡುತ್ತದೆ.

## ಸೇವೆ

ಪರಬ್ರಹ್ಮನಿಂದ ಹಿಡಿದು ಅತಿಕ್ಷುದ್ರ ಕ್ರಿಮಿಯವರೆಗೆ ಸೂಕ್ಷ್ಮ ತಮ್ಮ ಕಣದ ಅಂತರಾಳದಲ್ಲಿಯೂ ಪ್ರೇಮಮಯವಾದ ಭಗವಂತನು ಸರ್ವಾಂತರ್ಯಾಮಿಯಾಗಿರುವನು ಸಖನೆ ಅವುಗಳಡಿದಾವರೆಯಲ್ಲಿ ಮನಸ್ಸು, ಜೀವ, ದೇಹಗಳನ್ನು ಅರ್ಪಿಸು.

ನಿನ್ನ ಎದುರಿಗೆ ಇರುವುದೇ ಭಗವಂತನ ವಿಶ್ವರೂಪ ಇದನ್ನು ತೊರೆದು ಮತ್ತಲ್ಲಿ ದೇವರನ್ನು ಅರಸುವೇ" ತಾರತಮ್ಯವಿಲ್ಲದೇ ಯಾರು ಎಲ್ಲರನ್ನೂ ಪ್ರೀತಿಸುವರೋ ಅವರು ಮಾತ್ರ ನಮ್ಮ ಇಷ್ಟದೇವರನ್ನು ಅತ್ಯುತ್ತಮ ರೀತಿಯಿಂದ ಆರಾಧಿಸುತ್ತಿರುವರು.

ಶುದ್ಧವಾಗಿರುವುದು ಪರರಿಗೆ ಹಿತವನ್ನು ಮಾಡುವುದು ಇದೇ ಎಲ್ಲಾ ಪೂಜೆಯ ಸಾರ, ದರಿದ್ರರಲ್ಲಿ ದೀನರಲ್ಲಿ ದುರ್ಬಲರಲ್ಲಿ ಯಾರು ಶಿವನನ್ನು ನೋಡುವರೋ ಅವರೇ ನಿಜವಾದ ಶಿವನನ್ನು ನೋಡುವುದು ಭಗವಂತನಾರಾಧನೆಗೆ ಪೀಠಿಕೆ ಮಾತ್ರ ಯಾರು ಜಾತಿ, ಕುಲ, ಗೋತ್ರ, ಜನಾಂಗವನ್ನು ಗಮನಿಸದೆ ಒಬ್ಬ ದೀನನಿಗೆ ಸಹಾಯ ಮಾಡಿರುವನೋ ದೀನನ್ನು ಸೇವಿಸಿರುವನೋ ಅವನನ್ನು ಕಂಡರೆ ಶಿವನು ತನ್ನನ್ನು ದೇಗುಲದಲ್ಲಿ ಮಾತ್ರ ನೋಡುವ ಭಕ್ತರಿಗಿಂತ ಹೆಚ್ಚು ಮೆಚ್ಚುವನು. ಯಾರು ತಂದೆಯನ್ನು ಸೇವಿಸಬೇಕೆಂದು ಬಯಸುವರೋ ಅವರು ಅವನ ಮಕ್ಕಳ ಸೇವೆಯನ್ನು ಮೊದಲು ಮಾಡಬೇಕು ಯಾರು ಶಿವನನ್ನು ಸೇವಿಸಬೇಕೆಂದು ಬಯಸುವರೋ ಅವರು ಶಿವನ ಮಕ್ಕಳನ್ನು ಸೇವಿಸಬೇಕು.

ಯಾರು ಭಗವನ್ ಭಕ್ತರನ್ನು ಸೇವಿಸಬೆಕೆಂದು ಬಯಸುವರೋ ಅವರು ಭಗವಂತನ ಅತ್ಯುತ್ತಮ ಭಕ್ತರೆಂದು ಶಾಸ್ತ್ರಗಳು ಸಾರುತ್ತವೆ. ಇದನ್ನು ಜ್ಞಾಪಕದಲ್ಲಿಡಿ. ನಾವು ಪುನಃ ನಿಮಗೆ ಹೆಳುತ್ತೇವೆ ಕೇಳಿ ನೀವು ಪರಿಶುದ್ಧರಾಗಿ ಯಾರು ಸಹಾಯಕ್ಕಾಗಿ ನಿಮ್ಮ ಬಳಿಗೆ ಬರುವರೋ ಅವರಿಗೆ ಸಾಧ್ಯವಾದಷ್ಟು ಸಹಾಯ ಮಾಡಿ ಇದು ಒಳ್ಳೆಯ ಕರ್ಮ ಇದರಿಂದ ಚಿತ್ತ ಶುದ್ಧಿಯಾಗುವುದು ಸರ್ವರಲ್ಲಿ ನೆಲೆಸಿರುವ ಭಗವಂತ ವ್ಯಕ್ತನಾಗುವನು.

**ರಾಷ್ಟ್ರೀಯತೆ:**

ನಮ್ಮ ಪುಣ್ಯಭೂಮಿ ಧರ್ಮ ಮತ್ತು ತತ್ವಗಳ ತವರುಮನೆ ಆಧ್ಯಾತ್ಮಿಕ ವೀರರ ಜನ್ಮ ಸ್ಥಾನ, ತ್ಯಾಗಿಗಳ ನಾಡು ಇದು ಇಲ್ಲಿ ಅತಿ ಪುರಾತನ ಕಾಲದಿಂದಲೂ ಇತ್ತೀಚಿನವರೆಗೆ ಅತ್ಯದ್ಭುತ ಆದರ್ಶಗಳನ್ನು ಬೆಳಗಿರುವವರು ಇದು ದರ್ಶನಗಳ, ಆಧ್ಯಾತ್ಮಿಕತೆಯ ನೀತಿಯ ಪ್ರೀತಿ, ಮಾಧುರ್ಯ ಮಾರ್ದವಗಳ ತವರೂರು. ಈ ಘನ ಆದರ್ಶಗಳು ಇನ್ನು ಜೀವಂತವಾಗಿವೆ. ನನಗೆ ಆಗಿರುವ ಪ್ರಾಪಂಚಿಕ ಅನುಭವದಿಂದ ಲವಲೇಶವೂ ಸಂದೇಹವಿಲ್ಲದೆ ಪ್ರಪಂಚದಲೆಲ್ಲ ಮೇಲಿನ ಆದರ್ಶಗಳಿಗೆ ಭರತಖಂಡ ಪ್ರಥಮ ಸ್ಥಾನದಲ್ಲಿದೆ. ಎಂದು ಘಂಟಾಘೋಷವಾಗಿ ಸಾರುತ್ತೇನೆ. ಹಲವು ಶತಮಾನಗಳ ಘರ್ಷಣೆ ಭರತ ಪರ್ವದ ಮೇಲೆ ಮಾಡಿದ ನೂರಾರು ಆಕ್ರಮಣಗಳನ್ನು ಆಚಾರ ವ್ಯವಹಾರದಲ್ಲಾದ ನೂರಾರು ಬದಲಾವಣೆಗಳನ್ನು ಎದುರಿಸಿ ನಿಂತ ಭರತಖಂಡವೇ ಇದು ಕೊನೆಯಿಲ್ಲದೆ ಸ್ಪೂರ್ತಿ ಮತ್ತು ಅವಿನಾಶಿಯಾದ ಆತ್ಮದಿಂದ, ಇಂದಿಗೂ ಯಾವ ಬಂಡೆಯೂ ಅಷ್ಟು ಸ್ಥಿರವಾಗಿಲ್ಲ ಹಾಗೆ ನಿಂತಿರುವುದು ಈ ದೇಶ ಅಲ್ಲಿಯು ಜೀವ ಆತ್ಮನ ಸ್ವಭಾವದಂತೆಯೇ ಆದಿ ಅಂತ್ಯವಿಲ್ಲದೆ ಅಮರವಾಗಿದೆ. ನಾವು ಇಂತಹ ದೇಶದ ಮಕ್ಕಳು ಗ್ರೀಸ್ ದೇಶ ಹುಟ್ಟುವುದಕ್ಕೆ ಮುಂಚೆಯೇ ರೋಮ್ ದೇಶ ತಲೆ ದೋರುವುದಕ್ಕೆ ಮುಂಚೆಯೇ ಆಧುನಿಕ ಯುರೋಪಿನ ಪೂರ್ವಿಕರು ಕಾಡು ಮೇಡುಗಳಲ್ಲಿ ವಾಸಿಸುತ್ತ ಮೈಗೆ ಬಣ್ಣ ಬಳಿದುಕೊಳ್ಳುತ್ತಿದ್ದ ಕಾಲಕ್ಕೆ ಮುಂಚೆಯೇ ಭಾರತವು ಕಾರ್ಯನ್ಮುಖವಾಗಿತ್ತು. ಅದಕ್ಕೆ ಮುಂಚೆ ಇತಿಹಾಸದ ಬಗೆಗೂ ನಿಲುಕದೆ ದಂತಕತೆಯು ಆಧಾರಕ್ಕೂ ಅತೀತವಾದ ಪೂರ್ವದಿಂದಲೂ ಇಂದಿನವರೆಗೆ ಒಂದು ಭಾವನ ಪರಂಪರೆ ಇಲ್ಲಿಂದ ಹರಿದು ಹೋಗಿದೆ. ಪ್ರತಿಯೊಂದು ಭಾವನೆಯ ಹಿಂದೆಯೂ ಆಶೀರ್ವಾದ ಮತ್ತು ಶಾಂತಿಯನ್ನು ಪೋಣಿಸಿ ಇದನ್ನು ಧಾರೆ ಎರೆದಿರುವರು. ನೀವು ಪ್ರಪಂಚದ ಇತಿಹಾಸವನೆಲ್ಲ ಅಧ್ಯಾಯನ ಮಾಡಿ ನಿಮಗೆ ಗೋಚರಿಸುವ ಪ್ರತಿಯೊಂದು ಆದರ್ಶನ ಉಗಮಸ್ಥಾನವೂ ಭರತಖಂಡ ಎಂಬುದು ವ್ಯಕ್ತವಾಗುವುದು. ■

***********

# ಕ್ರಾಂತಿಕಾರಿ ಭಗತ್‌ಸಿಂಗ್

**ಶಿವನಾಯ್ಕ್ ಹೆಚ್.**
ತೃತೀಯ ಬಿ.ಎ (ಹೆಚ್.ಇ.ತಿ.)

ಭಗತ್‌ಸಿಂಗ್‌ನ ಹೆಸರೇ ರೋಮಾಂಚನ ಉಂಟುಮಾಡುವಂತದ್ದು ನಮ್ಮ ದೇಶದ ಇತಿಹಾಸದಲ್ಲಿ ಈತನ ಹೆಸರು ಚಿರಸ್ಥಾಯಿಯಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಹಾಗೂ ಯುವಕರಲ್ಲಿ ಕ್ರಾಂತಿಯ ಕಿಡಿ ಹಚ್ಚಿದ ಭಗತ್‌ಸಿಂಗ್ ಅವರು ಸೆಪ್ಟೆಂಬರ್ 28, 1907ರಲ್ಲಿ ಪಂಜಾಬ್ ಲಾಯಲ್‌ಪುರ್ ಜಿಲ್ಲೆಯ ಬಾಂಗಾ ಎಂಬಲ್ಲಿ ಜನಿಸಿದರು.

ಸರ್ದಾರ್ ಕಿಶನ್‌ಸಿಂಗ್ ಮತ್ತು ವಿದ್ಯಾವತಿಯವರಿಗೆ ಜನಿಸಿದ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ದುರಂತದಿಂದ ಪ್ರಭಾವಿತನಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. "ಕೇವಲ ರಕ್ತಪಾತವಷ್ಟೇ ಕ್ರಾಂತಿಯಲ್ಲ" ಕ್ರಾಂತಿಯೆಂದರೆ ಬರೆ ಬಾಂಬು, ಪಿಸ್ತೂಲುಗಳ ಹೋರಾಟವಲ್ಲ. ಸ್ವಾತಂತ್ರ್ಯ ಎನ್ನವುದೇ ಕ್ರಾಂತಿ. ಶೋಷಿತ ವ್ಯವಸ್ಥೆಯನ್ನು ಕಿತ್ತೊಗೆದು ಶ್ರಮಿಕರು ವಿಮೋಚನೆ ಪಡೆಯುವುದೇ ಕ್ರಾಂತಿ. ಅಪ್ಪಟ ಕ್ರಾಂತಿಯು ಎಂದಿಗೂ ಒಡೆಯರ, ಪ್ರಭುಗಳ, ಶೋಷಕರ ವಿರೋಧಿ ಎಂದು ಭಗತ್‌ಸಿಂಗ್ ಗರ್ಜಿಸಿದ್ದರು.

ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯನ್ನು ಸ್ಥಾಪಿಸಿ ಯುವಕರನ್ನು ಸಂಘಟಿಸಿ ಕ್ರಾಂತಿಕಾರಿ ಪಥದತ್ತ ಕೊಂಡೊಯ್ದ ಮಹಾನ್ ದೇಶಪ್ರೇಮಿ ಭಗತ್. ಜಾನ್ ಸಾಂಡರ್‌ಸನ್ ಕೊಲೆ ಮೊಕದ್ದಮೆಯ ಅಪಾದಿತನಾಗಿ, ಕೇಂದ್ರ ಶಾಸನ ಸಭೆಯಲ್ಲಿ ಬಾಂಬು ಎಸೆದಿದ್ದಕ್ಕಾಗಿ ಅವನಿಗೆ ಮರಣದಂಡನೆ ವಿಧಿಸಲಾಯಿತು. ಲಾಹೋರ್ ಜೈಲಿನಲ್ಲಿ 1931 ಮಾರ್ಚ್ 24 ರಂದು ಗಲ್ಲಿಗೇರಿಸುವ ದಿನಾಂಕವನ್ನು ನಿಗದಿಗೊಳಿಸಲಾಗಿತ್ತು. ಜೈಲಧಿಕಾರಿಯು ಭಗತ್‌ಸಿಂಗ್‌ನ ಬಳಿ ಬಂದು ಇನ್ನೂ ಕೆಲವೇ ಸಮಯದಲ್ಲಿ ನಿನ್ನನ್ನು ಗಲ್ಲಿಗೇರಿಸಲಾಗುವುದೆಂದೂ ಅದಕ್ಕೆ ತಯಾರಾಗಬೇಕೆಂದು ತಿಳಿಸಿದಾಗ ಭಗತ್ ಲೆನಿನ್ನನ ಜೀವನ ಚರಿತ್ರೆಯನ್ನು ಓದುತ್ತಿದ್ದೇನೆ. "ಸ್ವಲ್ಪ ನಿಧಾನ ಮಾಡು" ನಾನು ಈ ಪುಸ್ತಕ ಓದುತ್ತಿದ್ದೇನೆ. ಒಬ್ಬ ಕ್ರಾಂತಿಕಾರಿ ಇನ್ನೊಬ್ಬ ಕ್ರಾಂತಿಕಾರಿಯನ್ನು ಸಂದರ್ಶಿಸುವ ಸಮಯವಿದು ಎನ್ನುತ್ತಾನೆ. ಇನ್ನೇನು ಗಲ್ಲಿಗೇರಿಸುವ ಸಮಯ ಬ್ರಿಟಿಷ್ ಸರ್ಕಾರದ ವಿರುದ್ಧ ಮತ್ತು ಭಾರತದ ಸ್ವಾತಂತ್ರ್ಯ ಪರವಾದ ಘೋಷಣೆಗಳನ್ನು ಕೂಗುತ್ತಾ ನೇಣು ಕಂಬದ ಬಳಿ ಬಂದ ಭಗತ್ ಹಾಗೂ ಸುಖ್‌ದೇವ್ ರಾಜ್‌ಗುರು ಇವರು ನಾನು ಗತಿಸಿದ ಮೇಲೂ ನನ್ನ ಉಸಿರಿನಲ್ಲಿ ದೇಶದ ಪ್ರಾಣ ಇರುತ್ತದೆ. ನನ್ನ ಮಣ್ಣಿನಿಂದಲೂ ದೇಶದ ವಾಸನೆ ಬರುತ್ತದೆ. ಎಂಬರ್ಥದ ಗೀತೆಯನ್ನು ಗಟ್ಟಿಯಾದ ದನಿಯಲ್ಲಿ ಹಾಡುತ್ತಿದ್ದ. ಅವನ ಮುಖದ ಮೇಲೆ ಲವಲೇಶವೂ ದುಃಖದ ಛಾಯೆ ಇರಲಿಲ್ಲ. ಆಗ ಲಾಹೋರ್ ಜೈಲಿನ ಮುಖ್ಯಾಧಿಕಾರಿಯಾಗಿದ್ದ ಸಿಖ್ ಧರ್ಮದ ನಿಷ್ಠಾವಂತ ಅನುಯಾಯಿಯಾಗಿದ್ದ ಸರ್ದಾರ್ ಚತರ್‌ಸಿಂಗ್, ಭಗತ್‌ಸಿಂಗ್‌ನ ಬಳಿ ಬಂದು ನನ್ನನ್ನು ನಿನ್ನ ತಂದೆಯಂತೆ ಭಾವಿಸಿಕೋ, ನಿನ್ನ ಅಂತ್ಯ ಸಮೀಪಿಸುತ್ತಿರುವುದರಿಂದ ಗುರುವಾಣಿಯನ್ನು ಪಠಣ ಮಾಡುತ್ತಾ 'ವಹೇ ಗುರು' ಎಂದು ನಾಮೋಚ್ಚಾರ ಮಾಡು ಎಂದು ವಿನಂತಿಸಿದ. ಅದನ್ನು ಕೇಳಿ ಭಗತ್‌ಸಿಂಗ್ ಜೋರಾಗಿ ನಗುತ್ತಾ ನಾನು ಹಾಗೇ ಮಾಡಿದರೆ. ಪುಕ್ಕಲನಾಗಿ ಸಾವನ್ನು ಎದುರಿಸಲಾಗದೇ ನನ್ನ ಮೊರೆ ಹೋಗುತ್ತಿದ್ದಾನೆ ಎಂದು ಭಗವಂತ ನನ್ನನ್ನು ಅಣುಕಿಸಿಯಾನು ಎಂದು ಉತ್ತರಿಸಿದ. ಅವನಿಗೆ ಧರ್ಮ ಶ್ರದ್ಧೆ ಇದ್ದರೂ ಸಾವು ಸಮೀಪಿಸುವ ಸಮಯದಲ್ಲಿ ತಾನು ಅಧೀರನಾದೆ ಎಂದು ಯಾರು ಭಾವಿಸಬಾರದು ಎಂದು ಹಾಗೇ ಮಾಡಿದನು.

ಬ್ರಿಟಿಷರಿಗೆ ಭಗತ್‌ನ ಮೇಲೆ ಅದೇನು ಭಯವಿತ್ತೋ. ದ್ವೇಷವಿತ್ತೋ ಏನೋ ಅವನ ಮೃತ ಶರೀರವನ್ನು ಅವನ ಸಂಬಂಧಿಕರಿಗೆ ನೀಡದೆ ರಾತ್ರೋರಾತ್ರಿ ಸಟ್ಲೇಜ್ ನದಿ ದಂಡೆಯ ಮೇಲೆ ಶವಸಂಸ್ಕಾರ ಮಾಡಿದರು ಹೀಗೆ ಅಮರನಾದ ಭಗತ್‌ಸಿಂಗ್ ಭಾರತೀಯರ ಕಣ್ಮಣಿಯಾಗಿದ್ದಾನೆ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ■

**********

# ಕೈಗಾರಿಕಾ ಮಾಲಿನ್ಯ ಮತ್ತು ಅದನ್ನು ತಡೆಗಟ್ಟುವ ವಿಧಾನ

ಯಶವಂತ್ ಹೆಚ್. ಕಂಬಳಿ ತೃತೀಯ ಬಿ.ಎ (ಹೆಚ್.ಇ.ಪಿ)

**ಕೈಗಾರಿಕಾ ಮಾಲಿನ್ಯ :**

* ಕಾರ್ಖಾನೆಗಳಿಂದ ಹೊರ ಚೆಲ್ಲುವ ಮಾಲಿನ್ಯ
* ಅಪಾಯಕಾರಿ ವಿಕಿರಣ

ಭೂಮಿಯ ಗಾಳಿ ಮತ್ತು ನೀರು ಮಲಿನಗೊಳ್ಳುವುದಕ್ಕೆ ಕೈಗಾರಿಕೆಗಳು ಮುಖ್ಯ ಕಾರಣ. ಕೈಗಾರಿಕಾ ಕೇಂದ್ರಗಳು ಹೊಗೆ, ದ್ರವ, ಘನ ಪದಾರ್ಥಗಳನ್ನು ಹೊರಚೆಲ್ಲುತ್ತವೆ. ಕಾರ್ಖಾನೆಗಳು ಹೊರಚೆಲ್ಲುವ ಪದಾರ್ಥಗಳಲ್ಲಿ ಹಾನಿಯುಂಟು ಮಾಡುವ ರಾಸಾಯನಿಕಗಳು ಕರಗಿದ ರೂಪದಲ್ಲಿರುತ್ತವೆ. ನದಿತೊರೆಗಳಲ್ಲಿ ಹರಿಯಲು ಬಿಡುವ ವರ್ಜಕಗಳು ನೀರಿನಲ್ಲಿ ವಿಲೀನವಾಗಿರುವ ಆಮ್ಲಜನಕದಿಂದ ಹೀರಲ್ಪಡುತ್ತವೆ. ಇದರಿಂದ ಜಲಚರಗಳ ಉಸಿರಾಟಕ್ಕೆ ತೊಂದರೆಯಾಗಿ ಅವು ಮರಣಿಸುತ್ತವೆ. ಕಾರ್ಖಾನೆಗಳು ಚಿಮಣಿಗಳು ಹೊರಚೆಲ್ಲುವ ಧೂಳು 30 ಮೈಕ್ರಾನುಗಳ ವ್ಯಾಸಕ್ಕಿಂತ ದೊಡ್ಡದಾಗಿದ್ದರೆ ನೆಲಕ್ಕೆ ಇಳಿಯುತ್ತದೆ.. ಇಲ್ಲವಾದರೆ ಗಾಳಿಯಲ್ಲೇ ತೇಲುತ್ತಿದ್ದು ಕೆಲವೊಮ್ಮೆ ಹಿಮದೊಡನೆ ಕೂಡಿ ಹಿಮಧೂಮವಾಗುತ್ತದೆ.

ಪೆಟ್ರೋಲಿಯಂ ಸಂಸ್ಕರಣಾಗಾರ, ಗೊಬ್ಬರ ಕಾರ್ಖಾನೆ, ಕಾಗದದ ಗಿರಣಿ, ಪಿಂಗಾಣಿ ಮತ್ತು ಗಾಜು ಕಾರ್ಖಾನೆಗಳು ಮುಂತಾದವು ಹೊರಚೆಲ್ಲುವ ಹೈಡ್ರೋಜನ್ ಸಲ್ಫೈಡ್, ಗಂಧಕದ ಆಕ್ಸೈಡ್, ಪ್ಲೋರೈಡುಗಳು ಮಾಲೀನ್ಯಕ್ಕೆ ಕಾರಣವಾಗುತ್ತದೆ. ನ್ಯೂಕ್ಲಿಯರ್ ರಿಯಾಕ್ಟರ್ ಮತ್ತು ಬಾಂಬ್ ತಯಾರಿಕೆಗಗೆ ಬಳಸುವ ಮೂಲವಸ್ತುಗಳಿಂದ ಅಪಾಯಕಾರಿ ವಿಕಿರಣಗಳನ್ನು ಹೊರಕ್ಕೆ ಬರುತ್ತವೆ. ಅಣ್ವಸ್ತ್ರಗಳನ್ನು ಪರೀಕಾರ್ಥವಾಗಿ ಸ್ಫೋಟಿಸಿದಾಗ ಉಂಟಾಗುವ ಭಸ್ಮಪಾತ, ಗಾಳಿ ನೀರು ನೆಲಗಳನ್ನು ಮಲಿನಗೊಳಿಸುತ್ತದೆ. ಅದು ಚೆಲ್ಲುವ ವಿಕಿರಣಗಳು ದೀರ್ಘಾವಧಿ ಪರಿಣಾಮ ಉಂಟುಮಾಡುತ್ತದೆ.

ನ್ಯೂಕ್ಲಿಯರ್ ರಿಯಾಕ್ಟರ್‌ಗಳಲ್ಲಿ ಬಳಸಿ ಉಳಿದ ಇಂಧನಗಳನ್ನು ಸುರಕ್ಷಿತವಾಗಿ ಹೊರಚೆಲ್ಲುವುದು ಒಂದು ದೊಡ್ಡ ಸಮಸ್ಯೆ ಭದ್ರಪಡಿಸುವ ಕಾಂಕ್ರೀಟ್ ಮತ್ತು ಸೀಸದ ಕೋಶಗಳಲ್ಲಿ ಇಂಧನದ ವಿಕಿರಣಶೀಲ ವರ್ಜಕಗಳನ್ನು ತುಂಬಿ ಸಮುದ್ರದಲ್ಲಿ ಮುಳುಗಿಸುವುದು ಹಾಗೂ ನೆಲದಡಿಯಲ್ಲಿ ಹೂಳುವುದು ಸಾಮಾನ್ಯವಾಗಿ ಅನುಸರಿಸುವ ಪದ್ಧತಿ. ಆದರೆ ವಿಕಿರಣಗಳ ದುಷ್ಪರಿಣಾಮಗಳ ಪೂರ್ತಿ ಪರಿಹಾರ ಸಾಧ್ಯವಾಗಿಲ್ಲ.

ಕೈಗಾರಿಕೆಗಳು ಅಪಾಯಕಾರಿ ವಸ್ತುಗಳನ್ನು ಹೊರಹಾಕಿ ಮಾಲೀನ್ಯಕ್ಕೆ ಕಾರಣವಾಗುವುದು ಮಾತ್ರವಲ್ಲ. ಅಗಾಧ ಪ್ರಮಾಣದ ಶಾಖವನ್ನು ಅವು ಹೊರಚೆಲ್ಲುತ್ತವೆ. ಅದರ ಫಲವೇ ಶಾಖ ವಿರಿಕೆ ಇಂಧನಗಳ ದಹನ ಮತ್ತು ಇತರ ರಾಸಾಯನಿಕ ಕ್ರಿಯೆಗಳಿಂದ ಉತ್ಪಾದಿಸಲ್ಪಡುವ ಶಾಖ ಅನೇಕ ಬಾರಿ ಅನುಪಯುಕ್ತವಾಗುತ್ತದೆ. ಆ ಶಾಖ ಅನಿವಾರ್ಯವಾಗಿ ವಾತಾವರಣದಲ್ಲಾಗಲೀ ನೀರಿನಲ್ಲಾಗಲೀ ಸೇರಬೇಕಾಗುವುದು.

**ಮಾಲಿನ್ಯ ತಡಡೆಗಟ್ಟುವ ವಿಧಾನ:**

ಕೆಲವು ಕೈಗಾರಿಕಾ ಸ್ಥಾವರಗಳು ತಮ್ಮ ಯಂತ್ರ ಭಾಗಗಳನ್ನು ತಣ್ಣಗೆ ಮಾಡಲು ಜಲಸಂಗ್ರಹಗಳಲ್ಲಿ ನೀರನ್ನು ಹಾಯಿಸುತ್ತದೆ. ಇದರಿಂದ ನೀರಿನ ಉಷ್ಣತೆ ಅಲ್ಪ ಅವಧಿಯಲ್ಲೇ ಏರುತ್ತದೆ. ಉಷ್ಣತೆ ಹೆಚ್ಚಾದಾಗ ಆಮ್ಲಜನಕದ ಅಂಶ ಕಡಿಮೆಯಾಗುತ್ತದೆ. ನೀರು ಲವಣಗಳನ್ನು ಕರಗಿಸಿಕೊಳ್ಳುವುದು ಹೆಚ್ಚಾಗುತ್ತದೆ. ರಾಸಾಯನಿಕ ಪ್ರಕ್ರಿಯೆಗಳು ನಡೆಯುತ್ತವೆ. ಬೇರೆ ಬೇರೆ ಕೈಗಾರಿಕಾ ಸ್ಥಾವರಗಳಿಂದ ನ್ಯೂಕ್ಲಿಯರ್ ರಿಯಾಕ್ಟರುಗಳು ಹೆಚ್ಚು ಶಾಖವನ್ನು ಹೊರಚೆಲ್ಲುತ್ತವೆ. ವಿದ್ಯುತ್ ಉತ್ಪತ್ತಿ ಮಾಡುವ ಶೇಕಡ 40 ರಷ್ಟು ರಿಯಾಕ್ಟರುಗಳಲ್ಲಿ ನೀರನ್ನು ಹಾಯಿಸಿ ಶಾಖವನ್ನು ಹೊರಚೆಲ್ಲುವಂತೆ ಮಾಡುತ್ತಾರೆ.

ಕೈಗಾರಿಕಾ ಕಲ್ಮಶಗಳನ್ನು ವರ್ಜಿಸುವ ವಿಧಾನಗಳನ್ನು ಉತ್ತಮಗೊಳಿಸಿ ದುಷ್ಪರಿಣಾಮಗಳನ್ನು ತಡೆಗಟ್ಟುವ ಪ್ರಯತ್ನಗಳು ನಡೆಯುತ್ತಿವೆ. ಆಧುನಿಕ ಕೈಗಾರಿಕಾ ಸ್ಥಾವರದ ರಚನಾ ವಿನ್ಯಾಸದಲ್ಲಿ ಕಲ್ಮಶ ಕಳೆಯುವುದು ತುಂಬಾ ಮುಖ್ಯವಾದುದು ಘನ ಪದಾರ್ಥಗಳಲ್ಲಿ ತೇಲುವಂತವು ಯಾಂತ್ರಿಕವಾಗಿ ಪ್ರತ್ಯೇಕಿಸಲ್ಪಡುತ್ತವೆ. ಮುಳುಗುವಂಥದನ್ನು ವಿಶಿಷ್ಟ ಕೋಷ್ಠಗಳಲ್ಲಿ ಕೆಳಗಿಳಿಸಿ ಬೇರ್ಪಡಿಸುತ್ತಾರೆ. ಪ್ರಬಲ ಆಮ್ಲ, ಪ್ರತ್ಯಾಮ್ಲಗಳನ್ನು ತಟಸ್ಥಗೊಳಿಸಿ ಹೊರಬಿಡುತ್ತಾರೆ. ಕೈಗಾರಿಕಾ ಕಲ್ಮಶದ ದುಷ್ಪರಿಣಾಮಗಳ ಬಗ್ಗೆ ಜನರು ವಿಶೇಷ ಗಮನ ಕೊಡುವುದು ಅಗತ್ಯ. ■

# ಇಂಡಿಯನ್ ನ್ಯಾಷನಲ್ ಆರ್ಮಿ

**ಅಶ್ವಿನಿ ಬಿ.ಎನ್.** ತೃತೀಯ ಬಿ.ಎ

ಈ ಹೆಸರಿನ ಪ್ರಸಿದ್ದ ಸೈನ್ಯವನ್ನು ಕಟ್ಟಿದವರು ಸುಭಾಷ್‌ಚಂದ್ರ ಬೋಸ್ ಮೊದಲಿಗೆ ಈ ಸೇನೆಯನ್ನು ಮೋಹನ್‌ಸಿಂಗ್ ಸಿಂಗಾಪುರದಲ್ಲಿ ಸ್ಥಾಪಿಸಿದವರು. ರಾಸ್‌ಬಿಹಾರಿ ಬೋಸ್ ಜೊತೆ ಸೇರಿದ ಸುಭಾಷ್‌ಚಂದ್ರ ಬೋಸ್ ಭಾರತದಲ್ಲಿ ಈ ಸೇನೆಯ ಜವಾಬ್ದಾರಿ ಹೊತ್ತು ಬಲಿಷ್ಟಗೊಳಿಸಿದರು.

ಸುಭಾಷರು "ಆಜಾದ್ ಹಿಂದ್ ಫೌಜ್" ಎಂಬ ಸೈನ್ಯಕಟ್ಟಿ ಅದರ ಪ್ರಧಾನ ದಂಡಾಧಿಕಾರಿಯಾದರು. "ನನಗೆ ನಿಮ್ಮ ಶಕ್ತಿ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ಭಾರತವನ್ನು ನೀಡುತ್ತೇನೆ. "ಸ್ವಾತಂತ್ರ್ಯ ಬೇಡಿ ಪಡೆಯುವ ವಸ್ತುವಲ್ಲ ರಕ್ತ ಹರಿಸಿ ಬಲಿದಾನ ಮಾಡಿ ಪಡೆಯುವ ವಸ್ತು ಎಂದು ಹೇಳಿದ ಬೋಸ್" "ಜೈಹಿಂದ್" ಘೋಷಣೆ ಕೊಟ್ಟರು.

ದಿ ಇಂಡಿಯನ್ ನ್ಯಾಷನಲ್ ಆರ್ಮಿ ಅಥವಾ ಆಜಾದ್ ಹಿಂದ್ ಫೌಜ್ ಎರಡನೇಯ ಮಹಾಯುದ್ದದಲ್ಲಿ ಇಂಫೀರಿಯಲ್ ಜಪಾನ್ ಅರ್ಮಿಯೊಂದಿಗೆ ಮಿತ್ರ ಸೈನ್ಯದ ವಿರುದ್ದ ಹೋರಾಡಿದ ಭಾರತೀಯ ಸಂಸ್ಥೆ ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನೀಯರಿಂದ ಯುದ್ದ ಖೈದಿಗಳಾದ ಬ್ರಿಟಿಷ್ ಸೈನ್ಯದ ಇಂದೂ ಇಷ್ಟು ಶಕ್ತಿಯುತವಾಗಿ ಬೆಳೆದಿರುವ ಭಾರತೀಯ ಸೈನ್ಯ ಇತಿಹಾಸ ಮಾತ್ರ ರೋಚಕಗೊಳಿಸುವಂತಹದ್ದು ಏಕೆಂದರೆ ಬ್ರಿಟಿಷರು ಈ ದೇಶದಲ್ಲಿ ಇರುವವರೆಗೂ ಭಾರತೀಯರನ್ನ ತಮ್ಮ ಸೇನೆಗೆ ಬಳಸುತ್ತಿದ್ದರು. 1947 ರಲ್ಲಿ ಭಾರತದ ವಿಭಜನೆಯಾಗುವುದಕ್ಕಿಂತ ಮುನ್ನ ಭಾರತೀಯ ಸೇನೆಯು ಭಾರತದಲ್ಲಿನ ಬ್ರಿಟಿಷ ರಾಜ್‌ನ ಆಡಳಿತದ ಪ್ರಧಾನ ಸೇನೆಯಾಗಿತ್ತು. ಅವರ ವೃತ್ತಿಯ ಅಶ್ವದಳ, ಶಿಸ್ತು, ತಂಡ ಸ್ಪ್ರಿಟ್, ನಿಷ್ಠೆ ಮತ್ತು ಸ್ಥಿರತೆ ಮುಂತಾದ ಅತ್ಯುತ್ತಮ ಗುಣಗಳನ್ನು ಹೊರತಂದಿದೆ ಅವರ ಉದಾಹರಣೆ ಎಂದರೆ ಇತರರಿಗೆ ತೀರಾ ಮತ್ತು ಹೇಡಿತನದ ಒಂದು ಸಾಂಕೇತಿಕವಾಗಿ ಬೆಳಕು ಅವರ ಜೀವನವು ಯುವ ಜನರಿಗೆ ಸ್ಪೂರ್ತಿಯ ಮೂಲವಾಗಿದೆ. ಅವರು ತಮ್ಮ ಸ್ವಾರ್ಥಹಿತ ರಾಷ್ಟ್ರಕ್ಕೆ ಸೇವೆ ಸಲ್ಲಿಸಿರುತ್ತಾರೆ.

ಸೈನಿಕನ ಜೀವನ ಬಹಳ ಕಠಿಣ ಮತ್ತು ಶಿಸ್ತಿನ ಪೂರ್ಣವಾಗಿದೆ ಅವನು ಮಾನಸಿಕವಾಗಿ ಮತ್ತು ಭೌತಿಕವಾಗಿ ಎಚ್ಚರ ವಹಿಸಬೇಕಾಗಿ ಬರುತ್ತಾನೆ ಮತ್ತು ಯಾವುದೇ ಕದನಗಳಿಗೆ ಬರಲು ಅವನ ದೇಹವನ್ನು ಉತ್ತಮ ಆಕಾರದಲ್ಲಿ ಇಡಬೇಕು. ತನ್ನ ಸಹವರ್ತಿ ಪ್ರಜೆಗಳ ಜೀವನಕ್ಕಾಗಿ ತನ್ನ ಜೀವನದ ಅತ್ಯುನ್ನತ ತ್ಯಾಗವನ್ನು ಕೊಡಲು ಸಿದ್ದರಾಗಿರುವ ಇದನ್ನು ಬ್ರಿಟಿಷ್ ಭಾರತೀಯ ಸೇನೆ ಎಂಬ ಅಂಕಿತದಿಂದ ನಿಯುಕ್ತಗೊಳಿಸಿರಲಿಲ್ಲ ಮೊದಲಿಗೆ ಭಾರತೀಯ ಸೇನೆಯಿಂದ ಅಂಕಿತಗೊಳಿಸಲಾಗಿತ್ತು.

**ಐ.ಎನ್.ಎ ಮೊದಲ ಭಾರತೀಯ ಸೇನೆ:** ದೇಶದೆಲ್ಲೆಡೆ 73ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಬ್ರಿಟಿಷರ ದಾಸ್ಯದಿಂದ ಮುಕ್ತಿ ಹೊಂದಿದ ಸ್ವಾತಂತ್ರ್ಯವಾಗಿ ರೂಪುಗೊಳ್ಳುವುದರಲ್ಲಿ ಅಸಂಖ್ಯಾತ ಮಂದಿಯ ತ್ಯಾಗ ಬಲಿದಾನಗಳಾಗಿವೆ.

ಸ್ವಾತಂತ್ರ್ಯ ದಿನಾಚರಣೆಯ ದಿನದಂದು ನಮ್ಮನ್ನು ಹೆಚ್ಚು ಸೆಳೆಯುವುದು ಭಾರತೀಯ ಸೇನೆಯ ಪೆರೇಡ್ ಪೋಲೀಸ್ ವಿದ್ಯಾರ್ಥಿಗಳು ಎನ್.ಎಸ್.ಎಸ್, ಎನ್.ಸಿ.ಸಿ ಮತ್ತು ಸೇವಾದಳದ ಪೆರೇಡ್‌ಗಳು ಎರಡನೇಯ ಮಹಾಯುದ್ದದಲ್ಲಿ ಇಂಫೀರಿಯಲ್ ಜಪಾನ್ ಆರ್ಮಿಯೊಂದಿಗೆ ಮಿತ್ರ ಸೈನ್ಯದ ವಿರುದ್ದ ಭಾರತೀಯ ಸಂಸ್ಥೆ ಅತ್ಯಂತ ದಕ್ಷ ಸೈನ್ಯವಾಗಿ ರೂಪುಗೊಂಡ ಆಜಾಧ್ ಹಿಂದ್ ಸೇನೆ ಇಂಡಿಯನ್ ನ್ಯಾಷನಲ್ ಆರ್ಮಿ (ಐ.ಎನ್.ಎ) ಯಾಗಿ ರೂಪುಗೊಂಡಿತು.

ಐ.ಎನ್.ಎ ಬೆಳೆಯುತ್ತ ಹೋಗಿ 60,000 ಬಲಾಢ್ಯ ಯೋಧರನ್ನು ಒಳಗೊಂಡಿತ್ತು ಮತ್ತು ಹಲವು ರೆಜಿಮೆಂಟ್‌ಗಳನ್ನು ಒಳಗೊಂಡಿತ್ತು.

ಐ.ಎನ್.ಎ ಯೋಧರಿಗೆ ಜಪಾನ್ ಬರ್ಮಾ ಸೇನೆಯವರು ತೀರ್ವವಾದ ತರಭೇತಿ ನೀಡುತ್ತಿದ್ದರು. ಶಸ್ತ್ರಾಸ್ತ್ರಗಳ ಬಳಕೆಯ ತರಬೇತಿಯಲ್ಲಷ್ಟೆ ಅಲ್ಲದೆ ಸೇವೆಯ ಉಪಯೋಗದ ಬಗೆಯು ಹೇಳಿ ಕೊಡಲಾಗುತ್ತಿತ್ತು.

ಒಂದು ಸೈನಿಕನು ತನ್ನ ರಾಷ್ಟ್ರದ ಹೆಮ್ಮೆ ಅವರು ತಮ್ಮ ತಾಯ್ನಾಡಿನ ಗೌರವವನ್ನು ಅವರ ಜೀವ ಮತ್ತು ರಕ್ತದೊಂದಿಗೆ ರಕ್ಷಿಸುತ್ತಾರೆ. ತನ್ನ ದೇಶವನ್ನು ಕಾಪಾಡಿಕೊಳ್ಳಲು ಅವರು ಪ್ರಕೃತಿಯ ದಬ್ಬಾಳಿಕೆಯನ್ನು ಮತ್ತು ಗುಡುಗು, ಮಿಂಚು, ಮಳೆ, ತೀವ್ರಬಿಸಿಲು ಶೀತ, ಮರುಭೂಮಿಗಳು, ಪರ್ವತ ಅಥವಾ ಸಮುದ್ರಗಳಲ್ಲಿ ಮತ್ತು ರಾತ್ರಿಯ ಹೋರಾಟದಲ್ಲಿ ನಿರಂತರವಾಗಿ ತನ್ನ ರಾಷ್ಟ್ರದ ಬಗ್ಗೆ ತಿಳಿದುಕೊಳ್ಳಬೇಕು ಅವರು ತನ್ನ ಕುಟುಂಬದ ಜೀವನವನ್ನು ತ್ಯಾಗ ಮಾಡುವುದು ತನ್ನ ಮಕ್ಕಳಿಂದ ದೂರವಿದ್ದು,

ಇತರ ಮಕ್ಕಳ ಜೀವನವನ್ನು ಮಾತ್ರ ಉಳಿತ್ತಾರೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಮೃತಯೋಧನ ಕುಟುಂಬಕ್ಕೆ 20 ಲಕ್ಷ ರೂಪಾಯಿ ಹಾಗೂ ಕಿಸಾನ್ ನಿಧಿಯಿಂದ 5 ಲಕ್ಷ ರೂಪಾಯಿ ಘೋಷಿಸಿದ್ದಾರೆ.

ಭಾರತೀಯ ಯೋಧರ ಶಿರಚೇದನ ಕ್ಷಮೆಗೆ ಅನರ್ಹ ಮತ್ತು ಒಪ್ಪಲು ಅಸಾಧ್ಯವಾದ ಭೀಭತ್ಸ ಕೃತ್ಯ ಎಂದು ಸೇನಾ ಮುಖ್ಯಸ್ಥರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಮಂಗಳವಾರದಿಂದ ಶುಕ್ರವಾರದವರೆಗೆ ಗಡಿಯಾಚೆ ನಡೆಯುವ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದೆ ವಾರದಲ್ಲಿ ಸೋಮವಾರ ಮತ್ತು ಗಡಿಯಾಚೆ ಸಂಚು ಲಷ್ಕರ್–ಎ–ತೋಯ್ಬ ಸಂಘಟನೆ ನೆರವು ಪಡೆದಿರುವ ಸಾಧ್ಯತೆಯು ಇದೆ. ಇಂದು ಆಕ್ರೋಶ ವ್ಯಕ್ತ ಪಡಿಸಿದರು.

ಚಳಿಗಾಲದಲ್ಲಿ ನಾವು ಮನೆಯಲ್ಲಿ ಹೀಟರ್ ಒರಿಸುತ್ತ ಬೆಚ್ಚಗೆ ಮಲಗುತ್ತೇವೆ. ಆದರೆ ನಮ್ಮ ಯೋಧರು ದೇಶವನ್ನು ರಕ್ಷಿಸುತ್ತಾ ಈ ರೀತಿ ನಿದ್ರಿಸುತ್ತಾರೆ.

**ARMY**

A-ಆರಾಮ್ ಅನ್ನೋದೇ ಇಲ್ಲ

R- ರಾತ್ರಿಯಲಲ್ಲಿ ನಿದ್ದೆ ಇಲ್ಲ

M- ಮನೆಯವರು ಕೂಡ ದೂರ

Y- ಯಾವಾಗ ಬೇಕಾದರು ದೇಶಕ್ಕೆ ಪ್ರಾಣ ಕೊಡೋಕೆ ಸಿದ್ದ

Once a Soldier Always a Soldier

ಭಾರತದ ದೇಶದ ಎರಡು ಕಣ್ಣುಗಳು

ಜೈ ಜವಾನ್ ಜೈ ಕಿಸಾನ್

*******************************

## ಗ್ರಾಮ ಪಂಚಾಯತಿ ಕಾರ್ಯಾಲಯ

**ರೋಹನ್** ತೃತೀಯ ಬಿ.ಎ (ಹೆಚ್.ಇ.ಪಿ)

**ಪೀಠಿಕೆ:** ಗ್ರಾಮ ಪಂಚಯತ್ ವ್ಯವಸ್ಥೆಯನ್ನು ಮೊಟ್ಟ ಮೊದಲ ಬಾರಿಗೆ ಪ್ರಧಾನಿ ಜವಹರ್‌ಲಾಲ್ ನೆಹರುರವರು 1959 ರ ಅಕ್ಟೋಬರ್ 2 ರಂದು ರಾಜಸ್ಥಾನದಲ್ಲಿ ಜಾರಿಗೆ ತಂದರು. ಇದರ ಹಿನ್ನಲೆ ಏನೆಂದರೆ, ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜಾತಿ, ಮತ ಪಂಥಗಳು ಎಲ್ಲಾ ಒಂದೇ ಯಾವುದೇ ರೀತಿಯ ಮೇಲು ಕೀಳು ಇರಬಾರದೆಂದು ಗ್ರಾಮಗಳಿಗೆ ಸ್ವತಃ ತಾವೇ ಭೇಟಿ ಮಾಡಿ ಅಲ್ಲಿರುವಂತಹ ಅಸ್ಪೃಶ್ಯ ಮತ್ತು ಹಿಂದುಳಿದ ಹರಿಜನರ ಬೀದಿಗಳಿಗೆ ಭೇಟಿ ನೀಡಿ ಅವುಗಳನ್ನು ಸ್ವತಃ ತಾವೇ ಜಾಗೃತಿ ಮೂಡಿಸುವ ಹಾಗೇ ಕೆಲವೊಂದು ಯೋಜನೆಗಳನ್ನು ರೂಪಿಸಿಕೊಮಡು ಸ್ವಚ್ಛಗೊಳಿಸಿದರು. ಅವರ ಮನೆಗಳಲ್ಲಿಯೇ ಕೆಲವೊಮ್ಮೆ ಉಳಿದು ವಿಶ್ರಾಂತಿ ಪಡೆದು ಜನರಿಗೆ ಸ್ವಚ್ಚತೆಯ ಬಗ್ಗೆ ಅರಿವು ಮೂಡಿಸುತ್ತಿದ್ದರು ಈ ರೀತಿಯಾದ ಗ್ರಾಮ ಸೇವೆಯನ್ನು ಕಂಡ ಜವಹರ್‌ಲಾಲ್ ನೆಹರುರವರು ಸ್ವತಂತ್ರ್ಯ ನಂತರದ ಮೊದಲ ಪ್ರಧಾನ ಮಂತ್ರಿಯಾದ ಇವರು ಗಾಂಧೀಜಿ ಕನಸನ್ನು ನನಸಾಗಿಸಲು ಅವರ ಜನ್ಮದಿನವಾದ ಅಕ್ಟೋಬರ್ 2 ರಂದು ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದರು. ಈ ವ್ಯವಸ್ಥೆಯಿಂದ ಗ್ರಾಮದಲ್ಲಿರುವ ಎಲ್ಲಾ ಜನತೆಗೆ ಮೂಲ ಸೌಕರ್ಯಗಳೆಲ್ಲವು ದೊರಕಲಿ ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಗ್ರಾಮ ಪಂಚಾಯ್ತಿ ಎಂಬ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಗ್ರಾಮ ಪಂಚಾಯ್ತಿ ವ್ಯವಸ್ಥೆಯಿಂದ ಎಲ್ಲಾ ಗ್ರಾಮಸ್ಥರಿಗೂ ಮೂಲ ಸೌಕರ್ಯಗಳು ದೊರೆಯಬೇಕೆಂದು ಒಂದು ವ್ಯವಸ್ಥೆ ಪೂರ್ಣವಾಗಿ ರಚಿತವಾಗಿದೆ.

ಈ ಗ್ರಾಮ ಪಂಚಾಯ್ತಿ ವ್ಯವಸ್ಥೆಯಲ್ಲಿ ಎಲ್ಲಾ ಸದಸ್ಯರು ಗ್ರಾಮದ ಜನರಿಂದ ಚುನಾವಣೆಯ ಮೂಲಕ ಆಯ್ಕೆಯಾಗುತ್ತಾರೆ. ಈ ಚುನಾವಣೆಯಾದ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ತಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತಾರೆ. ಮತ್ತೊಬ್ಬರನ್ನು ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತಾರೆ. ಏಕೆಂದರೆ, ಅಧ್ಯಕ್ಷರು ಗೈರು ಹಾಜರಾದಲ್ಲಿ ಅವರ ಕಾರ್ಯಕಲಾಪಗಳನ್ನು ಉಪಾಧ್ಯಕ್ಷರು ನೋಡಿಕೊಳ್ಳುತ್ತಾರೆ ಎಂಬುವ ಪರಿಕಲ್ಪನೆಯ ಮೇರೆಗೆ ಆಯ್ಕೆ ಮಡುತ್ತಾರೆ.

ಈ ಗ್ರಾಮ ಪಂಚಾಯ್ತಿ ವ್ಯವಸ್ಥೆಯ ಆಡಳಿತ ಅಧಿಕಾರಕ್ಕಾಗಿ ಪಿ.ಡಿ.ಓಗಳನ್ನು ಒಳಗೊಂಡಿರುತ್ತದೆ.

P.D.O (Panchayath Development Officer) ಗ್ರಾಮ ಪಂಚಾಯತಿಯ ಕಾರ್ಯಾಲಯಗಳಲ್ಲಿ ಆಡಳಿತ ಅಧಿಕಾರಿಯಾಗಿ ಪಿ.ಡಿ.ಓಗಳನ್ನು ಆಯ್ಕೆ ಮಾಡಲಾಗುತ್ತದೆ. ಏಕೆಂದರೆ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಸದಸ್ಯರು ನಾಮ ಮಾತ್ರ ಕಾರ್ಯಾಂಗವಾಗಿದ್ದಾರೆ. ಪಿ.ಡಿ.ಓ ಗಳು ನೈಜಕಾರ್ಯಾಂಗವಾಗಿ ಕಾರ್ಯ ನಿರ್ವಹಿಸುತ್ತಾರೆ. ಕಾರ್ಯನಿರ್ವಹಿಸುವ ಅವಧಿಯನ್ನು ಹೊಂದಿರುತ್ತರೆ (5 ವರ್ಷ) ಆದರೆ ಪಿ.ಡಿ.ಓಗಳು ಅವರು ನಿವೃತ್ತಿಯಾಗುವ ವರೆಗೂ ಕಾರ್ಯನಿರ್ವಹಿಸಬಹುದು ಸಾರ್ವಜನಿಕ ಸೇವೆ ಸಲ್ಲಿಸುವ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ.

**ಪಿ.ಡಿ.ಓಗಳು ಕೆಲವೊಂದು ಅಧಿಕಾರ ಕಾರ್ಯಗಳನ್ನು ಹೊಂದಿದ್ದಾರೆ ಅವುಗಳೆಂದರೆ ;**

- ಪಿ.ಡಿ.ಓ. ಗಳು ತನ್ನ ಗ್ರಾಮ ಪಂಚಾಯ್ತಿಯ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ದಕ್ಷ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ.
- ಗ್ರಾಮಕ್ಕೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ಒದಗಿ ಬಂದರೆ ಉದಾ: (ಕಾಂಕ್ರಿಟ್ ರಸ್ತೆ, ಬೀದಿ ದೀಪ, ಚರಂಡಿ ಕಾಲುವೆಗಳು) ಮುಂತಾದ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಬಿಡುಗಡೆಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.
- ಗ್ರಾಮ ಪಂಚಾಯತಿಯ ಅಧ್ಯಕ್ಷರಿಗಗೆ ಮತ್ತು ಸದಸ್ಯರಿಗೆ ಕೆಲವೊಂದು ವಿಷಯಗಳನ್ನು ಚರ್ಚಿಸಲು ಸಭೆ ಕರೆಯುವ ಅಧಿಕಾರವನ್ನು ಹೊಂದಿರುತ್ತಾರೆ.
- ಒಂದು ಗ್ರಾಮ ಪಂಚಾಯ್ತಿ ಕಾರ್ಯಾಲಯವು 7 ರಿಂದ 35 ಸದಸ್ಯರನ್ನು ಒಳಗೊಳ್ಳುವ ಅವಕಾಶ ಹೊಂದಿದೆ. ಗ್ರಾಮ ಪಂಚಾಯ್ತಿಯ ಸದಸ್ಯರುಗಳು ಗ್ರಾಮದ ವಾರ್ಡ್‌ಗಳಿಂದ ಆಯ್ಕೆಯಾಗಿರುತ್ತಾರೆ ಗ್ರಾಮ ಪಂಚಾಯ್ತಿಗಳಲ್ಲಿಯು ಮೀಸಲಾತಿ (ಎಸ್.ಟಿ, ಎಸ್.ಸಿ) ಸೌಲಭ್ಯಗಳನ್ನು ನೀಡಲಾಗಿದೆ.
- ಗ್ರಾಮ ಪಂಚಾಯ್ತಿಗಳಲ್ಲಿ ಸಾಮಾನ್ಯವಾಗಿ ತಿಂಗಳಿಗೆ ಒಂದು ಸಭೆ ಕರೆಯಲೇ ಬೇಕಾಗಿರುತ್ತದೆ.
- ಅದೇ ರೀತಿ ಕನಿಷ್ಠ ವರ್ಷಕ್ಕೆ 4 ಗ್ರಾಮ ಸಭೆಗಳನ್ನು ಕರೆಯಬೇಕಾಗುತ್ತದೆ.
- ಗ್ರಾಮ ಪಂಚಾಯ್ತಿ ಅಧ್ಯಕ್ಷರು ತುರ್ತು ಪರಿಸ್ಥಿತಿಯ ತುರ್ತು ಸಭೆಗಳನ್ನು ಕರೆಯುತ್ತಾರೆ.
- ಉದಾ: ಪ್ರಕೃತಿ ವಿಕೋಪ, ಭೂಕಂಪ, ನೆರೆಹಾನಿ.
- ಸಭೆಯ ಚರ್ಚೆಗಳನ್ನು ವಿಷಯ ಪ್ರಸ್ತಾವನೆಯಾದಾಗ ಆ ವಿಷಯವನ್ನು ಗ್ರಾಮ ಪಂಚಾಯತಿ ಬಹುಮತದ ಆಧಾರದ ಮೇಲೆ ಜಾರಿಗೆ ತರುವಂತೆ ತಿಳಿಸುತ್ತಾರೆ.
- ಗ್ರಾಮ ಪಂಚಾಯ್ತಿ ಅಧ್ಯಕ್ಷರಿಗೆ ಮಾಸಿಕ ಗೌರವಧನವೆಂದು 3,000 ರೂ. ಉಪಾಧ್ಯಕ್ಷರಿಗೆ 2,000 ರೂ. ಮತ್ತಯ ಗ್ರಾ.ಪಂ ಸದಸ್ಯರಿಗೆ 1,000 ರೂ ಮಾಸಿಕ ಗೌರವಧನವೆಂದೂ ಸರ್ಕಾರ ನೀಡುತ್ತದೆ.
- ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಸದಸ್ಯರು ಒಂದು ಸಭೆಯಲ್ಲಿ ಉಪಸ್ಥಿತಿ ಹೊಂದಿದರೆ ಸರ್ಕಾರ 100 ರೂ ಗೌರವ ಧನವನ್ನು ನೀಡುತ್ತದೆ.

## ಗ್ರಾಮ ಪಂಚಾಯತಿಯ ಕಾರ್ಯಗಳು

ಗ್ರಾಮ ಪಂಚಾಯ್ತಿಗಳು ಗ್ರಾಮಗಳ ಅಭಿವೃದ್ಧಿಗಾಗಿ ಕೆಲವೊಂದು ಅಭಿವೃದ್ಧಿ ಕಾರ್ಯಗಳನ್ನು ಯೋಜನೆ ರೂಪದಲ್ಲಿ ಅನುಷ್ಠಾನಗೊಳಿಸುತ್ತವೆ. ಅವುಗಳನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

- ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕುಡಿಯಲು ಯೋಗ್ಯವಾದ ನೀರನ್ನು ಸರಬರಾಜು ಮಡುವುದು.
- ಬೀದಿ ದೀಪಗಳ ಸೌಲಭ್ಯಗಳನ್ನು ಗ್ರಾಮಗಳಿಗೆ ಒದಗಿಸಿಕೊಡುವುದು.
- ಶೌಚಾಲಯ ಮುಕ್ತ (ಬಯಲು ಶೌಚಾಲಯ ನಿಷೇಧಿಸಿ) ಗ್ರಾಮಗಳನ್ನು ಮಾಡಬೇಕೆಂದು ಮುಖ್ಯ ಉದ್ದೇಶ ಹೊಂದಿದೆ.
- ಗ್ರಾಮಗಳಿಂದ ಕಂದಾಯಗಳನ್ನು ವಸೂಲಿ ಮಾಡುವ ಕಾರ್ಯ.
- ಗ್ರಾಮ ಪಂಚಾಯತಿಯಲ್ಲಿ ಒದಗಿ ಬಂದ ಅನುದಾನದಲ್ಲಿ ಕಾಂಕ್ರಿಟ್ ರಸ್ತೆಗಳು ಮತ್ತು ಬಾಕ್ಸ್ ಚರಂಡಿ ವ್ಯವಸ್ಥೆಗಳನ್ನು ಮಾಡಿಕೊಡುವ ಕಾರ್ಯ.
- ಗ್ರಾಮಸ್ಥರಿಗೆ ಶೌಚಾಲಯ ನಿರ್ಮಿಸಲು ಸಬ್ಸಿಡಿ ದರದಲ್ಲಿ ಹಣ ನೀಡುವ ಕಾರ್ಯ ಇತ್ಯಾದಿ.

***********

## ನಮಗಾಗಿ ನಮ್ಮ ರೈತ

**ಹೇಮಂತ್‌ಕುಮಾರ್ ಬಿ.ಎಸ್**. ತೃತೀಯ ಬಿ.ಎ. (ಹೆಚ್.ಇ.ಪಿ)

ರೈತ ಎಂಬ ಪದ ಕೇವಲ ಎರಡೇ ಅಕ್ಷರ ಇರಬಹುದು. ಆದರೆ ಆ ಎರಡು ಅಕ್ಷರಗಳ ಮಹತ್ವ ಅಪಾರವಾದದ್ದು ಅದನ್ನು ವರ್ಣಿಸಲು ಪದಗಳೇ ಸಾಕಾಗುವುದಿಲ್ಲ. ಒಬ್ಬ ಶ್ರೀಮಂತ ವ್ಯಕ್ತಿ ಹಣವಂತನಾಗಿದ್ದರೇ ಒಬ್ಬ ಸಾಮಾನ್ಯ ಬಡ ರೈತ ಗುಣವಂತನಾಗಿರುತ್ತಾನೆ. ಅವನ ಕಷ್ಟ–ನಷ್ಟಗಳು ಅಪಾರವಾಗಿವೆ. ಇಂತಹ ಸಮಯದಲ್ಲಿ ಅವನು ನಿರ್ವಹಿಸುವ ಕೆಲಸ ಪ್ರಮುಖವಾದದ್ದು ಇದಕ್ಕೆ ಒಂದು ಸಣ್ಣ ಉದಾಹರಣೆಯೆಂದರೆ: ಈ ಪ್ರಪಂಚದಲ್ಲಿ ಯಾವುದೇ ಕೆಲಸ ಕಾರ್ಯಗಳು ನಿಂತರು ಅದನ್ನು ಮತ್ತೇ ಪುನರಾಂಭಿಸಬಹುದು. ಆದರೆ ರೈತರು ಕೃಷಿಗೆ ಸಂಬಂಧಪಟ್ಟ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸದಿದ್ದರೆ ಯಾವುದೇ ಬೆಳೆಗಳನ್ನು ಬೆಳೆಯುವುದು ಅಸಾಧ್ಯ ಇದರಿಂದ ಅವನು ಹೂಡಿದ ಬಂಡವಾಳವೂ ಕೂಡ ಬರದೇ ಅವನು ಆರ್ಥಿಕ ಅಂಥ ಪತನಕ್ಕೆ ಸಿಲುಕುತ್ತಾನೆ. ಇದೆಲ್ಲಕ್ಕಿಂತ ಹೆಚ್ಚಾಗಿ ಇವನನ್ನೇ ಸಹಿಸಲಾಗದ ರೈತ ಇಂದಿಗೂ ಸಹ ಆತ್ಮಹತ್ಯೆಗೆ ಮುಂದಾಗುತ್ತಿದ್ದಾನೆ. ಕಾರಣ ರೈತರು ವಿವಿಧ ಮೂಲಗಳಿಂದ ಸಾಲಗಳನ್ನು ತೆಗೆದಿರುತ್ತಾರೆ. ಇದರಿಂದಾಗಿ ವ್ಯಾಪಾರಸ್ಥರ ಹಾವಳಿ ಇತ್ತ ವಿಪರೀತ ಬರಗಾಲ ಬಂದರೆ ಅತ್ತ ಒಂದೊಮ್ಮೆ ವಿಪರೀತ ಮಳೆಗಾಲವಾಗುತ್ತದೆ. ಇದರಿಂದ ಉತ್ತಮ ಬೆಳೆ ಬೆಳೆದರೂ ಕೈಗೆ ಬಂದ ತುತ್ತು ಬಾಯಿಗೆ ಬರುತ್ತಿಲ್ಲ. ಸಾಲದ್ದಕ್ಕೆ ಈ ಕೆಟ್ಟ ಸಮಾಜದಲ್ಲಿ ಕಾಲೆಳೆಯುವವರೇ ಜಾಸ್ತಿಯಾಗಿದೆ.

ಈ ಜಗತ್ತೇ ಒಂದು ಮಾಯೇ ಇಲ್ಲಿ ಎಲ್ಲರೂ ಒಂದೋಮ್ಮೇ ಕೆಳಗೆ ಎಡವಿ ಬೀಳಲೆ ಬೇಕು ಅಂದ ಮಾತ್ರಕ್ಕೆ ಮೇಲೆ ಏಳುವುದಿಲ್ಲ ಎಂದರ್ಥವಲ್ಲ. ಅವರಿಗೆ ಧೈರ್ಯ ತುಂಬಿ ಅವರ ಮಾನೋಸ್ಥೈರ್ಯವನ್ನು ಹೆಚ್ಚಿಸಿ ಯಾವುದೇ ಅನಾಹುತಗಳಿಗೆ ಅವರು ಎದುರಾಗದಂತೆ ತಡೆದು ಅವರಲ್ಲಿ ಅರಿವನ್ನು ಮೂಡಿಸುವುದು ಕೇವಲ ಕುಟುಂಬದವರ ಗ್ರಾಮಸ್ಥರ ಹಾಗೂ ಸಂಬಧಿಕರ ಕೆಲಸವಲ್ಲ ಬದಲಾಗಿ ನಮ್ಮ ನಿಮ್ಮೆಲ್ಲರ ಕೆಲಸ ಇದರಿಂದಾಗಿ ಯಾವುದೇ ಅಹಿತಕರ ಘಟನೆಗಳಿಗೂ ಒಳಗಾಗದೇ ಬದುಕಿನ ಯಶಸ್ಸಿನ ಸೂತ್ರದತ್ತ ಮುನ್ನಡೆಯುತ್ತಾರೆ. ಎಲ್ಲರೂ ಒಂದು ಕ್ಷಣ ಯೋಚಿಸಿ ಈ ದೇಶದಲ್ಲಿ ರೈತರಿಲ್ಲದೇ ಇರಬಹುದು ಅಂತಾ ಸಾಧ್ಯವೇ ಇಲ್ಲ ಏಕೆಂದರೆ ರೈತರು ಒಂದೊಮ್ಮೆ ಯಾವುದೇ ಬೆಳೆಗಳನ್ನು ಬೆಳೆಯುವುದು ನಿಲ್ಲಿಸಿದರೆ ಯಾವ ರೀತಿಯ ಧವಸ –ಧಾನ್ಯಗಳು ಸಿಗುವುದಿಲ್ಲ. ಮನುಷ್ಯ ಎಷ್ಟೇ ಶ್ರೀಮಂತ ವ್ಯಕ್ತಿಯಾಗಿದ್ದರೂ ಎಷ್ಟೇ ಯಶಸ್ಸುಗಳಿಸಿದ್ದರೂ ಹೊಟ್ಟೆಗೆ ಬೇಕಾಗಿರುವುದು ಆಹಾರವೇ ಹೊರತು ಹಣವಲ್ಲ. ಇಂದು ರೈತರಲ್ಲೂ ಹಣದ ವ್ಯಾಮೋಹ ಮೂಡಿದ್ದು. ನೀರಾವರಿ ಪ್ರದೇಶದಲ್ಲೂ ಭತ್ತದದ ಬೆಳೆಯ ಬದಲಾಗಿ ಅಡಿಕೆಯನ್ನು ಬೆಳೆಯಲು ಮುಂದಾಗುತ್ತಿದ್ದಾರೆ. ಏಕೆಂದರೆ ಅಡಿಕೆಗೆ ಹೆಚ್ಚಿನ ಬೆಲೆ ಆದರೆ ಎಷ್ಟೇ ಹಣಗಳಿದ್ದರೂ ಬೇಕಾಗಿರುವುದು ಆಹಾರವೇ ಹೊರತು ಬೆಳೆದ ಅಡಕೆಯಲ್ಲ ಇದನ್ನು ಎಲ್ಲರೂ ಅರಿಯ ಬೇಕಾಗಿದೆ.

ಇಷ್ಟೆಲ್ಲಾ ಸಮಸ್ಯೆಗಳ ನಡುವೆ ರೈತರ ಸಮಸ್ಯೆಗಳನ್ನು ಕೇಳಿದ ಸರ್ಕಾರ ಎಷ್ಟೇ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರೂ ಪರಿಹರಿಸದೇ ಬದಲಾಗುತ್ತಿರುವ ಸರ್ಕಾರ ರೈತರಿಗೆ ನಿಗದಿತ ಬೆಂಬಲ ಬೆಲೆಯನ್ನೇ ಘೋಷಿಸಿದರೂ ಮಧ್ಯವರ್ತಿಗಳು\ದಲ್ಲಾಳಿಗಳು ಅದನ್ನು ಅರ್ಧ ಬೆಲೆಗೆ ಕೊಂಡು ನಂತರ ಅಧಿಕ ಬೆಲೆಗೆ ಮಾರಿ ತಮ್ಮ ಅಭಿವೃದ್ಧಿಗೆ ಒತ್ತು ನೀಡಿ ರೈತರಿಗೆ ಮೋಸ ಮಾಡುತ್ತಿದ್ದಾರೆ. ಅಂದರೆ 1 ಕ್ವಿಂಟಾಲ್ ಜೋಳಕ್ಕೆ 2200 ರೂ ನಿಗದಿತ ಬೆಲೆಯಿದ್ದರೇ ಮಧ್ಯವರ್ತಿಗಳು ರೈತರಿಂದ ಕೇವಲ 1500 ರೂಗಳಿಗೆ ಕೊಂಡುಕೊಳ್ಳುತ್ತಿದ್ದಾರೆ. ಇದನ್ನು ರೈತರು ಕೇಳಲು ಹಿಂಜರಿಯುತ್ತಾರೆ. ಕಾರಣ ಅವರಿಂದಲೇ ಮುಂಗಡವಾಗಿ ಸಾಲವನ್ನು ಪಡೆದಿರುತ್ತಾರೆ. ವಿಧಿಯಿಲ್ಲದೇ ಮಧ್ಯವರ್ತಿಗಳು ವ್ಯಾಪಾರಸ್ಥರಿಗೆ ಬೆಳೆದ ಬೆಳೆಯನ್ನು ಮಾರ ಬೇಕಾಗುತ್ತದೆ. ಇದಕ್ಕೇ ಬದಲಾಗಿ ರೈತರಿಗೆ ನಿಗದಿತ ಬೆಲೆಯನ್ನು ನೀಡಿ ಬೆಳೆಯನ್ನು ಕೊಂಡುಕೊಳ್ಳುವಂತೆ ಸರ್ಕಾರ ಖಡಕ್ ಆದೇಶವನ್ನು ಹೊರಡಿಸಬೇಕು ಇದರಿಂದಾಗಿ ರೈತರಿಗೆ ಹೆಚ್ಚಿನ ಉಪಯೋಗವಾಗಲಿದೆ. ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವುದರ ಮೂಲಕ ರೈತರಿಗೆ ನೆರವಾಗಬೇಕಿದೆ.

ರೈತರು ಇಮದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಅವುಗಳಲ್ಲಿ ಅತ್ಯಂತ ಪ್ರಮುಖ ಸಮಸ್ಯೆಯೆಂದರೆ:–

* ನಿಗದಿತ ಬೆಲೆ ಸಿಗದಿರುವುದು.
* ಕೃಷಿ ಮಾರುಕಟ್ಟೆಗಳು ಹೆಚ್ಚಾಗಿ ವ್ಯಾಪಾರಸ್ಥರ ಶೋಷಣೆ ಉಂಟಾಗುತ್ತದೆ.
* ಸರ್ಕಾರ ಕನಿಷ್ಠ ಬೆಲೆಗೆ ಬೆಳೆಗಳ ಬೆಲೆಯನ್ನು ಮಿತಿಗೊಳಿಸಬೇಕು ಇದರಿಂದಾಗಿ ರೈತರಿಗೆ ಹೆಚ್ಚು ನೆರವಾಗಲಿದೆ.
* ಹಣಕಾಸಿನ ಕೊರತೆ
* ರೈತರಿಗೆ ಸೂಕ್ತ ಮಾರ್ಗದರ್ಶನ ಇಲ್ಲದಿರುವುದು.

ನಾವಿಂದು ಆಧುನಿಕ ಯುಗದಲ್ಲಿದ್ದೇವೆ. ಸಹಜವಾಗಿಯೇ ನಮ್ಮೆಲ್ಲ ಚಟುವಟಿಕೆಯಲ್ಲಿ ವಿಜ್ಞಾನ ತಂತ್ರಜ್ಞಾನಗಳ ಬಳಕೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಆದರೆ ತಂತ್ರಜ್ಞಾನಗಳ ಲಾಭದಿಂದ ಹೆಚ್ಚಾಗಿ ವಂಚಿತರಾದವರು ಭಾರತದ ರೈತರೇ ಇಂದು ಸಾಮಾನ್ಯ ಹಳ್ಳಿಯಿಂದ ಭಾರತದ ರಾಜಧಾನಿ ದೆಹಲಿಯವರೆಗೂ ಹಾಗೂ ಎಲ್ಲ ಕ್ಷೇತ್ರದ ಜನರು ವಿಜ್ಞಾನ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯುವುದರಲ್ಲಿ ನಿಸ್ಸೀಮರಾಗಿದ್ದು, ಇಂದು ಮಂಚೂಣಿಯಲ್ಲಿದೆ. ಆದರೆ ಇದಾವುದನ್ನು ಅಷ್ಟಾಗಿ ತಿಳಿಯದ ರೈತನು ಕೇವಲ ನ್ಯಾಯಯುತ ಬೆಲೆಯೊಂದನ್ನು ಮಾತ್ರ ಬೇಡುತ್ತಲೇ ಇದ್ದಾನೆ.

ರೈತರ ಸಾಮಾರ್ಥ್ಯವನ್ನು ರೈತರು ಜಾನುವಾರುಗಳ ಮೇಲಿನ ಅವಲಂಬನೆಯನ್ನು ಅಳೆಯುವ ಸಂಧರ್ಭ ಇಂದು ಜಗತ್ತಿನ ಯಾವುದೇ ಭಾಗದಲ್ಲೂ ಬಂದಿಲ್ಲ. ರೈತರ ದುಡಿಮೆ ಹಾಗೂ ಕೊಡುಗೆ ಇತರರಿಗೆ ಅರಿವಿಗೆ ಬಂದಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಬರಬೇಕು ಎಂಬ ಕೊರಗು ನಿಸ್ವಾರ್ಥ ರೈತನಲಿಲ್ಲ, ಒಂದು ಕಾಲದಲ್ಲಿ ತಟಸ್ಥೆ ಆಗಿದ್ದ ಈ ಕಾಯಕ ಯೋಗಿಯ ಪ್ರವೃತ್ತಿ ಈಗ ಅಕಾಲೀಕವಾಗಿದೆ. ಇಂದಿನ ಬದಲಾದ ಆಚಾರ- ವಿಚಾರ, ನಡೆ-ನುಡಿ, ಸಂಪ್ರದಾಯ, ಸಂಸ್ಕೃತಿಗೆ ಹೇಗೆ ಹೇಳುವುದು ಎಂಬುದು ದೊಡ್ಡ ಚಿಂತನೆಯಾಗಿದೆ. ಈ ತೀತಿಯ ಅರಿವನ್ನು ಉಂಟು ಮಾಡುವ ಸೌಜನ್ಯತೆ ಸರ್ವರಲ್ಲೂ ಮೂಡಿ ಬರಬೇಕು.

* ರೈತರು ಉತ್ಪಾದಿಸಿದ ಯಾವುದೇ ಸರಕುಗಳನ್ನು ಒತ್ತಡದ ಮಾರಾಟದ ಹಿಡುಗಿನಿಂದ ವಿಮುಕ್ತಗೊಳಿಸಬೇಕು.*
* ತಾಂತ್ರಿಕ ಪ್ರಗತಿಯತ್ತ ಗಮನ ಹರಿಸಿ ಅದರಿಂದ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ನೀಡಿ ಲಾಭ ಪಡೆಯಬೇಕಾಗಿರುವ ನೀತಿ-ನಿಯಮಗಳನ್ನು ರೂಪಿಸಬೇಕು.
* ಬಹುಬೆಳೆ ಪದ್ಧತಿ ಹಾಗೂ ಅಧಿಕ ಇಳುವರಿ ನಿಡುವ ತಳಿಗಳನ್ನು ಪರಿಚಯಿಸಬೇಕು.
* ವೈವಿದ್ಯಮಯ ಬೆಳೆಯನ್ನು ಬೆಳೆಯಲು ಗಮನ ನೀಡಬೇಕು.

ಭಾರತದ ಬೆನ್ನೆಲುಬು ರೈತನೆಂಬುದು ನಮ್ಮೆಲ್ಲರಿಗೂ ತಿಳಿದ ವಿಷಯ ಭಾರತ ಕೃಷಿ ಪ್ರಧಾನ ದೇಶವಾಗಿರುವುದರಿಂದ ಇಲ್ಲಿ ರೈತರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ನಾವು ತಿನ್ನುವ ಧವಸ- ಧಾನ್ಯಗಳು, ಹಣ್ಣು, ತರಕಾರಿ, ಹೈನುಗಾರಿಕಾ ಉತ್ಪನ್ನಗಳನ್ನೆಲ್ಲ ಉತ್ಪಾದಿಸವುದು ರೈತರೇ ಅನಾದಿ ಕಾಲದಿಂದಲೂ ನಮ್ಮ ದೇಶವನ್ನು ಮುನ್ನಡೆಸಿದ್ದು ಈ ರೈತರೇ ಎಂಬುದು ತುಂಬಾ ಹೆಗ್ಗಳಿಕೆಯ ವಿಷಯ ಇದರೊಂದಿಗೆ ನಮ್ಮಲ್ಲಿ ಕೆಲವು ನಡೆದ ರೈತ ಚಳುವಳಿಗಳೂ ಇತಿಹಾಸದ ಪುಟಗಳಲ್ಲಿ ಸೇರಿಕೊಂಡಿವೆ. ಈ ಶ್ರಮ ಜೀವಿಗಳಾದ ರೈತರು ಎಂದೆಂದಿಗೂ ಗೌರವಿಸಲ್ಪಡುವ ವ್ಯಕ್ತಿಗಳೇ ಆಗಿರುತ್ತರೆ. ಇದಕ್ಕಾಗಿ ನಮ್ಮ ದೇಶದಲ್ಲಿ ಇವರಿಗಾಗಿ ಒಂದು ದಿನವನ್ನು ಮೀಸಲಿಡಲಾಗಿದೆ. ಅದುವೇ ಡಿಸೆಂಬರ್ 23 ಈ ದಿನವನ್ನು ದೇಶದೆಲ್ಲೆಡೆ ರೈತರ ದಿನ ಅಥವಾ ಕಿಸಾನ್ ದಿವಸ್ ಎಂದು ಆಚರಿಸಲಾಗುತ್ತದೆ.. ಮೂಲತಃ ಈ ದಿನವನ್ನು ಆಯ್ಕೆ ಮಾಡಲು ಇನ್ನೊಂದು ಕಾರಣವೂ ಇದೆ.

ಈ ದಿನ ಭಾರತದ ಜನಪ್ರೀಯ ರೈತ ಮುಖಂಡ ದಿವಂಗತ ಚೌಧರಿ ಚರಣ್‌ಸಿಂಗ್ ರವರು ಹುಟ್ಟಿದ ದಿನ. ಇವರ ಸ್ಮರಣಾರ್ಥವಾಗಿ ಈ ದಿನವನ್ನು ರೈತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಏಕೆಂದರೆ ಇವರು ಭಾರತದ ಗೌರವಾನ್ವಿತ ಪ್ರಧಾನಿಯಾಗಿದ್ದರೂ ಸರಲ ಜೀವನ ನಡೆಸುವ ಜೊತೆಗೆ ಅಧಿಕಾರದಲ್ಲಿದ್ದಾಗ ಭಾರತೀಯ ರೈತರ ಜೀವನವನ್ನು ಸುಧಾರಿಸಲು ಅನೇಕ ಪ್ರಯೋಜನಕಾರಿ ನೀತಿಗಳನ್ನು ಪರಿಚಯಿಸಿದರು. 'ಜೈ ಜವಾನ್-ಜೈ ಕಿಸಾನ್' ಎಂಬ ಪ್ರಸಿದ್ದ ಘೋಷಣೆಯನ್ನು ಅನುಸರಿಸಿದರು ಜಮೀನ್ದಾರಿ ಪದ್ಧತಿಯ ವಿರುದ್ಧ ಮೊದಲ ಬಾರಿಗೆ ಧ್ವನಿ ಎತ್ತಿದ್ದಲ್ಲದೆ ಇದರ ನಿರ್ಮೂಲನೆಗೆ ಶ್ರಮಿಸಿದರು.

ಪ್ರಸ್ತುತ ಭಾರತೀಯ ರೈತರದ್ದು ಬಲು ಕಷ್ಟದ ಜೀವನ ಹೆಚ್ಚು ವಿದ್ಯಾಭ್ಯಾಸವನ್ನು ಪಡೆಯದ ಅವರ ಸಾಮಾನ್ಯ ಬದುಕು ದುಸ್ತರವಾಗಿದೆ. ಇವರನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ಸತತ ಪ್ರಯತ್ನ ಮಾಡಬೇಕಿದೆ ಕೃಷಿಗೆ ಅಗತ್ಯವಾದ ಆಧುನಿಕ ಸೌಲಭ್ಯಗಳನ್ನು ಪೂರೈಸಲು ಕೃಷಿ ಇಲಾಖೆಯ ಮೂಲಕ ನೆರವಾಗಬೇಕಿದೆ. ಒಟ್ಟಿನಲ್ಲಿ ರೈತರ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಬೇಕಾಗಿದೆ. ■

**********



# ನನ್ನ ಪ್ರೀತಿಯ ಸ್ನೇಹಿತೆ

**ಮಮತಾ ಬಿ.** ತೃತೀಯ ಬಿ.ಎ.

ನನ್ನ ಪ್ರೀತಿಯ ಸ್ನೇಹಿತೆ ಅವಳೇ ಗೀತಾ ದೇಹ ಬೇರೆ ಆತ್ಮ ಒಂದೆ ಎನ್ನುವ ಹಾಗೇ ಇದ್ದೆವು ನಮ್ಮ ಬಾಲ್ಯದ ನೆನವು ಮಾಸಿಹೋಗದ ನೆನಪುಗಳು. ಅಷ್ಟು ಚೆನ್ನಾಗಿ ಇತ್ತು ನಾನು ಅವಳು ಒಂದೇ ಶಾಲೆಯಲ್ಲಿ ಓದಲಿಲ್ಲ ಆದರೂ ಅವಳು ನಾನು ತುಂಬಾ ಆತ್ಮೀಯರು. ನಾವು ಕಳೆದ ಬಾಲ್ಯ ತುಂಬಾ ರಸಮಯವಾಗಿತ್ತು. ಒಟ್ಟಿಗೆ ಆಡಿದ ಆಟಗಳು ತುಂಬಾ ಖುಷಿ ಕೊಡುತ್ತಿದ್ದವು.

**ಗೀತಾ ಮತ್ತು ನನ್ನ ಬಾಲ್ಯ ದಿನಗಳು**

ಅವಳು ನಾನು ಪ್ರಾಥಮಿಕ ಶಿಕ್ಷಣದಲ್ಲಿದ್ದಾಗ ಅವಳು ನಮ್ಮ ಊರಿನಲ್ಲಿ ಇದ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಳು ನಾನು ವಿದ್ಯಾಲಯದಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದೆ ಅವಳು ನಾನು ಎದುರು-ಬದುರು ಮನೆಯವರು ಇಬ್ಬರೂ ಸಂಜೆ ಸೇರಿದಾಗ ನಮ್ಮ ಶಾಲೆಯ ಬಗ್ಗೆ ಮಾತನಾಡುತ್ತಿದ್ದವು ಹಾಗೇ ಶಾಲೆ ರಜೆ ಸಿಕ್ಕಾಗ ನಾವು ಎಲ್ಲರೂ ಸೇರಿ ಆಟ ಆಡುತ್ತಿದ್ದೇವು ಅವು ಯಾವೆಂದರೆ ಕುಂಟೆಬಿಲ್ಲೆ, ಕಣ್ಣಮುಚ್ಚಾಲೆ, ಅಡುಗೆ ಆಟ ಮುಂತಾದವು ನಮಗೆ ಆ ವಯಸ್ಸಿನಲ್ಲಿ ಸ್ವಲ್ಪ ಧಾರವಾಹಿ ಹುಚ್ಚು ಅತೀ ಹೆಚ್ಚಾಗಿತ್ತು ಆಗ ಅದನ್ನು ನಾವು ನಮ್ಮದೇ ರೀತಿಯಲ್ಲಿ ಮಾಡಲು ಪ್ರಯತ್ನಿಸುತ್ತಿದ್ದೆವು. ಹಾಗೇ ಅವಳು ನಾನು ಹುಡುಗರ ಜೊತೆ ಸೇರಿ ಆಡಿದ ಮೊದಲ ಆಟ ಚಿನ್ನಿದಾಂಡು ಆಟ, ಮರಕೋತಿ, ಗೋಲಿ ಆಟ ಲಗೋರಿ, ಕಬ್ಬಡಿ, ಖೋ ಖೋ ಮುಂತಾದವುಗಳು ಇವನ್ನೆಲ್ಲಾ ನವು ರಜಾ ದಿನಗಳಲ್ಲಿ ಆಡುತ್ತಿದ್ದೆವು ಗೀತಾ ಸ್ವಲ್ಪ ಹಠವಾದಿ, ಸ್ವಲ್ಪ ಮುಂಗೋಪಿ ಆದರೆ ಅಷ್ಟೇ ಜಾಣೆ ಮತ್ತು ಬುದ್ಧಿವಂತಳು ಕುಡ ಅವಳಿಗೆ ಅನಿಸಿದ್ದನ್ನು ಅವಳು ಮಾಡುತ್ತಿದ್ದಳು ಯಾರಿಗೂ ಹೆದುರುತ್ತಿರಲಿಲ್ಲ ಅವಳಿಗೆ ನಾನು ಎಂದರೆ ಬಹಳ ಇಷ್ಟ ಮತ್ತೆ ನನ್ನ ದುಃಖದಲ್ಲಿ ಭಾಗಿಯಾಗುತ್ತಿದ್ದಳು. ಅಷ್ಟೆ ಅಲ್ಲಾ ಅವಳು ನಾನು ಧೈರ್ಯಗೆಟ್ಟಾಗ ಮತ್ತೆ ನನ್ನ ಆತ್ಮವಿಶ್ವಾಸ ಕುಗ್ಗಿದಾಗ ನನಗೆ ಧೈರ್ಯಕೊಟ್ಟು ತಾಯಿಯಂತೆ ಸಲಹುತ್ತಿದ್ದಳು. ನನಗೆ ಅವಳು ಎರಡನೇ ತಾಯಿ ಎಂದು ಹೇಳಿದರು ಆಶ್ಚರ್ಯವೇನಿಲ್ಲ. ನಾನು ಅತ್ತಾಗ ನನ್ನ ಕಣ್ಣೀರು ಒರೆಸಿ ನಾನು ನಿನ್ನ ಜೊತೆ ಸದಾ ಇರುತ್ತೇನೆ ಎಂದು ಯಾವಾಗಲೂ ಹೇಳುತ್ತಿದ್ದಳು. ನಾನನು ಓದಿನಲ್ಲಿ ಹಿಂದೆ ಬಿದ್ದಾಗ ನನಗೆ ಆತ್ಮವಿಶ್ವಾಸ ತುಂಬಿ ಎಚ್ಚರಿಸುತ್ತಿದ್ದಳು. ಅವಳು ಮಹಾರಾಣಿ ಪ್ರೌಢಶಲೆಗೆ ಸೇರಿದಳು ನಾನು ಸರ್ವೋದಯ ಪ್ರೌಢ ಶಾಲೆಗೆ ಸೇರಿದೆವು. ಹೀಗೆ ನಾವು ದಿನ ಶಾಲೆ ಮುಗಿಸಿಕೊಂಡು ಬಂದು ಇಬ್ಬರೂ ನಮ್ಮ ಮನೆಯ ಕಟ್ಟೆಯ ಮೇಲೆ ಕೂತು ಇಬ್ಬರೂ ನಮ್ಮ ನಮ್ಮ ಶಲೆಯ ಬಗ್ಗೆ ಮಾತನಾಡುತ್ತಿದ್ದೆವವು. ನಂತರ ನಮ್ಮ ಅಭಿರುಚಿ, ನಮ್ಮ ಯೋಚನಾಶಕ್ತಿ ಎಲ್ಲಾ ಬದಲಾಗಿದ್ದವು. ಇಷ್ಟೆಲ್ಲಾ ಆಗುತ್ತಿದ್ದಂತೆ ನಮಗೆ ಹತ್ತನೇ ತರಗತಿಯ ಪರೀಕ್ಷೆ ಆರಂಬವಾಯಿತು ಪರೀಕ್ಷೆಯಲ್ಲಿ ಚೆನ್ನಾಗಿ ಬರೆದೆವು ಆಮೇಲೆ ಬಂದದ್ದು ಕರಾಳದಿನ ಅವೇ ಗೀತಾಳು ಕಾಯಿಲೆಗೆ ಬಿದ್ದು ಆಸ್ಪತ್ರೆಗೆ ಸೇರಿದ್ದಳು ಶಿವಮೊಗ್ಗದ ಬಸವೇಶ್ವರ ಆಸ್ಪತ್ರೆಯಿಂದ ಮಂಗಳೂರಿನ ಆಸ್ಪತ್ರೆಗೆ ರವಾನೆ ಮಡಲಾಯಿತು. ಆಮೇಲೆ ಗೊತ್ತಾಯಿತು ಅವಳಿಗೆ ಕರುಳು ಕ್ಯಾನ್ಸರ್ ಎಂದು ಅಲ್ಲಿ 10ದಿನ ಅನ್ನ ನೀರು ಏನು ಇಲ್ಲದೇ ಇದ್ದಳು ಅವಳ ಸ್ಥಿತಿ ಅಂತಿಮ ಘಟ್ಟಕ್ಕೆ ತಲುಪಿತು ಅಂತಹ ಸಮಯದಲ್ಲಿ ಬೇಡಿದ ದೇವರಿಲ್ಲ ಮಾಡಿಸಿದ ಪೂಜೆ ಇಲ್ಲ ಆದರೂ ಒಂದು ದಿನ ಮನೆಗೆ ಹೇಣವಾಗಿ ಬಂದಳು ಅದನ್ನು ತಿಳಿದು ನನಗೆ ನನ್ನ ದೇಹವೇ ಕೊನೆಯದಂತಾಯಿತು ಉಸಿರೆ ನಿಂತಾಯಿತು ಒಂದು ಕ್ಷಣ ನಾವಿಬ್ಬರೂ ಕಂಡ ಕನಸೆಲ್ಲಾ ಕಣ್ಣ ಮುಂದೆ ಬಂದು ಬಿಟ್ಟಿತು ಅವಳ ಶವವನ್ನು ಕಂಡು ಈಗಲೇ ಈ ಜೀವನ ಮುಗಿದು ಬೀಡಬಾರದ ಅನಿಸಿತು. ಮುಂದೆ ನನ್ನ ಸ್ಥಿತಿಯೇನು ನನಗೆ ಇನ್ನು ಯಾರು ದಿಕ್ಕು ಎಂದು ಕಂಗಲಾಗಿ ಬಿಟ್ಟೆ ಮನುಯನಿಗೆ ಆಸೆ ಇರಬೇಕು ಆದರೆ ದುರಾಸೆ ಇರಬಾರದು ಏಕೆಂದರೆ ಅವಳ ಹತ್ತಿರ ಎಲ್ಲಾ ಇತ್ತು ಆದರೆ ಸತ್ತಾಗ ಅವಳು ತೆಗೆದುಕೊಂಡು ಹೋಗಿದ್ದು ಒಂದು ಮೂಗು ಬೊಟ್ಟು ಮತ್ತು ನಮ್ಮೆಲ್ಲರ ಪ್ರೀತಿ ಅದು ಅವಳ ಸಾವಿಗೆ ಸೇರಿದ ಜನರು ಹೇಳುತ್ತದೆ ಅವಳ ಸಂಪಾದನೆ ಅಂತ. ಕೆಲವು ದಿನಗಳ ನಂತರ ಅವಳು ಅವಳ ದೇಹ ನಮ್ಮಿಂದ ದೂರವಿದೇ ಅಷ್ಟೆ ಅವಳ ನೆನಪು ನಾವು ಸಾಯುವವರೆಗೆ ಇರುತ್ತದೆ ಎಂದು ಗೊತ್ತಾಯಿತು. ಗೀತಾ ನಾನು ಮುಂದಿನ ಭವಿಷ್ಯದ ಬಗ್ಗೆ ಹಲವಾರು ಕನಸು ಕಂಡಿದ್ದೆವು. ಅವಳಿಗೆ ಓದುವುದು ಮತ್ತು ಅಡುಗೆ ಮಾಡುವುದು ಎಂದರೆ ಬಹಳ ಇಷ್ಟ ಅವಳು ಓದಿ ಡಾಕ್ಟರ್ ಆಗಬೇಕೆಂದು ಅವಳ ಕನಸಾಗಿತ್ತು. ನಾವಿಬ್ಬರೆ ಮದುವೆಯ ಬಗ್ಗೆ ಕನಸು ಕೂಡ ಕಂಡಿದ್ದೇವು. ಅವಳು ಬಾರದ ಲೋಕಕ್ಕೆ ತ್ಯಜಿಸಿದಳು. ನಮಗೆ ಅವಳು ನಮ್ಮ ಜೊತೆಯಲ್ಲೇ ಇಲ್ಲೇ ಎಲ್ಲೇ ಸುತ್ತ ಮುತ್ತಲು ಇದಾಳೆ ಎಂಬ ಭಾವನೆ ಕಾಡುತ್ತದೆ. ಅವಳು ಹೋದ ಎಂಟು ದಿನಗಳಲ್ಲಿ ನಮ್ಮ ಎಸ್.ಎಸ್.ಎಲ್.ಸಿ ಪರೀಕ್ಷೆ ರಿಸಲ್ಟ್ ಬಂದಿತು I[st] ಕ್ಲಾಸ್‌ನಲ್ಲಿ ಉತ್ತೀರ್ಣವಾಗಿ ಪಾಸ್ ಆಗಿದ್ದಳು ಅದನ್ನು ಕಂಡು ಅವರ ಮನೆಯವರಿಗೆ ಸಂತೋಷ ಒಂದು ಕಡೆ ದುಃಖ ಇನ್ನೊಂದು ಕಡೆ ಎಂದು ಹೇಳಬಹುದು ನಂತರ ನಾನು ಒಂದು ಕಡೆ ಜೀವನದಲ್ಲಿ ಒಂಟಿ ಎನ್ನುವ ಭಾವನೆ ನನಗೆ ಸ್ನೇಹಿತರು ಹೆಚ್ಚಿದರು ಗೀತಾ ಇದ್ದ ಹಾಗೆ ಇರುತ್ತಿರಲಿಲ್ಲ. ಆಮೇಲೆ ಹೊರಗಡೆ ಹೋಗಿ ಸಮಾರಂಭದಲ್ಲಿ ಭಾಗವಹಿಸುವುದು ಕಡಿಮೆ ಮಾಡಿದೆ ಮತ್ತು ದೇವಸ್ಥಾನಕ್ಕೆ ಹೋಗುವುದು ಕಡಿಮೆ ಮಾಡಿದೆ ಹೆಚ್ಚು ಮನೆಯಲ್ಲಿ ಇರಲು ಪ್ರಾರಂಭಿಸಿದೆ. ನಂತರ ಪ್ರಥಮ ಪಿ.ಯು.ಸಿಗೆ ಸೇರಿದೆ ಅಲ್ಲಿ ಹೊಸ ಸ್ನೇಹಿತರು ಸಿಕ್ಕರೂ ಆದರೂ ಅವರಲ್ಲೂ

ಗೀತಾಳನ್ನು ಕಾಣಲು ಪ್ರಾರಂಭಿಸಿದೆ ಆಗ ನನಗೆ ಬೇಕಾದುದು ಹೊಸ ಪರಿಚಯ. ಹೊಸ ಭಾವನೆ. ಹೊಸ ಪ್ರೀತಿ. ಹೊಸ [illegible] ಆದರೆ ಕ್ರಮೇಣ ತುಂಬಾ ಆತ್ಮೀಯತತೆ ಬೆಳೆಯಲಾರಂಭಿಸಿತು ಆಗ ನನಗೆ ನನ್ನ ಗೀತಾ ವಾಪಸ್ ಸಿಕ್ಕಳೆಂಬ ಅನುಭವವಾಯಿತು. [illegible] ಅವಳ ಜೊತೆ ಎಲ್ಲಾ ನನ್ನ ವಿಷಯಗಳು ಪ್ರೀತಿ ದುಃಖ ಕೋಪ ಎಲ್ಲವನ್ನು ಹಂಚಿಕೊಳ್ಳುತ್ತಿದ್ದೆ ಮತ್ತು ಅವಳು ಕೂಡ ನನ್ನ ಜೊತೆ [illegible] ಎಲ್ಲವನ್ನು ಹಂಚಿಕೊಳ್ಳುತ್ತಿದ್ದಳು. ನನ್ನ ಅವಳ ಸ್ನೇಹ ತುಂಬಾ ಆತ್ಮೀಯವಾಗ ತೊಡಗಿತು. ಹಾಗೇ ಅವಳ ಮತ್ತೆ ನನ್ನ ಮನ[illegible] ಪರಿಸ್ಥಿತಿ ಒಂದೇ ತರದಲ್ಲಿತ್ತು. ನಾವು ಓದಿನಲ್ಲಿ ಒಂದೇ ತರಹದಲ್ಲಿ ಅಂಕಗಳನ್ನು ಗಳಿಸುತ್ತಿದ್ದೆವು. ಪಿ.ಯು.ಸಿ ಯಿಂದ ಪದವಿ [illegible] ಕಾಲೇಜಿಗೂ ಒಟ್ಟಿಗೆ ಒಂದೇ ಕಡೆ ಸೇರಿದೆವು. ನನಗೆ ಅವಳ ಮೇಲೆ ಅಪಾರ ಪ್ರೀತಿ ಮತ್ತು ವಿಶ್ವಾಸ ಅಷ್ಟೆ ಹೊಟ್ಟೆಕಿಚ್ಚು ಸ್ವಲ್ಪ ಬೇರೆಯವ[illegible] ಮೇಲೆ ಅವಳ ಗಮನ ಹೋದರು ನನಗೆ ಹೊಟ್ಟೆಕಿಚ್ಚು ಆಗುತ್ತಿತ್ತು ಬಿಂದುವಿಗೆ ನನಗೆ ಏನು ಬೇಕು ಏನು ಬೇಡ ಎಲ್ಲವು [illegible] ಪೂರ್ವಕ್ಕೆ ಬಂದಾಗ ಅಲ್ಲಿ ತುಂಬಾ ಚೆನ್ನಾಗಿ ತಿಳಿದಿತ್ತು ಪದವಿ ಪೂರ್ವಕ್ಕೆ ಬಂದಾಗ ಅಲ್ಲಿ ತುಂಬಾ ಜನ ಆತ್ಮೀಯ ಸ್ನೇಹಿತೆಯರು ಅವರಲ್ಲಿ ಬಿಂದು. ಕಾವ್ಯ. ರಕ್ಷಿತಾ. ಭಾರತಿ. ವರ್ಷಿಣಿ. ಕೃತಿಕಾ. ನಿಖಿತಾ ಎಲ್ಲರೂ ತುಂಬಾ ಆತ್ಮೀಯರು ಆಗಿದ್ದಾರೆ. ಈಗ ನಮ್ಮ ಪದವಿ ಕಾಲೇಜು ಮುಗಿಯುತ್ತಿದ್ದ ಎಂಬ ಬೇಜಾರು ಆತ್ಮೀಯರನ್ನು ಬಿಟ್ಟುಹೋಗಲು ದುಃಖ ಆಗುತ್ತಿದೆ. ಬಿಂದು ಸ್ನೇಹದ ಋಣ ನನ್ನ ಮೇಲಿದೆ ಅವಳ ಪ್ರೀತಿ ಅಪಾರವಾದ ಮತ್ತು ಅಮೂಲ್ಯವಾದುದು ಅದಕ್ಕೆ ನಾನು ಬೆಲೆ ಕಟ್ಟಲು ಸಾಧ್ಯವಿಲ್ಲ ಆ ಋಣದ ಭಾರ [illegible] ಮೇಲೆ ಕೊಡಲು ಸಾಧ್ಯ ಎಂದು ಹೇಳಬಹುದು. ಅವಳು ನನಗೆ ಮಾಡಿದ ಸಹಾಯ ಮತ್ತು ನನ್ನ ಮೇಲೆ ಇಟ್ಟ ನಂಬಿಕೆ ನನಗೆ ತೋರಿಸಿದ ಪ್ರೀತಿ ಇವೆಲ್ಲದಕ್ಕೆ ನಾನು ಚಿರಋಣಿ ಎಂದು ಹೇಳುತ್ತೇನೆ. ಇವರಿಬ್ಬರು ನನ್ನ ಜೀವನದಲ್ಲಿ ನನ್ನ ಪ್ರೀತಿಯ ಸ್ನೇಹಿತೆಯರು ಎಂದು ಹೇಳಬಹುದು.

*******

## ಸ್ವಾಮಿ ವಿವೇಕಾನಂದರ ಜೀವನ

**ರಶ್ಮಿ ಕೆ. ಹೆಚ್**. ತೃತೀಯ ಬಿ.ಎ. (ಹೆಚ್.ಇ.ಪಿ.)

**ಸ್ವಾಮಿ ವಿವೇಕಾನಂದ:** ನರೇಂದ್ರನಾಥ ದತ್ತ ಜನವರಿ 1863 12ನೇ ತಾರೀಖಿನಂದು ಕಲ್ಕತ್ತದಲ್ಲಿ ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿ ದಂಪತಿಗಳಿಗೆ ಜನಿಸಿದ ನರೇಂದನಾಥ ದತ್ತ ಮುಂದೆ ಸ್ವಾಮಿ ವಿವೇಕಾನಂದ ಎಂಬ ನಾಮಧೇಯದಿಂದ ಜಗದ್ವಿಖ್ಯಾತರಾದರು. 1902 ಜುಲೈ 4 ರಂದು ದೈಹಿಕ ಶರೀರವನ್ನು ತೊರೆದ ಸ್ವಾಮಿ ವಿವೇಕಾನಂದರು ಅಂದು ಹಚ್ಚಿದ ವೇದಾಂತದ ದೀವಿಗೆಯು ಇಂದೂ ಕೂಡ ಜಗತ್ತಿಗೆ ಬೆಳಕು ಚೆಲ್ಲುತ್ತದೆ. ತನ್ನ ಗುರು ಶ್ರೀ ರಾಮಕೃಷ್ಣರ ಸಂದೇಶಗಳಿಗೆ ದನಿಯಾದ ವಿವೇಕಾನಂದರು ಶತಮಾನದ ನಂತರವೂ ತರುಣರಿಗೆ ಸ್ಫೂರ್ತಿಯ ಚಿಲುಮೆ.

**ಸ್ವಾಮಿ ವಿವೇಕಾನಂದ ಮತ್ತು ಶ್ರೀ ರಾಮಕೃಷ್ಣರ ಸಂದೇಶ:**

ಗುರುಗಳಲ್ಲಿ ಅನೇಕರು ತಮ್ಮಷ್ಟಕ್ಕೇ ಪ್ರಸಿದ್ಧಿಗೆ ಬರಲಾರರು ಜಗತ್ತಿನ ಆಗು ಹೋಗುಗಳ ಕುರಿತಾಗಿ ಅಷ್ಟಾಗಿ ಪ್ರಾಜ್ಞರಲ್ಲದ ಅಂತಹ ಗುರುಗಳ ಸಂದೇಶಗಳನ್ನು ಜನರತ್ತ ಕೊಂಡೊಯ್ಯಲು ಸಮರ್ಥ ಶಿಷ್ಯರ ಅವಶ್ಯಕತೆಯಿರುತ್ತದೆ. ಇಂದು ಎಲ್ಲರೂ ಶ್ರೀ ರಾಮಕೃಷ್ಣರ ಕುರಿತು ಮಾತನಾಡುತ್ತಾರೆ. ರಾಮಕೃಷ್ಣರದ್ದು ಸ್ಫಟಿಕದಷ್ಟು ಸ್ಫುಟವಾದ ಜ್ಞಾನ ಬಹುಶಃ ವಿವೇಕಾನಂದರ ಆಗಮನವಾಗದಿದ್ದರೆ ಅವರೆಲ್ಲೊ ವನಕುಸುಮದಂತೆ ಅಜ್ಞಾತವಾಗಿ ಉಳಿದು ಬಿಡುತ್ತಿದ್ದರೇನೋ ಅಸಂಖ್ಯಾತ ಹೂವುಗಳರಳುತ್ತವೆ. ಎಷ್ಟು ತಾನೇ ಗುರುತಿಸಲ್ಪಡುತ್ತವೆ.

**ಸರ್ವಧರ್ಮ ಸಮ್ಮೇಳನದಲ್ಲಿ ಮಡಿದ ಭಾಷಣ:**

ಸರ್ವ ಧರ್ಮ ಸಮ್ಮೇಳನದ ಭಾಷಣದಲ್ಲಿ ಪ್ರತಿಪಾದಿಸಿದ ಹಿಂದೂ ಧರ್ಮ ಸಿದ್ಧಾಂತಗಳು ಮಿಂಚಿನಂತೆ ಅಲ್ಲಿನ ಜನರನ್ನು ಆಕರ್ಷಿಸಿದವು. ಅವರ ಭಾಷಣದ ಮೊದಲ ಮಾತು ಅಮೇರಿಕದ ಸಹೋದರ ಸಹೋದರಿಯರೇ ಎಂಬುದು ಚಿರಸ್ಮರಣೀಯವಾಗಿದೆ. ವಿಶ್ವದ ಧರ್ಮಗಳ ಸಂಸತ್ತು ಸೆಪ್ಟೆಂಬರ್ 11, 1893 ರಂದು ವಿಶ್ವದ ಕೊಲಂಬಿಯನ್ ಪ್ರದರ್ಶನದ ಭಾಗವಾಗಿ ಈಗ ಚಿಕ್ಯಾಗೋದ ಆರ್ಟ್ ಇನ್ಸ್ಟಿಟ್ಯೂಟ್‌ನ ಶಾಶ್ವತ ಸ್ಮಾರಕ ಕಲಾಭವನದಲ್ಲಿ ವಿಶ್ವದ ಕಾಂಗ್ರೆಸ್ ಸಹಾಯಕ ಕಟ್ಟಡ ಎಂದು ಗುರುತಿಸಲ್ಪಟ್ಟಿದೆ. ವಿವೇಕಾನಂದರು ಆ ದಿನ ತಮ್ಮ ಮೊದಲ ಉಪನ್ಯಾಸವನ್ನು ನೀಡಿದರು ಇವರ ಸರದಿಯನ್ನು ತುಂಬಾ ಮುಂದೂಡುವಿಕೆಯ ನಂತರ ಮಧ್ಯಾಹ್ನದ ಹೊತ್ತಿಗೆ ಇವರ ಸರದಿ ಬಂದಿತು ಆರಂಭದಲ್ಲಿ ಅವರು ಆತಂಕಕ್ಕೊಳಗಾಗಿದ್ದರೂ ಅವರು ಹಿಂದೂ ವಿದ್ಯಾದೇವತೆಯಾದ ಸರಸ್ವತಿಗೆ ನಮಸ್ಕರಿಸಿದರು ಮತ್ತು ಅವರು ತಮ್ಮ ದೇಹದಲ್ಲಿ ಹೊಸ ಶಕ್ತಿಯನ್ನು ಪಡೆದುಕೊಂಡಿರುವುದಾಗಿ ಭಾವಿಸಿದರು ಯಾರೋ ಅಥವಾ ಇನ್ನೊಬ್ಬರು ತಮ್ಮ ದೇಹವನ್ನು ಆಕ್ರಮಿಸಿಕೊಂಡಿದ್ದಾರೆ. ಎಂದು ಅವರು ಭಾವಿಸಿದರು ಅದು "ಎ ಸ್ಟೋರಿ ಆಫ್ ಇಂಡಿಯಾ"

ಋಷಿಯ ಪ್ರತಿಧ್ವನಿ ರಾಮಕೃಷ್ಣರ ಧ್ವನಿ ಪುನರುತ್ಥಾನಗೊಂಡ ಸಮಯದ ಚೈತನ್ಯದ ಮುಖವಾಣಿ ನಂತರ 'ಸಿಸ್ಟರ್ಸ್ ಅಂಡ್ ಬ್ರದರ್ಸ್ ಆಫ್ ಅಮೇರಿಕಾ' ಎಂದು ಸಂಬೋಧಿಸಿ ಮಾತು ಆರಂಭಿಸಿದರು. ಈ ಮಾತುಗಳಿಗೆ ಅವರು ಅಲ್ಲಿದ್ದ ಏಳು ಸಾವಿರ ಜನಸಮೂಹದಿಂದ ನಿಂತು ಚಪ್ಪಾಳೆಯ ಮೆಚ್ಚುಗೆ ಗೌರವ ಪಡೆದರು ಅದು ಎರಡು ನಿಮಿಷಗಳ ಕಾಲ ನಡೆಯಿತು. ಮೌನವನ್ನು ಪುನಃ ಸ್ಥಾಪಿಸಿದಾಗ ಅವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ವಿಶ್ವದ ಅತ್ಯಂತ ಪ್ರಾಚೀನ ವೈದಿಕ ಕ್ರಮ ಅನುಸರಿಸಿದ ಸನ್ಯಾಸಿಗಳ ಜಗತ್ತಿಗೆ ಸಹಿಷ್ಣತೆ ಮತ್ತು ಸಾರ್ವತ್ರಿಕ ಸ್ವೀಕಾರ ಎರಡನ್ನೂ ಕಲಿಸಿದ ಧರ್ಮದ ಪರವಾಗಿ ಅವರು ಜಗತ್ತಿನ ರಾಷ್ಟ್ರಗಳನ್ನು ಅಭಿನಂದಿಸಿದರು.

**ರಾಮಕೃಷ್ಣ ಮಠದ ಸ್ಥಾಪನೆ :**

ರಾಮಕೃಷ್ಣರ ಮರಣ ನಂತರ ಅವರ ಮಠಕ್ಕೆ ಬರುವ ಆದಾಯವು ಕಡಿಮೆಯಾಯಿತು ಇದರಿಂದಾಗಿ ಅವರು ಬೇರೆ ಜಾಗವನು ಹುಡುಕಬೇಕಾಯಿತು. ಬಾರ ನಗರದಲ್ಲಿ ನರೇಂದ್ರರು ಶಿಥಿಲವಾದ ಮನೆಯನ್ನು ಖರೀದಿಸಿ ಆ ಮನೆಯನ್ನು ಅವರು ಮಠವನ್ನಾಗಿ ಪರಿವರ್ತಿಸಲು ಆಲೋಚಿಸಿದರು ಆ ಮನೆಯ ಬಾಡಿಗೆಯನ್ನು ಭಿಕ್ಷಾಟನೆ ಮೂಲಕ ತುಂಬುತ್ತಿದ್ದರು. ಈ ಮನೆಯ ರಾಮಕೃಷ್ಣರ ಮಠದ ಮೊದಲ ಶಾಖೆಯಾಯಿತು. ಅಲ್ಲಿ ನರೇಂದ್ರ ಮತ್ತು ಅವರ ಶಿಷ್ಯರು ಹೆಚ್ಚಿನ ಸಮಯವನ್ನು ಧ್ಯಾನ ಮತ್ತು ಧಾರ್ಮಿಕ ವಿಷಯಗಳನ್ನು ಅಭ್ಯಾಸ ಮಾಡುವಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರು ಮುಂದಿನ ಆ ದಿನಗಳನ್ನು ನೆನೆಸುತ್ತಾ ಪ್ರತಿದಿನ ಬೆಳಗ್ಗೆ 3 ರಿಂದ ರಾತ್ರಿಯವರೆಗೂ ನಾವು ಧ್ಯಾನದಲ್ಲೇ ಕಳೆಯುತ್ತಿದ್ದೆವು.

ಜಗತ್ತಿನ ಪರಿವೆಯೆ ಇಲ್ಲದೆ ನಮ್ಮ ಸಾಧನಾ ಪ್ರಪಂಚದಲ್ಲಿ ಮುಳುಗಿದ್ದೆವು 1881ನೇ ಇಸವಿಯಲ್ಲಿ ನರೇಂದ್ರರು ವೈಷ್ಣವ ಚರಣ್ ಭಾಸ್ಕರ್‌ರವರ ಜೊತೆಗೆ ಬಂಗಾಳಿ ಭಾಷೆಯ ಕವಿತೆಗಳನ್ನೊಳಗೊಂಡ 'ಸಂಗೀತಾ ಕಲ್ಪತರು' ಎಂಬ ಪುಸ್ತಕವನ್ನು ಸಂಗ್ರಹಿಸಿದರು. ಆದರೆ ಹಲವು ಸಮಸ್ಯೆಗಳಿಂದ ಅದನ್ನು ಪ್ರಕಟಿಸಲಾಗಲಿಲ್ಲ.

**ವಿವೇಕಾನಂದರ ಭಾರತ ಪರ್ಯಟನೆ :**

1888 ನರೇಂದ್ರರು ಭಾರತದ ಪರ್ಯಟನೆಗೆ ಹೊರಟರು ಅವರು ಪರ್ಯಟನೆಗೆ ಹೋಗುವಾಗ ಅವರ ಜೊತೆಗೆ ಕಮಂಡಲ ದಂಡ ಮತ್ತು ಅವರಿಗೆ ಪ್ರೀಯವಾದ 'ಭಗವತ್ ಗೀತೆ ಹಾಗೂ ದಿ ಇಮಿಟೆಷನ್ ಆಫ್ ಕ್ರೈಸ್ಟ್' ಎಂಬ ಎರಡು ಪುಸ್ತಕಗಳನ್ನು ತಮ್ಮ ಜೊತೆಗೆ ಒಯ್ಯುತಿದ್ದರು ನರೇಂದ್ರು ಸತತವಾಗಿ ಐದು ವರ್ಷಗಳ ಕಾಲ ಭಾರತವನ್ನು ಸಂಚರಿಸಿದರು.

**ಉತ್ತರ ಭಾರತ**

1888 ರಲ್ಲಿ ಗೌತಮ ಬುದ್ದ ಮತ್ತು ಆದಿ ಶಂಕರಾಚಾರ್ಯರು ಧರ್ಮ ಪ್ರಚಾರ ಮಾಡಿದ ವಾರಣಾಸಿಗೆ ಭೇಟಿ ನೀಡಿದರು. ಅಲ್ಲಿ ಅವರು ಬಂಗಾಳ ಬರಹಗಾರ ಭೂದೇವ ಮುಖ್ಯೋಪಾಧ್ಯಾಯ ಮತ್ತು ಹೀಮದೂ ಸಂತ ತ್ರೈಲಂಗರನ್ನು ಭೇಟಿ ಮಾಡಿದರು. ಭೂದೇವ ಮುಖ್ಯೋಪಾಧ್ಯಾಯರು ಇಂತಹ ದೂರದೃಷ್ಟಿ ಮತ್ತು ವಿಚಾರವಾದವನ್ನು ಇಷ್ಟು ಹಿರಿಯ ಪ್ರಾಯದಲ್ಲಿ ಪಡೆದುಕೊಂಡು ನೀನು ಮುಂದೊಂದು ದಿನ ದೊಡ್ಡ ವ್ಯಕ್ತಿಯಾಗುವೇ ಎಂದು ಪ್ರಶಂಶಿಸಿದರು ನಂತರ ಸಂಸ್ಕೃತ ಮತ್ತು ವೈದಿಕ ವಿದ್ವಾಂಸರಾದ ಬಾಬು ಪರಮದಾಸ್ಮಿತ್ರ ಅವರನ್ನು ಭೇಟಿ ಮಾಡಿದರು ನಂತರ ಅವರು ಅಯೋಧ್ಯಾ, ಲಕ್ನೋ ವೃಂದಾವನ ಮತ್ತು ಋಷಿಕೇಶಕ್ಕೆ ಭೇಟಿ ನೀಡಿದರು.

**ಸ್ವಾಮಿ ವಿವೇಕಾನಂದರ ನುಡಿ ಮುತ್ತುಗಳು:**

- ದಿನಕ್ಕೆ ಒಮ್ಮೆಯಾದರೂ ನಿಮ್ಮ ಜೊತೆ ನೀವೆ ಮಾತನಾಡಿಕೊಳ್ಳಿ ಇಲ್ಲವಾದರೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯೊಂದಿಗಿನ ಸಂಭಾಷಣೆ ಕಳೆದು ಕೋಳುತ್ತೀರಿ.
- ಯಾವುದೊಂದು ನಿಮ್ಮನ್ನು ದೈಹಿಕವಾಗಿ ಬೌದ್ಧಿಕವಾಗಿ ಹಾಗೂ ಅಧ್ಯಾತ್ಮಿಕವಾಗಿ ದುರ್ಬಲರನ್ನಾಗಿಸುವುದೋ ಅದನ್ನು ವಿಷವೆಂದು ತಿಳಿದು ತಿರಸ್ಕರಿಸಿ.
- ಹಳೆಯ ಧರ್ಮಗಳು ಹೇಳಿದವು ದೇವರನ್ನು ನಂಬಿದವನು ನಾಸ್ತಿಕ ಎಂದು ಹೊಸ ಧರ್ಮವು ಹೇಳುತ್ತದೆ. ಯಾರಿಗೆ ತನ್ನಲ್ಲಿ ನಂಬಿಕೆಯಿಲ್ಲವೋ ಅವನು ನಾಸ್ತಿಕ ಎಂದು.
- ಯಾರು ಇತರರಿಗಾಗಿ ಬಾಳುತ್ತಾರೋ ಅವರೇ ನಿಜವಾಗಿ ಬಾಳುತ್ತಾರೆ ಉಳಿದವರು ಜೀವನ್ ಮೃತರು.
- ಎಲ್ಲರೂ ಸುಖವಾಗಿರುವ ತನಕ ಯಾರೂ ಸುಖವಾಗಿರಲಾರರು, ಆದ್ದರಿಂದ ನಾವೆಲ್ಲ ಒಂದೇ ಎಂಬ ಐಕ್ಯಮಂತ್ರವನ್ನು ಹೇಳಿರಿ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ ಯಾಂತ್ರಿಕತೆಯ ಪ್ರಾರ್ಥನೆಗಿಂತ ತಾದಾತ್ಮ್ಯತೆಯಿಂದ ಕಾಳ್ಜಿಂಡನ್ನು ಒದಗಿಸುವುದೇ ನಿಮ್ಮನ್ನು ದೈವಿಕತೆಯತ್ತ ಕೊಂಡೊಯ್ಯಬಲ್ಲದು.

**ಅದ್ವೈತ ಸಿದ್ಧಾಂತದ ಉಪಯುಕ್ತತೆ.**

ಕೇವಲ ರಾಮಕೃಷ್ಣ ಪರಮಹಂಸರ ಶಿಷ್ಯರಾಗದೆ ತಮ್ಮದೇ ಶೈಲಿಯಲ್ಲಿ ದೊಡ್ಡ ಚಿಂತಕರಾಗಿ ವಿವೇಕಾನಂದರು ಹೆಸರು ಪಡೆದಿದ್ದಾರೆ. ಅವರ ಮುಖ್ಯ ಕಾಣಿಕೆಯೆಂದರೆ ಕೇವಲ ತಾತ್ವಿಕವಾಗಿ ಉಚ್ಚ ತತ್ತ್ವಜ್ಞಾನ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯುಕ್ತ ಎಂಬುದನ್ನು ತೋರಿಸಿಕೊಟ್ಟರು. ಅವರು ಅಭಿಪ್ರಾಯದಂತೆ ರಾಮಕೃಷ್ಣರಿಂದ ಅವರು ಪಡೆದ ಮುಖ್ಯ ಬೋಧನೆಗಳಲ್ಲಿ ಎಲ್ಲರಲ್ಲಿಯೂ ದೇವರಿದ್ದಾನೆ ಎಂಬುದು. ಇದೇ ಅವರ ಮಂತ್ರವಾಯಿತು. ಮತ್ತು ಅವರ ದರಿದ್ರ ನಾರಾಯಣ ಸೇವೆ ಎಂಬ ತತ್ವಕ್ಕೆ ದಾರಿ ಮಾಡಿಕೊಟ್ಟಿತು. ಈ ತತ್ವದಂತೆ ಬಡ ಜನರ ಸೇವೆಯಲ್ಲಿಯೆ ದೇವರ ಸೇವೆಯನ್ನು ಮಾಡುವ ದಾರಿಯನ್ನು ಅವರು ಪಾಲಿಸಿದರು ಎಲ್ಲರಲ್ಲಿಯೂ ದೇವರಿದ್ದೂ ಎಲ್ಲರೂ ಸಮಾನರೆಂದಾದ ಮೇಲೆ ಕೆಲವರಿಗೆ ಮಾತ್ರ ಏಕೆ ಹೆಚ್ಚು ಬೆಲೆ ಬರಬೇಕು ಎಂಬ ಪ್ರಶ್ನೆ ವಿವೇಕಾನಂದರರದು. ■

********

# ಚಿತ್ರಕಲೆಯ ಮಹತ್ವ

**ಭೀಮ ನಾಯ್ಕ. ಯು.** ತೃತೀಯ ಬಿ.ಎ (ಹೆಚ್.ಇ.ಪಿ.)

ಚಿತ್ರಕಲೆಯು ಒಂದು ಅಸಮಾನ್ಯವಾದ ಕಲೆಯಾಗಿದೆ. ಒಬ್ಬ ಕಲಾವಿದ ತನ್ನ ಸಂಪೂರ್ಣವಾದ ಗಮನವನ್ನು ಕೇಂದ್ರಿಕರಿಸಿದರೆ ಮಾತ್ರ ಅದರಿಂದ ಉತ್ತಮ ಚಿತ್ರ ಮೂಡಿ ಬರುತ್ತದೆ. ಈ ಚಿತ್ರಕಲೆಯಲ್ಲಿ ತಾಳ್ಮೆ ಎಂಬುವುದು ಅತಿ ಮುಖ್ಯವಾದಂತಹ ಅಂಶವನ್ನು ಒಳಗೊಂಡಿದೆ ತಾಳ್ಮೆ ಇದ್ದವನು ಮಾತ್ರ ಉತ್ತಮ ಕಲಾವಿದನಾಗಲು ಶಕ್ತನಾಗುತ್ತಾನೆ.

"ಭಗವಾನ್ ಪರಶುರಾಮ" ಚಿತ್ರಕಲೆಯ ಪಿತಾಮಹನಾಗಿದ್ದಾರೆ. ವಿರ್ಸೆಂಟ್, ಪಬ್ಲೊ ಪಿಕಾಸೋ, ಕ್ಲೂಡ್ ಮೊನೆಟ್ ಮುಂತಾದವರು ಪ್ರಮುಖ ಕಲಾವಿದರಾಗಿದ್ದಾರೆ. ಭಾರತದ ಕಲಾವಿದನಾದ 'ರಾಜ ರವಿವರ್ಮ' ಇತಿಹಾಸದಲ್ಲಿ ಪ್ರಸಿದ್ಧ ಕಲಾವಿದನೆಂಬ ಹೆಸರಿಗೆ ಖ್ಯಾತನಾಗಿದ್ದಾರೆ. ಹಾಗೆಯೇ ಅಮರ ಶಿಲ್ಪಿ ಜಕಣಚಾರಿ, ಗುಂಡನ್ ಅನಿವರಿತಾಚಾರಿ, ಜಾಕೀರ್ ಅಪೂರ್ತಂ ಇವರುಗಳು ಸಹ ಕರ್ನಾಟಕದ ಸುಪ್ರಸಿದ್ಧ ಕಲಾವಿದರೆಂಬ ಖ್ಯಾತೆಗೆ ಹೆಸರಾಗಿದ್ದಾರೆ.

ಚಿತ್ರಕಲೆಗೆ ದೈಹಿಕ ಶ್ರಮದ ಬದಲಿಗೆ ಮಾನಸಿಕ ಶ್ರಮವನ್ನು ಸಂಪೂರ್ಣವಾಗಿ ವಿನಿಯೋಗಿಸುತ್ತಾರೆ. ಅಲ್ಲದೆ ಇದಕ್ಕೆ ಕೇವಲ ಮಾನಸಿಕ ಶ್ರಮ ಮಾತ್ರವಲ್ಲದೆ "ತಾಳ್ಮೆ" ಎಂಬ ಮಹಾನ್ ಸಾಧನವನ್ನು ಅಳವಡಿಸಿಕೊಳ್ಳಲೇ ಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಯಾವುದೇ ರೀತಿಯ ಭಾವಚಿತ್ರ (ಫೋಟೋಗ್ರಫಿ) ಯಂತ್ರಣ ಇರಲಿಲ್ಲ. ಇದರಿಂದಾಗಿ ರಾಜ ಮಹಾರಾಜರುಗಳು ತಮ್ಮ ಪಾರಂಪರ್ಯದ ರಾಜರುಗಳ ಭಾವ ಚಿತ್ರವನ್ನು ಚಿತ್ರಿಸುತ್ತಿದ್ದರು. ಇದರಿಂದಾಗಿ ಅವನ ಕಲೆಗೆ ಮೆಚ್ಚಿ ರಾಜ ಮಹಾರಾಜರು ಕಲಾವಿದನಿಗೆ ಬಹುಮಾನವನ್ನು ನೀಡುತ್ತಿದ್ದರು. ಒಬ್ಬ ವ್ಯಕ್ತಿ ವಿಕಸನಕ್ಕೆ ಚಿತ್ರಕಲೆಯು ಪ್ರಮುಖ ಅಂಶವಾಗಿದ ಇದರಲ್ಲಿ ವಿಧವಿಧವಾದ ಚಿತ್ರವನ್ನು ಜಪಿಸುವ ಸಾಧನಗಳಿವೆ. ಬಣ್ಣ ತುಂಬುವುದು. ಕತ್ತಲೆಯ ಚಿತ್ರ ಮುಂತಾದವು. ಸಾಮಾನ್ಯವಾಗಿ ಚಿತ್ರಕಲೆ ಎಂಬುದು ಮಕ್ಕಳಿಗೆ ಆಕರ್ಷಣಿಯ ಹಾಗೂ ಮನಸೆಳೆಯುವ ಅಂಶವಾಗಿದೆ.

ಕಲಾ ಪ್ರಕಾರದಲ್ಲಿ ಒಂದಾದ ಚಿತ್ರಕಲೆಯು ಬರೋಬ್ಬರಿ 40 ಸಾವಿರ ವರ್ಷಗಳ ಇತಿಹಾಸವಿದೆ. ಪ್ರಪಂಚದ ಚಿತ್ರಕಲೆಯನ್ನು ಪ್ರಮುಖವಾಗಿ ಎರಡು ವಿಭಾಗವಾಗಿ ಮಾಡಲಾಗಿದೆ. ಪಾಶ್ಚಿಮಾತ್ಯ ಚಿತ್ರಕಲೆ (ವೆಸ್ಟರ್ನ್ ಪೆಂಟಿಂಗ್) ಮತ್ತು ರಾಷ್ಟ್ರಗಳ ಚಿತ್ರಕಲೆ (ಈಸ್ಟರ್ನ್ ಪೇಂಟಿಂಗ್) ಪ್ರಾಚೀನ ಶಿಲಾಯುಗದಲ್ಲಿ ನೆಲೆಸಿದ್ದ ಮಾನವರು ಚಿತ್ರ ಬಿಡಿಸುವಲ್ಲಿ ಪರಿಣಿತ ಸಾಧಿಸಿದ್ದರು. ಫ್ರಾನ್ಸ್‌ನಲ್ಲಿ ಪತ್ತೆಯಾಗಿರುವ ಚವಹ್ ಗುಹೆಗಳ ಗೋಡೆಯಲ್ಲಿ ಅಂದಿನ ಮಾನವರು ಬಿಡಿಸಿದ್ದ ಪ್ರಾಣಿಗಳ ಚಿತ್ರ ಕಂಡು ಬಂದಿದೆ. ಈ ಗುಹೆಗೆ 30 ಸಾವಿರ ವರ್ಷಗಳ ಇತಿಹಾಸವಿದೆಯೆಂದು ತಿಳಿದುಬಂದಿದೆ.

ಚಿತ್ರಕಲೆಯು ನಮ್ಮ ಇತಿಹಾಸ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತದೆ ಎಂದು ಹಿರಿಯ ಕಲಾವಿದರಾದ ಡಾ. ವಿಜಯ ಹಾಗರ ಗುಂಡರವರು ಹೇಳಿದ್ದಾರೆ. ಈ ಚಿತ್ರಕಲೆಯು ಎಲ್ಲರಿಗೂ ಬರಲು ಸಾಧ್ಯವಿಲ್ಲ.

"ಬಲ್ಲವನೆ ಬಲ್ಲ ಬೆಲ್ಲದ ರುಚಿಯು ಎನ್ನುವ ಹಾಗೆ ಚಿತ್ರ ಕಲೆಯ ಸವಿಯು ಸವಿದವನಿಗೆ ಗೊತ್ತು" ಹೀಗೆ ಯಾವುದೇ ಒಂದು ಸಣ್ಣ ಚಿತ್ರವನ್ನು ಬಿಡಿಸಲು ಅದಕ್ಕೆ ಅನುಭವ ಹಾಗೂ ಕಲೆಗಳೆರಡು ಪ್ರಮುಖವಾಗಿದೆ. ಇಲ್ಲಿ ತನ್ನೆಲ್ಲ ಸಮಯವನ್ನು ಮುಡುಪಾಗಿಟ್ಟು ಚಿತ್ರವನ್ನು ಸೃಷ್ಟಿಸುತ್ತಾನೆ. ಇದರಿಂದ ಒಬ್ಬ ಕಲಾವಿದನಲ್ಲಿ ಎಲ್ಲಿಲ್ಲದ ಮಹಾನ್ ಆತ್ಮಸ್ಥೈರ್ಯ ವಿಶ್ವಾಸವನ್ನು ವೃದ್ಧಿಸುತ್ತದೆ.

ಈ ಕಲೆಯನ್ನು ಸಂಪೂರ್ಣವಾಗಿ ಕಲಿಯಲು ಚಿಕ್ಕ ವಯಸ್ಸಿನಿಂದಲೂ ಸತತವಾಗಿ ಮಗ್ನನಾಗಿರಬೇಕು ಚಿತ್ರಕಲೆಯ ಮಹತ್ವವು ಕಲೆಗಳಲ್ಲಿ ಪ್ರಮುಖ ಕಲೆಯಾಗಿದೆ. ಈ ಚಿತ್ರಕಲೆ ಒಬ್ಬ ವ್ಯಕ್ತಿಯ ಗುಣಗಳನ್ನು ಆಚಾರ-ವಿಚಾರವನ್ನು ಪ್ರತಿಬಿಂಬಿಸುತ್ತದೆ. ನಾವು ಕಂಡಂತೆ ಮಕ್ಕಳ ಮೊದಲ ಸೃಜನಶೀಲತೆ ಚಿತ್ರಕಲೆಯೇ ಆಗಿದೆ. ಚರಿತ್ರೆಯೆ ಮೊಟ್ಟ ಮೊದಲ ಕಲಾಕೃತಿ ಎಂದು ನಂಬಲಾಗಿರುವ ಮತ್ತೊಂದು ಚಿತ್ರವೆಂದರೆ ಅದು ಮಾನವನ ಮುಂಗೈಯ ಛಾಪು, ಅದರಲ್ಲೂ ಹೆಚ್ಚಾಗಿ ಪ್ರಾಣಿಗಳನ್ನು ಬೇಟೆ ಆಡುವಂತಹ ಚಿತ್ರಗಳು ಕಂಡು ಬಂದಿದೆ. ಮಾನವ ಚಿತ್ರಬಿಡಿಸುವುದನ್ನು ಪ್ರಾರಂಭಿಸಿದ್ದು ಅಲಂಕರಣ ಅಥವಾ ಮನೋರಂಜನೆಗೆ ಮಾತ್ರವಲ್ಲದೇ ತನ್ನ ಮನೋಬಲ ವೃದ್ಧಿಸಿಕೊಳ್ಳಲು ಹಾಗೂ ಇದರಿಂದ ಬುದ್ಧಿ ಒಲವು ವೃದ್ಧಿಸುತ್ತದೆ. ಅಲ್ಲದೇ ಆಲೋಚನಾ ಶಕ್ತಿಯು ಹೆಚ್ಚಾಗುತ್ತದೆ. ಕಲಾವಿದನು ತನ್ನ ಶ್ರಮವನ್ನು ಮೀರಿದ ಪರಿಶ್ರಮವನ್ನು ಚಿತ್ರಕಲೆಗೆ ಮುಡಿಪಾಗಿಡುತ್ತಾನೆ.

"ಚಿತ್ರಕಲೆ ಇಲ್ಲದ ರಂಗವು ಮರಗಳಿಲ್ಲದ ಕಾಡಿನಂತೆ" ಎಂದು ಹೇಳಬಹುದು ಇಂದು ಚಿತ್ರಕಲೆಯು ಎಲ್ಲಾ ರಂಗಗಳಲ್ಲೂ ಪ್ರಮುಖ ಸ್ಥಾನವನ್ನು ಹೊಂದಿರುವಂತಹ ಕಲೆಯಾಗಿದೆ. ಇಂದಿನ ಕಾಲದಲ್ಲಿ ಈ ಚಿತ್ರಕಲೆಯಿಂದಾಗಿ ಮಾನವ (ಕಲಾವಿದ)ನ ಜೀವನವನ್ನು ವೃದ್ಧಿಸಿಕೊಳ್ಳಬಹುದಾಗಿದೆ. ■

***************

## ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು

**ಶರತ್ ಎನ್.ಜಿ.** ತೃತೀಯ ಬಿ.ಎ.

ಜೀವನದಲ್ಲಿ ಉನ್ನತ ಯಶಸ್ಸು
ಸಾಧಿಸ ಬಯಸುವವರಿಗಾಗಿ ....
ತಮ್ಮ ಜ್ಞಾನ ಹೆಚ್ಚಿಸಿಕೊಂಡು ನಾಲ್ಕು ಜನರಲ್ಲಿ
ಸೂರ್ಯನಂತೆ ಬೆಳಗುವವರಿಗಾಗಿ....
ಜೀವನದಲ್ಲಿ ತಮ್ಮತನವನ್ನು
ಕಂಡು ಕೊಳ್ಳ ಬಯಸುವವರಿಗಾಗಿ .....
ತನಗೆ ಅಪಮಾನ ಮಾಡಿದವರಿಗೆ
ತಾನು ಏನೆಂದು ತೋರಿಸಿ ಕೊಡುವವರಿಗಾಗಿ ....
ಅರ್ಥಪೂರ್ಣ ಜೀವನವನ್ನು
ತಮ್ಮದಾಗಿಸಿಕೊಳ್ಳ ಬಯಸುವವರಿಗಾಗಿ .....
ಪದೇ ಪದೇ ಪರೀಕ್ಷೆಯಲ್ಲಿ ಸೋಲನ್ನು ಅನುಭವಿಸಿದೆಯಾ
ಪ್ರಯತ್ನ ಬಿಡದೇ ಇರುವವರಿಗಾಗಿ....

ಆತ್ಮೀಯ ಸ್ಪರ್ಧಾರ್ಥಿಗಳೇ,

ಸ್ನೇಹಿತರೇ ಈ ಜಗತ್ತಿನಲ್ಲಿ ನಾವು ಸ್ಪರ್ಧಿಗಳಾಗಿದ್ದೇವೆ. ನಾವು ಅಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಆದ್ದರಿಂದ ಯುವಕರಲ್ಲಿ ಸ್ಪರ್ಧಾತ್ಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸಬೇಕಾಗುತ್ತದೆ.

ಕನ್ನೆ ವಿದ್ಯಾರ್ಥಿಗಳಿಗೆ ಇರುವ ಮುಖ್ಯ ಸಮಸ್ಯೆ ಎಂದರೆ ನಮ್ಮ ಹಳ್ಳಿಯ ಭಾಗದ ಅಭ್ಯರ್ಥಿಗಳಲ್ಲಿ ಕೀಳಿರಿಮೆ ಇರುತ್ತದೆ. ಪದವಿ ಪಡೆದ ತಕ್ಷಣ ಆರ್ಥಿಕವಾಗಿ ಮನೆಯವರರ ನೆರವಿಗೆ ನಿಲ್ಲಬೇಕೆಂಬ ಸಂಪೂರ್ಣ ಒತ್ತಡ ಇರುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಸರಿಯಾದ ಮಾರ್ಗದರ್ಶನ ಅಥವಾ ಒಳ್ಳೆಯ ಕಾರ್ಯಾಗಾರ ನಡೆಯುವ ಸ್ಥಳಗಳು ಇರುವುದು. ಇದೆ ಬಗ್ಗೆ ಹಳ್ಳಿಯ ವಿದ್ಯಾರ್ಥಿಗಳಿಗೆ ಅರಿವನ್ನು ಮೂಡಿಸಬೇಕು ಹಾಗೆಯೇ ಶಾಲೆ ಮತ್ತು ಕಾಲೇಜುಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ತರಬೇತಿ ನೀಡಬೇಕು. ಇದರಿಂದ ಹಲವಾರು ರೀತಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಇದರ ಬಗ್ಗೆ ಸರ್ಕಾರವು ಹಲವಾರು

ಕ್ರಮವನ್ನು ತೆಗೆದುಕೊಳ್ಳಬೇಕು ಹಾಗೆಯೇ ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಎಂದು ಹೇಳಲಾಗಿದೆ. ನಮ್ಮ ದೇಶದಲ್ಲಿ ಹಲವಾರು ಬಡ ವಿದ್ಯಾರ್ಥಿಗಳು, ಹಲವಾರು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಯಾವುದೇ ರೀತಿಯ ತರಬೇತಿ ಇಲ್ಲದೆ ಅವರ ಶ್ರಮದ ಮೂಲಕ ಸರ್ಕಾರಿ ಹುದ್ದೆಯನ್ನು ಪಡೆದುಕೊಂಡಿರುತ್ತಾರೆ.

ಕರ್ನಾಟಕದವರು ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗೆ ಹೆಚ್ಚು ಪ್ರಯತ್ನಿಸುತ್ತಿಲ್ಲ ಎಂಬ ಆರೋಪವಿದೆ ಇದು ಹಿಂದೆ ಇದ್ದ ಆರೋಪವಾಗಿರುತ್ತದೆ. ಆದರೆ ಈಗ ಎಲ್ಲಾ ಯುವಕರು ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರಿ ಕೆಲಸಕ್ಕೆ ಹೆಚ್ಚಿನ ಪ್ರೇರಣೆಯನ್ನು ನೀಡುತ್ತಿದ್ದಾರೆ. ಈ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಹಳ್ಳಿಯ ಯುವಕ ಮತ್ತು ಯುವತಿಯರಿಗೆ ಮಾಹಿತಿ ತಿಳಿದಿರುವುದಿಲ್ಲ ಆದ್ದರಿಂದ ಇದರ ಬಗ್ಗೆ ಅರಿವು ಮೂಡಿಸಲು ಹಳ್ಳಿಯಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಇದರ ಬಗ್ಗೆ ಮಾಹಿತಿಯನ್ನು ನಿಡಬೇಕು. ಇಲ್ಲಿ ಶ್ರೀಮಂ ಹಣವನ್ನು ನೀಡಿ ದೊಡ್ಡ ಹುದ್ದೆಯನ್ನು ಪಡೆದುಕೊಳ್ಳುತ್ತಾರೆ. ಆದರೆ ಕಷ್ಟ ಪಟ್ಟ ಬಡ ವಿದ್ಯಾರ್ಥಿಗಳಿಗೆ ಲಂಚವನ್ನು ನೀಡಲು ಸಾಧ್ಯವಾಗದೇ ಸಣ್ಣ ಹುದ್ದೆಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇದರಿಂದ ಹಲವಾರು ಜನರು ಬೇರೆ ಬೇರೆ ಕಡೆಗಳಲ್ಲಿ ಖಾಸಗಿ ಕೆಲಸವನ್ನು ಮಾಡುತ್ತಿದ್ದಾರೆ ಇವುಗಳು ಕಾರಣವಾಗಿವೆ.

ಹಾಗೆಯೇ ಹಲವಾರು ಯುವಕರು ಕಿರಿಯ ವಯಸ್ಸಿನಲ್ಲಿ ಹಲವಾರು ರೀತಿಯಲ್ಲಿ ಸಾಧನೆಗಳನ್ನು ಮಾಡಿದ್ದಾರೆ. ಹಾಗೆಯೇ ಅವರು ಉತ್ತಮವಾದ ಕೆಲಸ ಮತ್ತು ಅವರ ಅಧಿಕಾರಕ್ಕೆ ತಕ್ಕ ರೀತಿಯಲ್ಲಿ ದೇಶಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕೇಂದ್ರ ಲೋಕ ಸೇವಾ ಆಯೋಗದಲ್ಲಿ ಹಲವಾರು ರೀತಿಯಲ್ಲಿ ಹುದ್ದೆಗಳನ್ನು ಕಾಣಬಹುದಾಗಿದೆ. ಐ.ಪಿ.ಎಸ್, ಐ.ಎಫ್.ಎಸ್, ಯು.ಪಿ.ಎಸ್.ಸಿ ಪ್ರಮುಖ ಹುದ್ದೆಗಳು ಹಾಗೆಯೇ ಇನ್ನೂ ಹಲವಾರು ಹುದ್ದೆಗಳನ್ನು ಕಾಣಬಹುದಾಗಿರುತ್ತದೆ. ಇಂತಹ ಹುದ್ದೆಗಳನ್ನು ಪಡೆಯಲು ಹಠವನ್ನು ಪರಿಶ್ರಮ, ಆಸಕ್ತಿಯನ್ನು ಇಟ್ಟುಕೊಂಡು ಓದಬೇಕಾಗಿರುತ್ತದೆ. ಹಲವಾರು ಜಿಲ್ಲೆಗಳಲ್ಲಿ ಕಾರ್ಯಾಗಾರ ಸ್ಥಳಗಳು ತೆರೆದಿರುತ್ತಾರೆ. ಉತ್ತಮವಾದ ಮಾಹಿತಿ ಹಾಗೆಯೇ ಯಾವ ರೀತಿಯಲ್ಲಿ ಓದಬೇಕು ಇದರ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ. ಪ್ರಮುಖವಾಗಿ ನಾವು ಧಾರವಾಡದಲ್ಲಿ ಕಾಣಬಹುದಾಗಿರುತ್ತದೆ. ಇನ್ನೂ ಕೆಲವು ಕಡೆಗಳಲ್ಲಿ ಉಚಿತವಾದ ಕಾರ್ಯಾಗಾರ ನಡೆಸುತ್ತಿದ್ದಾರೆ. ಇವುಗಳನ್ನು ಓದಲು ಹಲವು ಬಗೆಯ ಪುಸ್ತಕಗಳನ್ನು ಕಾಣಬಹುದಾಗಿರುತ್ತದೆ. ತುಮಕೂರು, ಚಿತ್ರದುರ್ಗದಲ್ಲಿ ತರಬೇತಿಯ ಉಚಿತವಾಗಿ ನೀಡುತ್ತಾರೆ. ಮುಖ್ಯವಾಗಿ ಹೆಣ್ಣು ಮಕ್ಕಳು ವಿಶೇಷವಾದ ಆಸಕ್ತಿಯನ್ನು ತೋರುತ್ತಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎಲ್ಲಾ ರೀತಿಯಾದ ಇತಿಹಾಸ, ಭೂಗೋಳ, ಸಂವಿಧಾನ, ಅರ್ಥಶಾಸ್ತ್ರ, ವಿಜ್ಞಾನ, ರಕ್ಷಣೆ, ಕ್ರೀಡೆ, ಪ್ರಶಸ್ತಿ, ಕಲೆ, ಸಾಹಿತ್ಯ, ಜಾಗತಿಕ ವಿಶೇಷತೆ, ಭಾರತೀಯ ವಿಶೇಷತೆ ಹೀಗೆ ಹತ್ತು ಹಲವು ರೀತಿಯ ಮಾಹಿತಿಗಳನ್ನು ತಿಳಿದುಕೊಳ್ಳುತ್ತೇವೆ. ಈ ಹುದ್ದೆಗಳನ್ನು ಪಡೆಯಲು ಹಲವಾರು ಪುಸ್ತಕಗಳನ್ನು ಓದಬೇಕಾಗುತ್ತದೆ. ಪರಿಶ್ರಮ, ಕಷ್ಟಪಟ್ಟು, ಆಸಕ್ತಿಯಿಂದ ಇಟ್ಟುಕೊಂಡರೆ ಮಾತ್ರ ಸಾಧಿಸಬೇಕಾದ ಗುರಿಯನ್ನು ಮುಟ್ಟಲು ಸಾಧ್ಯ ಎಂದು ತಿಳಿಸಲಾಗಿರುತ್ತದೆ ಎಂದು ಹೇಳಲಾಗಿದೆ. ಇನ್ನೂ ಹಲವಾರು ರೀತಿಯ ಮಾಹಿತಿಯನ್ನು ಕಾಣಬಹುದಾಗಿರುತ್ತದೆ ಎಂದು ತಿಳಿಸಲಾಗಿದೆ.

ಕೊನೆಯದಾಗಿ ಆತ್ಮೀಯ ಸ್ಪರ್ಧಾರ್ಥಿಗಳೇ ತಮ್ಮಲ್ಲಿರುವ ಶಕ್ತಿಯನ್ನು ಸಮರ್ಥವಾಗಿ ಬಳಸಿದಾಗ ಏನನ್ನು ಬೇಕಾದರೂ ಸಾಧಿಸಬಹುದು. ಸಾಧಿಸುವವರೆಗೂ ಅದು ಅಸಾಧ್ಯವಾದದ್ದು ನಾವು ಸೂಕ್ತ ಸಮಯದಲ್ಲಿ ಸೂಕ್ತ ಅವಕಾಶ ಬಳಸಿಕೊಂಡು ಮುನ್ನಡೆದರೆ ಸುಲಭವಾಗಿ ಯಶಸ್ಸು ಪಡೆಯಬಹುದು ಸಾಧಿಸಲೇಬೇಕೆಂದು ಹಠ ಹಿಡಿದು ಮುನ್ನಡೆದರೆ ಏನನ್ನಾದರೂ ಸಾಧಿಸಬಹುದು.

ನೀನು ಎಷ್ಟೇ ಎತ್ತರಕ್ಕೆ
ಏರಿದರೂ ಕೂಡ
ನಿನ್ನ ತಂದೆ–ತಾಯಿಯನ್ನು
ಮರೆಯಬೇಡ
ಅವರಿಗೆ ತೊಂದರೆ ಕೊಟ್ಟು
ನೀನು ಸಾಧನೆ ಮಾಡಿದರೆ
ಅದು ಸಾಧನೆ ಅಲ್ಲ ಶೂನ್ಯ

********

# "ಪರಿಸರದ ಸಂರಕ್ಷಣೆ ನಮ್ಮ ಹೊಣೆ"

ನಂದಿನಿ ಕೆ. ತೃತೀಯ ಬಿ.ಎ.

ಪರಿಸರ ಎಂದರೆ ನಮ್ಮ ಸುತ್ತಮುತ್ತಲಿನ ಸಜೀವ ಹಾಗೂ ನಿರ್ಜೀವ ವಸ್ತುಗಳು ಪರಿಸರದ ಬಗ್ಗೆ ಕಾಳಜಿವಹಿಸಿ ಅದನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವುದು ನಮ್ಮೆಲ್ಲರ ಹೊಣೆ ನಮ್ಮ ದೇಶದಲ್ಲಿ ಜನಸಂಖ್ಯೆಯು ದಿನದಿಂದ ದಿನ ಬೆಳೆಯುತ್ತಲೇ ಹೋಗುತ್ತಿದೆ. ಈ ಕಾರಣದಿಂದ ಪರಿಸರವು ಮಾಲಿನ್ಯಗೊಂಡು ಶುದ್ಧನಿರು, ಶುದ್ಧ ಗಾಳಿ, ಶುದ್ಧ ಆಹಾರ ಸಿಗುವುದು ಕಷ್ಟವಾಗಿದೆ. ಹಾಗೆಯೇ ನಮ್ಮ ಸುತ್ತಮುತ್ತಲ ಪರಿಸರ ಶುಚಿಯಾಗಿರದಿದ್ದರೆ ಅನೇಕ ಕಾಯಿಲೆಗಳು ಬರುತ್ತವೆ.

'ಪರಿಸರದ ನಾಶ ನಮ್ಮ ವಿನಾಶ' ಮಾನವ ತನ್ನ ಸುಖಕ್ಕಾಗಿ ಮತ್ತು ಹಣ ಸಂಪಾದಿಸುವುದಕ್ಕಾಗಿ ಮರ-ಗಿಡಗಳನ್ನೆಲ್ಲಾ ಕಡಿದು ಸಮೃದ್ಧವಾದ ಕಾಡನ್ನು ಕಾಂಕ್ರೀಟ್ ಕಾಡನ್ನು ಮಾಡಿದ್ದಾನೆ. ಹೊಗೆ, ಧೂಳು, ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ಧ ಮಾಲಿನ್ಯ, ಭೂಮಿ ಮಾಲಿನ್ಯ, ಓಜೋನ್ ಮಾಲಿನ್ಯ ಈ ಎಲ್ಲಾ ರೀತಿಯ ಸಮಸ್ಯೆಗಳಿಂದ ಪ್ರಕೃತಿಯ ಅಸಮತೋಲನವಾಗುತ್ತಿದೆ. ಹೀಗೆ ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಕಡಿದು ಹಾಳು ಮಾಡಿ ತನ್ನ ಆಸೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾನೆ. ಹೀಗಾಗಿ ಅತಿವೃಷ್ಠಿ ಮತ್ತು ಅನಾವೃಷ್ಠಿ ಸಮಸ್ಯೆಗಳು ಜನರಲ್ಲಿ ಕಾಡುತ್ತಿದೆ.

**ಜಲ ಮಾಲಿನ್ಯ:**

ದಿನನಿತ್ಯದ ಜೀವನಕ್ಕೆ ನೀರು ಅವಶ್ಯಕ. ಹನಿ ಹನಿ ಕುಡಿದರೆ ಹಳ್ಳ, ಬೇಸಿಗೆಯಲ್ಲಿ ನೀರಿನ ಸಮಸ್ಯೆ ಅತಿ ಹೆಚ್ಚು ಕೊಳವೆ ಬಾವಿಗಳು ಹೆಚ್ಚಿದಂತೆ ಅಂತರ್ಜಲ ಮಟ್ಟ ಕುಸಿದು ನೀರಿನ ಸಮಸ್ಯೆ ಉಂಟಾಗುತ್ತದೆ. ಹಾಗೆಯೇ ಭೂಮಿಯ ಅದರ ಸಡಿಲಗೊಳ್ಳುತ್ತದೆ. ಕಾರ್ಖಾನೆಗಳು ಹೊರಬಿಡುವ ಅಶುದ್ಧ ನೀರು ಕೆರೆ, ನದಿಗಳಿಗೆ ಸೇರುವುದರಿಂದ ಹಾಗೆಯೇ ಹಡಗುಗಳಲ್ಲಿ ತೈಲಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳುಹಿಸುವಾಗ ಅವುಗಳು ಸೋರಿಕೆಯಾಗಿ ನೀರು ಅಂದರೆ ಸಮುದ್ರದ ನೀರು ಕಲುಷಿತಗೊಂಡು ಅನೇಕ ಜಲಚರ ಜೀವಿಗಳು ಸಾಯುತ್ತವೆ. ಹಾಗೆಯೇ ಕಾರ್ಖಾನೆಗಳಿಗೆ ಬಳಸಿದ ನೀರನ್ನು ಕೆರೆಗಳಿಗೆ ಬಿಡುವುದರಿಂದ ಕೆರೆಯ ನೀರು ಅಶುದ್ಧಗೊಳ್ಳುವದರೊಂದಿಗೆ ಅದನ್ನು ಬಳಸಿದರೆ ಆಗ ಜನರಿಗೆ ಅನಾರೋಗ್ಯವು ಉಂಟಾಗುತ್ತದೆ. ಹಾಗೆಯೇ ಕೆರೆಯ ನೀರನ್ನು ಧನಕರುಗಳು ಕುಡಿಯಲು ಆಗುವುದಿಲ್ಲ. ಹೀಗೆ ನೀರು ಹಲವಾರು ರೀತಿಯಲ್ಲಿ ಮಲೀನಗೊಳ್ಳುತ್ತವೆ.

ಜಲಮಾಲಿನ್ಯವನ್ನು ಕಡಿಮೆ ಮಾಡಲು ಹಲವಾರು ವಿಧಗಳನ್ನು ಬಳಸಬಹುದು ಅವುಗಳೆಂದರೆ.

- ಕೃಷಿ ಹಾಗೂ ಕೈಗಾರಿಕೆಗಳಿಗೆ ಬಳಸಿದ ನೀರನ್ನು ಶುದ್ದಿಕರಿಸಿ ನದಿಗಳಿಗೆ ಬಿಡುವುದರಿಂದ ನೀರು ಕಲುಷಿತಗೊಳ್ಳುವುದು ತಪ್ಪಿಸಬಹುದು.
- ಮಳೆಗಾಲದಲ್ಲಿ ಮಳೆ ಬೀಳುವಾಗ ಮನೆಗಳಲ್ಲಿ ಮಳೆ ನೀರಿನ ಕೊಯ್ಲು ಮಾಡುವುದರಿಂದ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಕಡಿಮೆಯಾಗಿ ಶುದ್ಧ ನೀರು ದೊರೆಯುತ್ತದೆ.
- ಮನೆಯಲ್ಲಿ ನಮ್ಮ ದಿನನಿತ್ಯದ ಬಳಕೆಗೆ ಬಳಸುವ ನೀರನ್ನು ಹೆಚ್ಚಾಗಿ ಬಳಸದೇ ಮಿತವಾಗಿ ಬಳಸಬೇಕು. ಹಾಗೆಯೇ ಸ್ನಾನಕ್ಕೆ ಬಳಸಿದ ನೀರನ್ನು ಶೇಖರಿಸಿ ಅದನ್ನು ಗಿಡಗಳನ್ನು ಬೆಳೆಸಲು ಬಳಸಬಹುದಾಗಿದೆ. ಹಾಗೆಯೇ ಸ್ನಾನಕ್ಕೆ ಬಳಸಿದ ನೀರನ್ನು ಶೇಖರಿಸಿ ಅದನ್ನು ಗಿಡಗಳನ್ನು ಬೆಳೆಸಲು ಬಳಸಬಹುದಾಗಿದೆ. ವಾರಕ್ಕೇ 1 ಸಾರಿ ಶುದ್ದೀಕರಿಸಿ ಮನೆಯ
- ನೀರನ್ನು ಮಿತವಾಗಿ ಬಳಸಿ, ಮನೆಯಲ್ಲಿನ ನೀರಿನ ಟ್ಯಾಂಕ್‌ಗಳನ್ನು ವಾರಕ್ಕೇ 1 ಸಾರಿ ಶುದ್ದೀಕರಿಸಿ ಮನೆಯ ಸುತ್ತ ಮುತ್ತಲು ನೀರು ನಿಲ್ಲದಂತೆ ಜಾಗೃತಿ ವಹಿಸಿ ನೀರನ್ನು ಉಳಿಸುವುದು ನಮ್ಮ ಕರ್ತವ್ಯವಾಗಿದೆ.

ಹೀಗೆ ಹಲವಾರು ರೀತಿಯಲ್ಲಿ ಜಲಮಾಲಿನ್ಯವನ್ನು ತಡೆಯಬಹುದು.

**ವಾಯು ಮಾಲಿನ್ಯ:**

ಮನುಷ್ಯರಿಗೆ ನೀರು ಎಷ್ಟು ಮುಖ್ಯವೋ ಹಾಗೆಯೇ ಉಸಿರಾಡಲು ಶುದ್ಧ ಗಾಳಿಯು ಅವಶ್ಯಕ. ನಗರ ಪ್ರದೇಶಗಳಲ್ಲಿ ವಾಹನಗಳ ಅತಿಯಾದ ಬಳಕೆಯಿಂದ ವಾಯುಮಾಲಿನ್ಯ ಉಂಟಾಗುತ್ತದೆ. ಇದರಿಂದ ಶ್ವಾಸಕೋಶದ ಕಾಯಿಲೆಗಳು ಹೆಚ್ಚಾಗುತ್ತಿವೆ. ಕಾರ್ಖಾನೆಗಳಿಂದ ಮತ್ತು ವಾಹನಗಳಿಂದ ಹೊರಬರುವ ಕಾರ್ಬನ್‌ಮೊನಾಕ್ಸೈಡ್‌ನಿಂದ ಗಾಳಿ ಕಲುಷಿತಗೊಳ್ಳುತ್ತಿದೆ. ಭೂಮಿಯ ತಾಪ ಹೆಚ್ಚಾಗಿ ಹಿಮ ಕರಗಿ, ಸಮುದ್ರಮಟ್ಟ ಏರುತ್ತದೆ ಇದರಿಂದ ಸಮುದ್ರದಲ್ಲಿ ಭೂಕಂಪ, ಸುನಾಮಿಯಿಂದ ಸಮುದ್ರ ತೀರದಲ್ಲಿರುವ ಅನೇಕ ಊರುಗಳು ನೀರು ಪಾಲಾಗುತ್ತವೆ.

- ಅತಿಯಾದ ವಾಹನಗಳ ಬಳಕೆಯನ್ನು ಕಡಿಮೆ ಮಾಡಬೇಕು.
- ಕಾರ್ಖಾನೆಗಳು ಬಿಡುವ ವಿಷಯುಕ್ತ ಗಾಳಿಯನ್ನು ಶುದ್ಧೀಕರಿಸಿ ಇಲ್ಲವೇ ಉದ್ದವಾದ ಕೊಳವೆಗಳನ್ನು ಹಾಕುವುದರಿಂದ ವಾಯುಮಾಲಿನ್ಯ ಕಡಿಮೆ ಮಾಡಬಹುದು.
- ಕಾಡುಗಳನ್ನು ನಾಶ ಮಾಡುವುದನ್ನು ತಡೆಯುವುದರಿಂದ ಅಂದರೆ ಹೆಚ್ಚು ಕಾಡು ಬೆಳೆಸುವುದರಿಂದ ಶುದ್ಧವಾದ ಗಾಳಿ ಸಿಗುತ್ತವೆ.
- ವಾಹನಗಳಿಂದ ಹೊರಬರುವ ಕಾರ್ಬನ್ ಮೊನಾಕ್ಸೈಡ್‌ನ್ನು ತಡೆಗಟ್ಟಬಹುದು.

**ಭೂಮಿ ಮಾಲಿನ್ಯ:**

ಪ್ರಮುಖವಾಗಿ ಎಲ್ಲಾ ಗ್ರಹಗಳಿಗಿಂತಲೂ ಭೂಮಿಯಲ್ಲಿ ಮಾತ್ರ ಜೀವಿಗಳು ವಾಸವಾಗಿ ಇಂದಿನ ದಿನಗಳಲ್ಲಿ ಭೂಮಿ ಕಲುಷಿತಗೊಳ್ಳುತ್ತಿದೆ. ಮುಖ್ಯವಾಗಿ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ. ಪೇಪರ್ ಬ್ಯಾಗ್, ಕಪ್ಸ್ ಮತ್ತು ಪ್ಲೇಟ್‌ಗಳ ಉಪಯೋಗಿಸುವುದು ಉತ್ತಮ. ಇಂದಿನ ದಿನಗಳಲ್ಲಿ ಅತಿಯಾದ ಪ್ಲಾಸ್ಟಿಕ್‌ಗಳ ಬಳಕೆ ಅಂದರೆ ಪ್ಲಾಸ್ಟಿಕ್ ಬ್ಯಾಗ್, ಪ್ಲಾಸ್ಟಿಕ್ ಕ ಹಾಗೂ ಪ್ಲಾಸ್ಟಿಕ್ ಪ್ಲೇಟ್‌ಗಳನ್ನು ಬಳಸುವುದರಿಂದ ಪ್ಲಾಸ್ಟಿಕ್ ಕರಗದೇ ಭೂಮಿಯಲ್ಲಿ ಉಳಿಯುತ್ತದೆ. ಇದರಿಂದ ಭೂಮಿ ಮಾಲಿನ್ಯವಾಗುತ್ತದೆ. ಹಾಗೆಯೇ ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಭೂಮಿಯನ್ನು ಅಗೆದು ಗಣಿಗಾರಿಕೆಯನ್ನು ಮಾಡುವು ಹಾಗೆಯೇ ಭೂಮಿಯನ್ನು ಅಗೆದು ಮರಗಳನ್ನು ತೆಗೆಯುವ ಕೆಲಸ ಮಾಡುವುದರಿಂದ ಕೂಡ ಭೂಮಿ ಮಾಲಿನ್ಯವಾಗುತ್ತ ಇದರಿಂದ ಭೂಮಿ ಕೂಡ ಕುಸಿಯುತ್ತದೆ. ಹಾಗೆಯೇ ಅತಿಯಾದ ಕೀಟನಾಶಕಗಳನ್ನು ಬಳಸುವುದರಿಂದ ಭೂಮಿಯು ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಇದರಿಂದಲೂ ಕೂಡ ಭೂಮಿ ಮಾಲಿನ್ಯ ಉಂಟಾಗುತ್ತದೆ. ಹಾಗೆಯೇ ಅತಿಯಾಗಿ ಕಾಡು ನಾಶಗೊಳಿಸುತ್ತಿರುವುದರಿಂದ ಅಂದರೆ ಮರಗಳನ್ನು ಕಡಿಯುತ್ತಿರುವುದರಿಂದ ಭೂಮಿಯ ಮೇಲ್ಪದರವು ಸಡಿಲಗೊಳ್ಳುತ್ತದೆ.

- ಭೂಮಿ ಮಾಲಿನ್ಯವನ್ನು ಕಡಿಮೆ ಮಾಡಲು ಈ ರೀತಿಯ ಕೆಲವು ವಿಧಾನಗಳನ್ನು ಬಳಸಬೇಕು.
- ಗಣಿಗಾರಿಕೆಯನ್ನು ಕಡಿಮೆ ಮಾಡಬೇಕು.
- ತರಕಾರಿ, ಹಣ್ಣುಗಳು ಹಾಗೂ ತೋಟಗಳಲ್ಲಿ ಕಳೆಯನ್ನು ತೆಗೆಯಲು ಕಳೆನಾಶಕಗಳನ್ನು ಹಾಗೂ ಕೀಟನಾಶಕಗಳನ್ನು ಬಳಸುವುದರಿಂದ ಭೂಮಿ ಮಾಲಿನ್ಯ ಉಂಟಾಗುತ್ತದೆ. ಹಾಗಾಗಿ ಇವುಗಳನ್ನು ಕಡಿಮೆ ಬಳಸಬೇಕು.
- ಮರಗಳನ್ನು ಕಡಿಯುವುದು ಕಡಿಮೆ ಮಾಡಬೇಕು. ಇಲ್ಲದಿದ್ದರೆ ಭೂಮಿಯ ಮೇಲ್ಪದರ ಸಡಿಲವಾಗುತ್ತದೆ.

ಮೇಧಾ ಪಾಟ್ಕರ್, ನರ್ಮದಾ ಬಚಾವ್ ಆಂದೋಲನ ಹಾಗೂ ಚಿಪ್ಕೋ ಚಳುವಳಿ, ಸುಂದರ್‌ಲಾಲ್ ಬಹುಗುಣ ಅವ ಪರಿಸರದ ಕಾಳಜಿಯನ್ನು ಕುರಿತು ನಾವು ಪರಿಸರವನ್ನು ಕಾಪಾಡುವಲ್ಲಿ ಮುಂದೆ ಹೆಜ್ಜೆ ಹಾಕೋಣ ಹಸಿರೇ ಉಸಿರು, ಕಾಡಿದ್ದ ನಾಡು ಪರಿಸರವು ನಮ್ಮೆಲ್ಲರ ಜೀವನದ ಒಂದು ಅಂಗವೆಂದು ಭಾವಿಸಿ ಅದನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳುವುದ ನಮ್ಮೆಲ್ಲರ ಜವಾಬ್ದಾರಿಯಾಗಿದೆ.

******

# ಜಲ ಸಂರಕ್ಷಣ ದೋಷಗಳು ಮತ್ತು ಉಪಯೋಗಗಳು

**ಶ್ರೀನಿವಾಸ್ ಈ.** ತೃತೀಯ ಬಿ.ಎ. (ಹೆಚ್.ಎಸ್.ಪಿ)

**ಜಲ ಸಂರಕ್ಷಣೆಯ ದೋಷಗಳು ಅಥವಾ ನೀರಿನ ಸಂರಕ್ಷಣ ದೋಷಗಳು:**

ನೀರು ಎಲ್ಲಾ ಜೀವಿಗಳಿಗೆ ಅಗತ್ಯವಾದ ರುಚಿ ರಹಿತ ವಸ್ತು ಇದು ಭೂಮಿಯ ಮೇಲ್ಮೈಯ ಶೇ.70 ರಷ್ಟು ಭಾಗಗಳಲ್ಲಿ ಕಂಡುಬರುತ್ತದೆ. ಆದರೆ ಶುದ್ಧ ಕುಡಿಯಲು ಬಳಸಬಹುದಾದ ನೀರು ಕೇವಲ ಶೇ.3 ರಷ್ಟು ಮಾತ್ರವೇ ಲಭ್ಯವಿರುತ್ತದೆ. ಪ್ರಪಂಚದಲ್ಲಿ ಒಟ್ಟು 140 ಕೋಟಿ ಘನ ಕೀ.ಮೀ.ಗಳಷ್ಟು ನೀರು ವಿವಿಧ ರೂಪಗಳಲ್ಲಿ ಇದೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಬಹಳಷ್ಟು ಭಾಗ ಸಮುದ್ರಗಳಲ್ಲಿ ಧ್ರುವ ಪ್ರದೇಶಗಳಲ್ಲಿ ಘನ ರೂಪದಲ್ಲಿ ಹಾಗೂ ನೀರಾವಿ ಮೊದಲಾದ ರೂಪಗಳಲ್ಲಿವೆ.

ನೀರಿನ ರಾಸಯನಿಕ ಸೂತ್ರ $H_2O$ ಎಂದರೆ ಒಂದು ಅಣು ನಿಂನಲ್ಲಿ ಜಲಜನಕ ಅಣುಗಳು ಹಾಗೂ ಒಂದು ಆಮ್ಲಜನಕ ಅಣು ಇರುವಾಗ ತಿಳಿ ನೀಲಿ ಬಣ್ಣ ಪಡೆಯುತ್ತದೆ. ಇದಕ್ಕೆ ಕಾರಣ ನೀರು ಕೆಂಪು ಬಣ್ಣದ ಬೆಳಕನ್ನು ಅಲ್ಪ ಪ್ರಮಾಣದಲ್ಲಿ ಹೀರಿಕೊಂಡು ನೀಲಿ ಬೆಳಕನ್ನು ಹೆಚ್ಚಾಗಿ ಚದುರಿಸುವುದೇ ಆಗಿದೆ. ನೀರಿನ ಸಂರಕ್ಷಣೆಗೆ ಇತ್ತೀಚ್ಚೀನ ದಿನಗಳಲ್ಲಿ ಹೆಚ್ಚಾಗುತ್ತಿರುವಂತಹ ಕಾಂಕ್ರೀಟ್ ಕಾರಣವು ಸಹ ಒಂದು ಕಾರಣವಾಗಿದೆ. ಇದು ಭೂಮಿಯಲ್ಲಿ ನೀರನ್ನು ಹಿಗ್ಗುವಿಕೆಗೆ ಬಿಡುವುದಿಲ್ಲ. ನೀರು ನಮ್ಮ ಬದುಕಿನಲ್ಲಿ ನೀರು ಅತಿ ಮುಖ್ಯವಾದ ಪಾತ್ರ ವಹಿಸುತ್ತವೆ. ಆದರೆ ಅದರ ಮಹತ್ವವನನು ಜನಸಾಮಾನ್ಯನಿಗೆ ಮನದಟ್ಟು ಮಾಡಿಸುವುದರಲ್ಲಿ ಈ ವ್ಯವಸ್ಥೆ ಸೋತಿದೆ. ಕೆರೆ ಕೊರೆ, ನಾಲೆ, ಬಾವಿ ಮೊದಲಾದ ನಿರಿನ ಮೂಲಗಳು ಸಂರಕ್ಷಣೆಗೆ ನೀಡಬೇಕಾದ ಮಹತ್ವ ನೀಡಲಿಲ್ಲ ಅದರ ಪರಿಣಾಮವನ್ನು ಈಗ ಎದುರಿಸುತ್ತಿದ್ದೇವೆ. ಬಯಲು ಸೀಮೆಯ ಕೆಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ದಿನೇ ದಿನೇ ಕುಸಿಯುತ್ತಲೇ ಇದೆ. ಆದರೂ ನಾವು ಎಚ್ಚರಿಕೆಗೊಂಡಿಲ್ಲ ಎಂಬುದು ನೋವಿನ ಸಂಗತಿ.

ನೀರಿನ ಅಭಾವ ಉಂಟಾಗಲು ಮನುಷ್ಯನ ಸ್ವಾರ್ಥವೇ ಕಾರಣ ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ನಾಶ, ಗಣಿಗಾರಿಕೆ, ಕಾಂಕ್ರೀಟಿಕರಣ ಮಿತಿ ಮೀರಿದೆ. ವರ್ಷದಿಂದ ವರ್ಷಕ್ಕೆ ವರ್ಷಧಾರೆಯ ಪ್ರಮಾಣ ಇಳಿಮುಖವಾಗುತ್ತಿದೆ. ಬಿಸಿಲಧಗೆ ಏರುತ್ತಲೇ ಇದೆ. ಮಳೆ ಬಂದರೂ ಅದು ಅಕಾಲ ಮಳೆಯಾಗಿರುತ್ತದೆ. ಕೆಲವೊಮ್ಮೆ ಪ್ರವಾಹವನ್ನೇ ಸೃಷ್ಟಿಸಿ ಅನಾಹುತ ಉಂಟುಮಾಡುತ್ತಿದೆ. ನೈಸರ್ಗಿಕವಾಗಿ ಸಿಗುತ್ತಿದ್ದ ನೀರು ಇಂದು ಬಾಟಲಿಯಲ್ಲಿ ಭದ್ರವಾಗುತ್ತಿದೆ. ಅದರ ಬೆಲೆಯೂ ದಿನೇ ದಿನೇ ಏರುತ್ತಿದೆ. ನೀರಿನ ಸಮಸ್ಯೆ ಬಗೆಹರಿಸಿಕೊಳ್ಳುವುದು ನಮ್ಮ ಜನಪ್ರತಿನಿಧಿಗಳು ಹಾಗೂ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ.

ನೀರು ಒಂದು ನೈಸರ್ಗಿಕ ಸಂಪನ್ಮೂಲವಾಗಿದೆ. ಇದನ್ನು ಬಳಸುವುದು ಮತ್ತು ದುರ್ಬಳಕೆಗೆ ಹೆಚ್ಚಾಗಿ ಉಪಯೋಗಿಸುತ್ತಾರೆ. ನೀರಿನ ಅಭಾವಕ್ಕೆ ಕಾಡಿನ ನಾಶವೇ ಕಾರಣವಾಗಿದೆ. ಈ ರೀತಿಯ ಕಾಡಿನಲ್ಲಿ ಇರುವ ಮರಗಳನ್ನು ಕಡಿದು ಭೂಮಿಯಲ್ಲಿ ನೀರು ಇಂಗಿದ ಹಾಗೆ ಆಗುತ್ತದೆ ಎಂಬುದು ತಿಳಿಯುವುದು ಹಾಗೆ ಮರಗಳು ಇಲ್ಲವಾದರೆ ನೀರು ಹರಿದು ಹೋಗುತ್ತದೆ. ಹರಿದು ಹೋಗುವ ನೀರಿನಲ್ಲಿ ಇನ್ನು ಕೆಲವು ಸಸ್ಯಗಳು ಇದ್ದರೆ ಈ ನೀರನ್ನು ಕಡೆದು ಇಂಗಿಸಿಕೋಳ್ಳುತ್ತದೆ. ನಾವುಗಳು ಮಳೆಗಾಲದಲ್ಲಿ ಹರಿದು ಹೋಗುವ ನೀರಿನ ಬಗ್ಗೆ ಯೋಚಿಸದೆ ನೀರನ್ನು ಹರಿಯಲು ಬಿಟ್ಟು ನಂತರದಲ್ಲಿ ಬೇಸಿಗೆಯಲ್ಲಿ ಮಾತ್ರ ನಾವು ನೀರನ್ನು ಹುಡುಕಾಡುತ್ತೇವೆ. ಇದರಿಂದ ಅಂತರ್ಜಲ ಕುಸಿತ ಉಂಟಾಗುತ್ತದೆ. ಹಾಗೆಯೇ ಯಾವುದೇ ಒಂದು ನಗರ ಪ್ರದೇಶಗಳಲ್ಲಿ ಅಲ್ಲಿನ ನೀರನ್ನು ಹೆಚ್ಚಾಗಿ ಬಳಸಿಕೊಂಡು ಅಲ್ಲದೇ ವಿವಿಧ ಬಗೆಗಳಲ್ಲಿ ನಗರದ ಜನರು ನೀರನ್ನು ಮಿತವಾಗಿ ಬಳಸದೇ ನೀರನ್ನು ಹರಿದು ಬಿಡುವುದು ಕಾಣುವುದು. ನೀರು ನಗರದಲ್ಲಿನ ಕೊಳಚೆ ಚರಂಡಿಗೆ ಸೇರಿ ಅದು ನದಿಗಳಿಗೆ ನೇರವಾಗಿ ಹೋಗಿ ಸೇರಿ ನದಿಯ ನೀರು ತುಂಬ ಮಾಲಿನ್ಯಕರವಾಗಿ ಹಾಗೂ ರೋಗ ಪೀಡಿತವಾದದ್ದು ಆಗಿರುತ್ತದೆ.

*****

# ನೀರಾವರಿಯ ಬಗ್ಗೆ ಮಾಹಿತಿ

**ಶರತ್ ಕೆ.ಎಸ್.** ತೃತೀಯ ಬಿ.ಎ.

**ನೀರಾವರಿ ಸಂರಕ್ಷಣೆ:**

ಭಾರತದಲ್ಲಿ ನೀರಾವರಿ ಸಂರಕ್ಷಣೆ ಎಂಬುದು ಅತ್ಯಂತ ಮಹತ್ವ ಪೂರ್ಣವಾಗಿದೆ. ನಮ್ಮ ಬದುಕಿನಲ್ಲಿ ನೀರು ಅತಿ ಮುಖ್ಯವಾದ ಪಾತ್ರವಹಿಸುತ್ತದೆ. ಆದರೆ ಅದರ ಮಹತ್ವವನ್ನು ಜನಸಾಮಾನ್ಯರಿಗೆ ಮನದಟ್ಟು ಮಾಡಿಸುವಲ್ಲಿ ನಮ್ಮ ಜನರು ಸೋತಿದ್ದಾರೆ ಅಥವಾ ಯುವಕರು ನಮ್ಮ ಹಳ್ಳಿಯ ಜನರಿಗೆ ನೀರಿನ ಬಗ್ಗೆ ಮಾಹಿತಿಯನ್ನು ಸ್ಪಷ್ಟವಾಗಿ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳಬಹುದು.

ಬಯಲು ಸೀಮೆಯ ಜನರಿಗೆ ನೀರಾವರಿಯನ್ನು ಸಂರಕ್ಷಣೆ ಮಾಡುವುದು ಪ್ರಮುಖವಾದ ಅಂಶವಗಿದೆ. ಕೆರೆ, ಬಾವಿ, ತೊರೆ ಮೊದಲಾದ ನೀರಿನ ಮೂಲಗಳ ಸಂರಕ್ಷಣೆಗೆ ನೀಡಬೇಕಾದ ಮಹತ್ವ ನೀಡಲಿಲ್ಲ. ಅದರ ಪರಿಣಾಮ ಈಗಿನ ಮಳೆಗಾಲವನ್ನು ನೋಡಬಯಸುತ್ತಿದ್ದ ಬಯಲು ಸೀಮೆಯ ಜನರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಬಯಲುಸೀಮೆಯ ಕೆಲವಯ ಜಿಲ್ಲೆಗಳಾದ ದಾವಣಗೆರೆ, ಚಿರ್ತದುರ್ಗ, ಹಾವೇರಿ, ಉತ್ತರಕನ್ನಡ ಜಿಲ್ಲೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ.

ನೀರಿನ ಅಭಾವ ಉಂಟಾಗಲು ಮಾನವನ ಸ್ವಾರ್ಥವೇ ಕಾರಣವಾಗಿದೆ. ಅರಣ್ಯನಾಶ, ಗಣಿಗಾರಿಕೆ ಮಿತಿ ಮೀರಿದೆ. ವರ್ಷದಿಂದ ವರ್ಷಕ್ಕೆ ವರ್ಷಧಾರೆಯ ಪ್ರಮಾಣ ಇಳಿಮುಖವಾಗುತ್ತಿದೆ. ಕೆಲವೊಮ್ಮೆ ಪ್ರವಾಹವನ್ನೇ ಸೃಷ್ಟಿಸಿ ಅನಾಹುತ ಉಂಟುಮಾಡುತ್ತಿದೆ. ನೈಸರ್ಗಿಕವಾಗಿ ಸಿಗುತ್ತಿದ್ದ ನೀರು ಇಂದು ಬಾಟಲಿಯಲ್ಲಿ ಭದ್ರವಾಗುತ್ತಿದೆ. ಅದರ ಬೆಲೆಯೂ ದಿನೇ ದಿನೇ ಏರುತ್ತಿದೆ. ಇದು ನೀರಿನ ಸಮಸ್ಯೆಯನ್ನು ತಿಳಿಸುತ್ತದೆ.

**ನೀರಾವರಿ ಎಂದರೆ:–** ನೆಲಕ್ಕೆ ಕೃತಕವಾಗಿ ನೀರಿನ ಅನ್ವಯ ಮುಖ್ಯವಾಗಿ ಬೇಸಾಯಕ್ಕೆ ಮಳೆನೀರನ್ನು ಮಾತ್ರ ಭೂಮಿಯು ಆಶ್ರಯಿಸದೆ ಇತರ ನೈಸರ್ಗಿಕ ಮೂಲಗಳ ನೀರನ್ನು ಆಶ್ರಯಿಸಿರುತ್ತದೆ.

ನೀರಾವರಿಯು ಕೃಷಿಗೆ ಪ್ರಮುಖವಾದ ಆಧಾರವಾಗಿದೆ. ಬೆಳೆಯನ್ನು ಬೆಳೆಯಲು ನೀರು ಅತ್ಯಂತ ಅವಶ್ಯಕವಾಗಿದೆ. ಕೃಷಿಯಲ್ಲಿ ಬೆಳೆಯನ್ನು ಬೆಳೆಯಲು ಹೆಚ್ಚು ಕೃಷಿ ಉತ್ಪತ್ತಿಯನ್ನು ಮಾಡಬೇಕಾದರೆ ನೀರು ಪ್ರಮುಖವಾಗುತ್ತದೆ. ಉತ್ತಮ ಮಣ್ಣಿನಲ್ಲಿ ಬೆಳೆಗೆ ಬೇಕಾದಷ್ಟು ಪೌಷ್ಠಿಕಾಂಶಗಳು ಇದ್ದರೂ ಬೆಳೆಗಳ ಬೆಳವಣಿಗೆಯು ಚೆನ್ನಾಗಿ ಆಗಲಾರದು ಇವೆರಡರ ಜತೆಗೆ ನೀರಿನ (ತೇವಾಂಶ) ಅತಿ ಅವಶ್ಯಕ ಎಂದು ಹೇಳಬಹುದು. ನೀರಿನ್ನು ಕಲುಶಿತ ಮಾಡುವುದರಿಂದ ಸಕಲ ಜೀವಿಗಳು ನಾಶವಾಗಲು ಕಾರಣವಾಗುತ್ತದೆ. ಸಕಲ ಜೀವಿಗಳು ಉತ್ತಮವಾಗಿ ಇರಲು ಅವಶ್ಯಕವಾಗಿದೆ.

ನೀರಾವರಿ ಕೃಷಿಗೆ ಮಳೆಕೊಯ್ಲು ಮುಖ್ಯವಾಗುತ್ತದೆ. ಮಳೆಕೊಯ್ಲು ಎಂದರೆ ಬಿದ್ದ ನೀರನ್ನು ಭೂಮಿಯಲ್ಲಿ ಇಂಗಿಸುವುದು ವ್ಯರ್ಥವಾಗಿ ಹರಿದು ಹಳ್ಳ ನದಿಗಳ ಮುಖಾಂತರ ಸಮುದ್ರಕ್ಕೆ ಹೋಗುವುದನ್ನು ತಡೆಯುವುದು. ಹೀಗೆ ಮಾಡುವುದರಿಂದ ನೀರು ಹರಿದು ಹೋಗುವಾಗ ಅದರ ಜೊತೆಗೆ ಫಲವತ್ತಾದ ಮಣ್ಣನ್ನು ಸೇರಿಕೊಂಡು ಭೂಮಿಯಲ್ಲಿ ತಗ್ಗು ಉಬ್ಬುಗಳನ್ನು ಮಾಡಿ ಬೆಳೆಗಳಿಗೆ ಹಾನಿ ಉಂಟು ಮಾಡುತ್ತದೆ. ಬಿದ್ದ ಮಳೆ ನೀರು ಸುಮಾರು 75% ರಷ್ಟು ಭೂಮಿಯಲ್ಲಿ ಇಂಗದೆ ಹರಿದು ಹೋಗಿ ಸಮುದ್ರವನ್ನು ಸೇರುವುದು ಎಂದು ತಿಳಿಯಬಹುದು. ಮಳೆ ನೀರನ್ನು ಕೊಯ್ಲು ಮಾಡಿಕೊಂಡರೆ ನೀರಿನ ಅಭಾವವು ಕಡಿಮೆಯಾಗುತ್ತದೆ. ನೀರಾವರಿಯು ಸುಮಾರು 4000 ಸಾವಿರದ ಇತಿಹಾಸವನ್ನು ಹೊಂದಿದೆ. ಭಾರತದಲ್ಲಿ ನೀರಾವರಿಯ ಕಾಮಗಾರಿಗಳಿಗೆ ಪೂರ್ವಕಾಲದಿಂದಲೂ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ ನಮ್ಮ ಕೆರೆಗಳ ಆಣೆಕಟ್ಟುಗಳು ಮತ್ತು ನಾಲೆಗಳ ಇಲ್ಲದೆ ಹೋಗಿದ್ದರೆ ಮಳೆಯನ್ನು ನೆಚ್ಚಲಾಗದ ಈ ದೇಶದ ಅನೇಕ ಭಾಗಗಳಲ್ಲಿ ಬೇಸಾಯವೇ ಸಾಧ್ಯವಾಗುತ್ತಿರಲಿಲ್ಲ.

ನೀರಾವರಿಯ ಉಪಯೋಗ ಮುಖ್ಯವಾಗಿ ಬೆಳೆಯನ್ನು ಹೆಚ್ಚಿರುವುದು ಮತ್ತು ಮಳೆ ಸಾಕಷ್ಟು ಬೀಳದಾಗ ಪೈರನ್ನು ಕಾಪಾಡುವುದು ಈ ಉಪಯೋಗ ಭೂಮಿಯ ಗುಣ, ಬೀಳುವ ಮಳೆ, ವಾಯುಗುಣ ಇವನ್ನು ಅವಲಂಬಿಸಿದೆ. ಕರ್ನಾಟಕದ ಮಲೆನಾಡಿನಲ್ಲಿ ಮಳೆ ಸಮೃದ್ಧಿಯಾಗಿ ಸುರಿದು ನೀರಾಪಿರು ಅವಶ್ಯಕತೆಯೇ ಇಲ್ಲದೇ ಇರಬಹುದು ಇನ್ನು ಕೆಲವು ಕಡೆ ಬೀಳುವ ಮಳೆ ಸಾಮನ್ಯವಾಗಿ ಸಾಕಾದರೂ ಅನಾವೃಷ್ಠಿಯ ಕಾಲದಲ್ಲಿ ತೊಂದರೆ ಆಗಬಹುದು. ಅಥವಾ ಅಕಾಲದಲ್ಲಿ ಬಿದ್ದ ಪೈರಿಗೆ ಉಪಯೋಗವಿಲ್ಲದೆ ಹೋಗಬಹುದು ಬಯಲು ಸೀಮೆಯ ಸತರಿಯ ಪೈರನ್ನು ಬೆಳೆಯಲು ಮಳೆ ಸಾಲದೆ ಖುಷ್ಕಿ ಪೈರನ್ನೇ ಬೆಳೆಯಬೇಕಾಗುತ್ತದೆ.

ಮಲೆನಾಡಿನಲ್ಲಿ ಬೀಳುವ ಮಳೆಯಲ್ಲಿ ಹೆಚ್ಚು ಪಾಲು ನೈರುತ್ಯ ಮಾರುತ ಬೀಸುವಾಗ ಜೂನ್ ತಿಂಗಳಿಂದ ಅಕ್ಟೋಬರಿನ ಮಧ್ಯದ ತನಕವೂ ಸುರಿಯುತ್ತದೆ. ಇದರ ಗಾತ್ರ 450 ಸೇ.ಮೀ ನಿಂದ 635 ಸೇ.ಮೀ ವರೆಗೂ ವ್ಯತ್ಯಾಸವಾಗುತ್ತದೆ. ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ 900 ಸೇ.ಮೀ ಗಿಂತ ಅತಿ ಹೆಚ್ಚು ಮಳೆ ಬೀಳುವುದು ನೋಡಬಹುದು.

ಮಲೆನಾಡು ಅಲ್ಲದ ಪ್ರದೇಶಗಳಲ್ಲಿ ಅಂದರೆ ಬಯಲು ಸೀಮೆಯ ಪ್ರದೇಶಗಳಲ್ಲಿ ಅತೀ ಕಡಿಮೆಯಾದ ಮಳೆಯು ಬೀಳುತ್ತದೆ. ಚಿತ್ರದುರ್ಗ, ದಾವಣಗೆರೆ, ಹಾವೇರಿ, ಉತ್ತರಕನ್ನಡ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಮಳೆಯು ಬೀಳುತ್ತದೆ. ಎಂದು ತಿಳಿಯಬಹುದು. ಸಾಧರಣ ಮಳೆಯ ಮೂಲಕ ಬೆಳೆಯನ್ನು ಬೆಳೆಯಲು ಕಷ್ಟವಾಗುತ್ತದೆ. ಈ ಭಾಗಗಳಲ್ಲಿ ಅನೇಕ ರೀತಿಯ ಬೆಳೆಯನ್ನು ಬೆಳೆಯುತ್ತಾರೆ. ಹತ್ತಿ, ಜೋಳ, ಕಬ್ಬು, ಗೋಧಿ, ರಾಗಿ, ಎಣ್ಣೆಕಾಳುಗಳನ್ನು ನೀರನ್ನು ಮಿತವಾಗಿ ಬಳಸಿ ಅತಿ ಹೆಚ್ಚು ಬೆಳೆಯುತ್ತಾರೆ. ಎಂದು ಹೇಳಬಹುದು.

ನೀರಾವರಿಯನ್ನು ಮುಖ್ಯವಾಗಿ 4 ವಿಧವಾಗಿ ವಿಂಗಡಿಸಬಹುದು.

** ಅಂತರ್ಜಲ ನೀರಾವರಿ

** ಕೆರೆ ನೀರಾವರಿ

** ಕಾಲುವೆ ನೀರಾವರಿ

** ವಿವಿದೋದ್ದೇಶ ಯೋಜನೆಗಳು

**ಅಂತರ್ಜಲ ನೀರಾವರಿ:** ನೆಲದಡಿಯಲ್ಲಿ ಅತಿ ಆಳಗಳಲ್ಲಿ ಹರಿಯುತ್ತಿರುವ ನೀರು ಸೆಳೆಯೇ ಅಂತರ್ಜಳ ಈ ಮೂಲಗಳನ್ನು ನೀರಾವರಿಗೆ ಬಳಸುವುದು ಪ್ರಾಚೀನ ಕಾಲದಿಂದಲೂ ಇರುವ ಒಂದು ವಿಧಾನ. ವ್ಯವಸಾಯಕ್ಕೆ ಅಂತರ್ಜಲದ ಬಳಕೆಯು ನೀರಾವರಿಯಲ್ಲಿ ಪ್ರಮುಖವಾದ ಪಾತ್ರವನ್ನು ಹೊಂದಿದೆ. ಅಂತರ್ಜಲ ಬಳಕೆ ಇದು ಬಯಲುಸೀಮೆಯ ಪ್ರದೇಶದಲ್ಲಿ ಅತಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ ಕೃಷಿಗಳಿಗೆ ಬಾವಿಯನ್ನು ಕೊರೆಸಿ ನೀರನ್ನು ಮೇಲೆತ್ತುವ ಕೃಷಿಯನ್ನು ಅಭಿವೃದ್ಧಿ ಪಡಿಸುತ್ತದೆ.

**ಬಾವಿಗಳಲ್ಲಿ ಎರಡು ಬಗೆಗಳುಂಟು:** 1) ನೆಲೆ ಬಾವಿಗಳು 2) ಕೊಳವೆ ಬಾವಿ. ನೆಲದ ಮೇಲ್ಮೈಯಲ್ಲಿ ನೀರು ದೊರೆಯುವಂತಿದ್ದು ಹೆಚ್ಚು ಆಳವಾದ ಬಾವಿಗಳ ಅಗತ್ಯವಿಲ್ಲ ಎಂದು ಹೇಳಲಾಗಿದೆ. ಆದರೆ ಸಾಕಷ್ಟು ನೀರು ಪಡೆಯಲು ಹೆಚ್ಚು ಆಳಕ್ಕೆ ಹೋಗಲೇ ಬೇಕಾದರೆ ಕೊಳವೆ ಬಾವಿಗಳ ನಿರ್ಮಾಣ ಯುಕ್ತ ಕೊಳವೆಬಾವಿ ಸಾಮಾನ್ಯವಾಗಿ 20 ರಿಂದ ಸುಮರು 150 ಮೀಟರ್ ಆಳದವರೆಗೆ ನಿರ್ಮಾಣವಾಗುತ್ತದೆ. ಕೊಳವೆ ಬಾವಿಗಳಿಂದ ನೀರನ್ನು ಮೇಲೆ ತರಲು ವಿದ್ಯುತ್‌ನ ಸಹಾಯದಿಂದ ಕೆಲಸ ಮಡುವ ಪಂಪ್‌ಗಳ ಬಳಕೆ ಈಗ ಸರ್ವೇ ಸಾಮಾನ್ಯವಾಗಿದೆ. ಬಾವಿಯಿಂದ ಎತ್ತಿದ ನೀರನ್ನು ಸಣ್ಣ ಕಾಲುವೆಗಳ ಮೂಲಕ ಅಥವಾ ಹನಿ ನೀರಾವರಿ ಮತ್ತು ಕೊಳವೆ ಮೂಲಕ ಬೆಳೆಗೆ ಸಿಂಪಾಡಿಸುವುದೇ ಇದರಲ್ಲಿ ಅನುಸರಿಸುವ ವಿಧಾನ.

**ಕೆರೆ ನೀರಾವರಿ:** ನೀರನ್ನು ಸಂಗ್ರಹಿಸಿ ಬೇಸಾಯಕ್ಕೆ ಬಳಸುವ ಸಲುವಾಗಿ ಕೈಗೊಂಡಿರುವ ಕ್ರಮಗಳಲ್ಲಿ ಕೆರೆಗಳ ನಿರ್ಮಾಣ ಮುಖ್ಯವೂ ಹೌದು. ಪ್ರಾಚೀನವೂ ಹೌದು. ಕೆರೆಗಳ ಸಾಮಾನ್ಯವಾಗಿ ಮಣ್ಣಿನ ಏರಿ ಹಾಕಿ ಕಟ್ಟಿದಂತಹವು 4 ರಿಂದ 10 ಹೆಕ್ಟೇರುಗಳು ನೀರು ಒದಗಿಸುವ ಸಣ್ಣದರಿಂದ ಹಿಡಿದು 400, 500 ಎಕರೆಗಳಿಗೆ ನೀರು ಒದಗಿಸುವ ಕೆರೆಗಳು ಕಾಣಸಿಗುತ್ತವೆ. ಸುತ್ತಮುತ್ತಲಿನ ಮಳೆಯ ನೀರು ಹರಿದು ಬಂದು ಸಣ್ಣಕೆರೆಗಳು ನಿರ್ಮಾಣವಾಗುತ್ತವೆ. ನದಿಗೆ ಅಣೆಕಟ್ಟು ಮಾಡಿ ಕಾಲುವೆಗೆ ನೀರು ಬರುವಂತೆ ಮಾಡಿ ಅದರಿಂದ ತುಂಬಿಸುವ ಕೆರೆಗಳು ಉಂಟು ಕೆರೆ ನೀರಾವರಿಯ ಒಂದು ಸಮಸ್ಯೆ ಏನೆಂದರೆ ಮೆಕ್ಕಲು ತುಂಬಿಕೊಳ್ಳುವುದರಿಂದ ಕೆರೆಯಲ್ಲಿ ಶೇಖರಣೆಯಾಗುವ ನೀರಿನ ಗಾತ್ರ ಕಡಿಮೆಯಾಗಿದೆ. ಬೇಸಾಯಕ್ಕೆ ಸಾಕಷ್ಟು ನೀರು ಒದಗುವುದಿಲ್ಲ. ಆಗಾಗ್ಗೆ ಹೂಳೆತ್ತುವ ಮತ್ತು ಏರಿಯನ್ನು ಭದ್ರಗೊಳಿಸುವ ಕೆಲಸ ಮಾಡಬೇಕಾಗುತ್ತದೆ.

**ಕಾಲುವೆ ನೀರಾವರಿ:** ಕಾಲುವೆಗಳಿಂದ ಬೇಸಾಯದ ಭೂಮಿಗೆ ನೀರನ್ನು ಒದಗಿಸುವುದು ಇನ್ನೊಂದು ನೀರಾವರಿ ವಿಧಾನ ನದಿ ಹರಿದುಹೋಗುವಾಗ ಯಾವುದೇ ಸ್ಥಳದಲ್ಲಿ ಪ್ರಯತ್ನವಿಲ್ಲದೆ. ಅಂದರೆ ನದಿಯ ನೀರು ಯಾವ ತಡೆಯನ್ನು ಒಡ್ಡದೆ ಕಾಲುವೆಗೆ ಹೋಗುವಂತಿರಬಹುದು. ಅಂತ ಸ್ಥಳದಿಂದ ಕಾಲುವೆ ಮೂಲಕ ಬೇಸಯಕ್ಕೆ ನೀರನ್ನು ಒದಗಿಸಿಕೊಳ್ಳಬಹುದು. ನದಿಗೆ

ಅಡ್ಡಲಾಗಿ ಸಣ್ಣ ಅಣೆಕಟ್ಟು ಹಾಕಿ ನೀರಿನ ಮಟ್ಟವನ್ನು ಹೆಚ್ಚಿಸಿ ಕಾಲುವೆಗೆ ನೀರು ಹರಿದು ಕೃಷಿ ಬೂಮಿಗೆ ನೀರು ಹರಿಸುವ ಮೂಲಕ ನೀರಾವರಿಸೌಲಭ್ಯ ದೊರಕಿಸುವ ಪ್ರಯತ್ನವನ್ನು ಮಾಡಬಹುದು. ನದಿಯಲ್ಲಿ ನೀರು ಖಾಲಿಯಾಗಿ ಉಳಿದ ಕಾಲದಲ್ಲಿ ವ್ಯವಸಾಯಕ್ಕೆ ನೀರು ಒದಗುವುದಿಲ್ಲ ಆದ್ದರಿಂದ ನೀರಾವರಿ ಸೌಲಭ್ಯವನ್ನು ಇಟ್ಟುಕೊಂಡು ವರ್ಷದ ಅಧಿಕ ಭಾಗದಲ್ಲಿ ಅದರ ಬಳಕೆಯಾಗುವಂತೆ ಮಾಡಲು ವ್ಯವಸ್ಥೆ ಮಡಬೇಕು.


**ವಿವಿದೋದ್ದೇಶ ಯೋಜನೆ:** ನೀರಾವರಿ ಸೌಲಭ್ಯವನ್ನು ಹೆಚ್ಚಿಸುವ ಮೂಲಕ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಹಲವಾರು ಬೃಹತ್ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಯೋಜನೆಗಳು ನೂರಾರು ಕೋಟಿಯ ವೆಚ್ಚದಲ್ಲಿ ನಿರ್ಮಾಣಗಳನ್ನು ಒಳಗೊಂಡಿರುತ್ತದೆ. ಈ ಯೋಜನೆಗಳು ನೀರಾವರಿಯ ಜೊತೆಗೆ ಪ್ರವಾಹ ನಿಯಂತ್ರಣ, ವಿದ್ಯುತ್ ಉತ್ಪಾದನೆ, ಭೂಸಾರ ಸಂರಕ್ಷಣೆ, ವನ್ಯಾಭಿವೃದ್ದಿ ಮೊದಲಾದ ನಾನಾ ರೀತಿಯ ಉದ್ದೇಶಗಳನ್ನು ಓಡೇರಿಸುವುದರಿಂದ ಇವುಗಳನ್ನು ವಿವಿದೋದ್ದೇಶ ಯೋಜನೆ ಎಂದು ಕರೆಯುತ್ತಾರೆ. ನೀರಾವರಿ ಸೌಲಭ್ಯವನ್ನು ಪ್ರತಿಯೊಂದು ನಗರಗಳು ಹಳ್ಳಿಗಳು, ಗ್ರಾಮಗಳು ಹೊಂದಿರುತ್ತವೆ. ಎಂದು ಹೇಳಬಹುದು ನೀರು ಜನರ ಜೀವನ ಮಟ್ಟವನ್ನು ತಿಳಿಸುತ್ತದೆ. ಅದರ ಬಗ್ಗೆ ಅನೇಕ ರೀತಿಯ ನಮ್ಮ ಜನತೆಯು ಉಪಯುಕ್ತ ಮಾಡಿಕೊಳ್ಳುತ್ತಾರೆ. ಜನಸಾಮಾನ್ಯರಿಗೆ ಅಷ್ಟೆ ಅಲ್ಲದೇ ಪ್ರಾಣಿ ಪಕ್ಷಿಗಳಿಗೆ ಸಕಲ ಜೀವರಾಶಿಗಳಿಗೆ ನೀರು ಅತಿ ಮುಖ್ಯವಾಗಿರುತ್ತದೆ. ಎಂದು ಹೇಳಲಾಗುತ್ತದೆ. ಕೆರೆಗಳಲ್ಲಿ ಬಾವಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿರುತ್ತದೆ. ಮತ್ತು ಕಾರ್ಖಾನೆಗಳಿಗೆ ತುಂಬಾ ನೀರಿನ ಅವಶ್ಯಕತೆ ಇದೆ ಇದರಿಂದ ಹಾನಿಯು ಉಂಟಾಗುತ್ತದೆ. ಯಾಕೆಂದರೆ ಕಾರ್ಖಾನೆಗಳಲ್ಲಿ ಬಳಸಿದ ವಿನಾಶಕಾರಿ ನೀರನ್ನು ಭೂಮಿಯ ಮೇಲೆ ಅಥವಾ ಕೆರೆಯ ಮೇಲೆ ಬಿಟ್ಟರೆ ಜಲಚರ ಪ್ರಾಣಿಗಳು ನಾಶವಾಗಲು ಕಾರಣವಾಗುತ್ತದೆ.

ನೀರಾವರಿ ಕೃಷಿಯ ವ್ಯವಸ್ಯೆಗೆ ಅನೇಕ ರೀತಿಯಲ್ಲಿ ಅನುಕೂಲವನ್ನು ಮಾಡುತ್ತದೆ. ಮಳೆಯು ಸರಿಯಾದ ಸಮಯದಲ್ಲಿ ಸಾಧಾರಣವಾಗಿ ಬಂದರೆ ಉತ್ತಮವಾದ ಬೆಳೆಯನ್ನು ಬೆಳೆಯಲು ಅವಕಾಶವಾಗಿರುತ್ತದೆ. ಎಂದು ಹೇಳಬಹುದಾಗಿದೆ. ಅದೇ ರೀತಿ ಅತಿ ಹೆಚ್ಚು ಮಳೆ ಸುರಿದರೆ ಬೆಳೆಗಳು ಹಾನಿಯಾಗುತ್ತವೆ. ಜನರು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅತಿ ಹೆಚ್ಚು ಮಳೆಯಿಂದ ಪ್ರವಾಹ ಉಂಟಾಗುವ ಸಾಧ್ಯತೆಗಳು ಇರುತ್ತವೆ. ಅದರಿಂದ ಜನರು ನೀರಾವರಿ ಯೋಜನೆಯನ್ನು ಅಭಿವೃದ್ಧಿ ಮಾಡಬೇಕಾಗುತ್ತದೆ.

ಅನೇಕ ನೀರಾವರಿಯ ಯೋಜನೆಗಳನ್ನು ಹೊಂದಿದ್ದು ಜನರಿಗೆ ಕೃಷಿಯ ಭೂಮಿಗೆ ಅನುಕೂಲವಾಗುತ್ತವೆ. ಕೊಳವೆ ಬಾವಿಗಳ ಮೂಲಕ ಬೇಸಾಯಕ್ಕೆ ಅನುಕೂಲವಾಗುತ್ತದೆ ಎಂದು ಹೇಳಬಹುದು. ಜನಸಾಮಾನ್ಯರು ನೀರನ್ನು ಮಿತವಾಗಿ ಬಳಸಬೇಕು ಇದು ಮಹತ್ವಪೂರ್ಣ ಅಂಶವಾಗಿದೆ. ನೀರಾವರಿಯು ಅನೇಕ ರೀತಿಯಲ್ಲಿ ಅನುಕೂಲಗಳನ್ನ ಮಾಡುತ್ತದೆ.

ರಾತ್ರಿಯೆಲ್ಲಾ ಜಿಟಿ ಜಿಟಿ ಮಳೆ
ಹೊರಗೆ ಮಳೆ ಬೀಳುತ್ತಿರುವ ಸತತ ಶಬ್ದ
ಭೂದೇವಿಗೆ ಸುಖದ ತಂಪು
"ಎಲ್ಲೆಲ್ಲಿಯ ನೀರು ತುಂಬಿದೆಯ"
ಎಚ್ಚರವೊ ನಿದ್ದೆಯೊ ಅರಿಯದ ಜೊಂಪು
ಬೆಚ್ಚನೆಯ ಬೆಳಗಿನ ನಿದ್ದೆ
ಹೊರಗೆ ಕಿಟಕಿಯ ಹೊರಗೆ ಯಾರೊ ಮಾತನಾಡುತ್ತಿರುವ ಅಸ್ಪಷ್ಟ ಶಬ್ದ
"ನಲ್ಲಿಯಲ್ಲಿ ಇದ್ದ ನೀರಲ್ಲ
ಎಂದು ಬಿಡುವೆನೊ ಗೊತ್ತಿಲ್ಲ"

******



## ವಾರ್ಷಿಕ ವರದಿ 2019–20
## ಸಂಸ್ಕೃತ ವಿಭಾಗ

**ಅಚ್ಯುತ ಅವಧಾನಿ,** ವಿಭಾಗದ ಮುಖ್ಯಸ್ಥರು

